ಮಾರ್ಚ್ 31

## ನೂತನ ಆಕಾಶ, ನೂತನ ಭೂಮಿ!

ಬೆಳಿಗ್ಗೆ : ನ್ಯಾಯ. 11,12,13
ಸಂಜೆ : ಲೂಕ. 6:1–26

“ತರುವಾಯ ನೂತನಾಕಾಶಮಂಡಲವನ್ನೂ, ನೂತನ ಭೂಮಂಡಲವನ್ನೂ ಕಂಡೆನು. ಮೊದಲಿದ್ದ ಆಕಾಶಮಂಡಲವೂ ಮೊದಲಿದ್ದ ಭೂಮಂಡಲವೂ ಇಲ್ಲದೆ ಹೋದವು; ಇನ್ನು ಸಮುದ್ರವೂ ಇಲ್ಲ” (ಪ್ರಕ. 21:1).

ನಿಮ್ಮ ಪ್ರವಾದನಾ ಕಣ್ಣುಗಳು ಕರ್ತನು ನಿಮಗಾಗಿ ಸಿದ್ಧಪಡಿಸಿರುವ ಮಹಿಮೆಯಾದ ನಿವಾಸಗಳನ್ನೂ, ನೂತನಾಕಾಶಮಂಡಲ, ಭೂಮಂಡಲಗಳನ್ನು ಕಾಣಲಿ. ದೇವಜನರಿಗಾಗಿ ಇಟ್ಟಿರುವ ಸ್ವಾಸ್ತ್ಯವನ್ನು ಕಾಣಲಿ. ಆ ಪ್ರಕಾಶಮಾನವಾದ ಬೆಳಕಿನ ರಾಜ್ಯದಲ್ಲಿ ಕರ್ತನಾದ ಯೇಸುಕ್ರಿಸ್ತನೊಂದಿಗೆ ನಾವು ಎಂದೆಂದಿಗೂ ಜೀವಿಸೋಣ. ಇದನ್ನು ಕುರಿತು ಕೀರ್ತನೆಗಾರನು ಹೀಗೆ ಬರೆಯುತ್ತಾನೆ “ನನಗೆ ಪ್ರಾಪ್ತವಾಗಿರುವ ಸ್ವಾಸ್ತ್ಯವು ರಮಣೀಯವಾದದ್ದು. ಅದು ನನಗೆ ಸಂತೃಪ್ತಿಕರವಾಗಿದೆ” (ಕೀರ್ತನೆ. 16:6) ಎಂದು.

ಪ್ರಾಪಂಚಿಕರಿಗೆ ತಮ್ಮ ಮರಣಾನಂತರ ಕಾಲದ ಕುರಿತಾಗಿ ಒಂದು ನಂಬಿಕೆ ಇಲ್ಲ. ಈ ಭೂಮಿ ಯಾವಾಗ ಅಣು ಗುಂಡುಗಳಿಗೆ ಬಲಿಯಾಗಿ ಬೂದಿಯಾಗಿ ಹೋಗುವದೋ ಎಂದು ಭಯದಿಂದಿರುವರು. ಆಕಾಶದಲ್ಲಿರುವ ಓಜೋನ್ ಮಂಡಲ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿರುವದು. ಇದರಿಂದ ಪ್ರಪಂಚದ ಉಷ್ಣ ಅಧಿಕವಾಗಿ ಬಿಡುವದು. ಧ್ರುವ ಪ್ರದೇಶದಲ್ಲಿ ಮಂಜುಗಡ್ಡೆ ಕರಗಿ ಭೂಮಿಯ ಶೀತೋಷ್ಣದ ಸ್ಥಿತಿ ಮಾರ್ಪಟ್ಟಿದೆ. ಲೋಕಾಂತ್ಯ ಕಾಲದ ಎಲ್ಲಾ ಸಂಭವಗಳು ಕಾಣಲ್ಪಡುತ್ತಿರುವದು. ಹಳೆಯಕಾಲದ ಯೆಹೂದ್ಯ ಗುರುಗಳ ಪ್ರಕಾರ ಏಳು ಸಾವಿರ ವರುಷಗಳ ಅಂತ್ಯದಲ್ಲಿ ಕರ್ತನು ಆಕಾಶವನ್ನೂ, ಭೂಮಿಯನ್ನೂ ನವೀಕರಿಸುವನು ಎಂದು ನಂಬುವರು. ಹಿಂದುಗಳು ಕಲಿಯುಗ ಮುಗಿದು ಹೋಗುವದು ಎಂಬ ನಂಬಿಕೆಯಿಂದ ಇರುವರು. ಮುಸಲ್ಮಾನರಲ್ಲಿ ಗುರುವಾದ ಯೇಸು ಬರುವನು. ಆಗ ಪ್ರಪಂಚಕ್ಕೆ ಅಂತ್ಯ ಬರುವದು ಎಂದು ಹೇಳುವರು. ಹಲವರಿಗೆ ಮುಂದಿನ ಕಾಲದ ಕುರಿತು ಭಯವಿರುವಾಗ ಮದುವಣಗಿತ್ತಿಯಾದ ಸಭೆ ಗುಣಶೀಲೆಯಾದ ಸ್ತ್ರೀಯಂತೆ ತನ್ನ ಭವಿಷ್ಯತ್ತಿನ ಕುರಿತು ಭಯವಿಲ್ಲದೆ ನಗುತ್ತಿರುವಳು” ಎಂದು ಸತ್ಯವೇದ ಹೇಳುತ್ತದೆ (ಜ್ಞಾನೋ.31:25).

ದೇವಜನರೇ, ನೋಹನ ಕಾಲದಲ್ಲಿ ಜಲಪ್ರಳಯದ ಮೂಲಕ ನಾಶ ಅಕ್ರಮಕಾರರನ್ನು ನಾಶಮಾಡಿದಾಗ, ಅವನು ಅವನ ಕುಟುಂಬದವರು ಒಂದು ಹೊಸ ಭೂಮಿ ಅಲ್ಲ, ಶಾಪಕ್ಕೀಡಾದ ಹಳೆಯ ಭೂಮಿಯಾಗಿತ್ತು. ಆದರೆ ಕ್ರಿಸ್ತನು ನಮಗಾಗಿ ಸ್ಥಾಪಿಸುವಂಥ ಭೂಮಿಯೋ, ನೂತನವಾದದ್ದು. ಪ್ರವಾದಿಯಾದ ಯೆರೆಮೀಯನು ಹೇಳುವನು “ಇಗೋ, ನೂತನಾಕಾಶಮಂಡಲವನ್ನು, ನೂತನ ಭೂಮಂಡಲವನ್ನೂ ಸೃಷ್ಟಿಸುವೆನು. ಮೊದಲಿನದ್ದನ್ನು ಯಾರೂ ಜ್ಞಾಪಿಸಿಕೊಳ್ಳರು. ಅದು ನೆನಪಿಗೆ ಬಾರದು” ಎಂದು (ಯೆಶಾ. 65:17).

*ನೆನಪಿಗೆ : “ನಾನು ಸೃಷ್ಟಿಸುವ ನೂತನಾಕಾಶ ಮಂಡಲವೂ, ನೂತನ ಭೂಮಂಡಲವೂ ನನ್ನ ಮುಂದೆ ಸ್ಥಿರವಾಗಿ ನಿಲ್ಲುವ ಪ್ರಕಾರ, ನಿಮ್ಮ ಸಂತತಿಯೂ, ನಿಮ್ಮ ಹೆಸರೂ ಸ್ಥಿರವಾಗಿ ನಿಲ್ಲುವವು” (ಯೆಶಾ.66:22).*



# ಅನುದಿನದ ಆಹಾರ

## ANUDHINADA AHARA - MARCH 2015

ಮಾರ್ಚ್–2015

ಮರ–16 ಹಣ್ಣು –3 Tree -16 Fruit - 3

## ಒಳ್ಳೆಯ ಮಾದರಿಯಾದ ದಾನಿಯೇಲ!

ಸತ್ಯವೇದದಲ್ಲಿ ಹಳೆಯ ಒಡಂಬಡಿಕೆಯಲ್ಲಿ ಕಂಡುಬರುವ ಹದಿನಾರು ಪ್ರವಾದನಾಗ್ರಂಥಗಳಲ್ಲಿ ನಾಲ್ಕು ಪ್ರವಾದನೆಗಳು ದೊಡ್ಡ ಪ್ರವಾದಿಗಳಾದ ಯೆಶಾಯ, ಯೆರೆಮೀಯ, ಯೆಹೆಜ್ಕೇಲ, ದಾನಿಯೇಲ ಇವರಿಂದ ಬರೆಯಲ್ಪಟ್ಟವುಗಳು.

ದಾನಿಯೇಲನ ತಂದೆ ತಾಯಿಗಳ ಕುರಿತಾಗಲೀ, ಇಸ್ರಾಯೇಲ್ ದೇಶದಲ್ಲಿ ಯಾವ ಭಾಗದಲ್ಲಿ ಜೀವಿಸುತ್ತಿದ್ದನೆಂಬ ವಿವರಣೆಯಾಗಲಿ ಲಭ್ಯವಿಲ್ಲ. ಆದರೆ ದಾನಿಯೇಲನ ಸ್ವಭಾವ, ಗುಣ ಇವುಗಳನ್ನು ನೋಡುವಾಗ ಅವನ ತಂದೆ ತಾಯಿಗಳು ಅವನನ್ನು ಸನ್ಮಾರ್ಗದಲ್ಲಿಯೂ, ದೈವಭಕ್ತಿಯಲ್ಲಿಯೂ, ಬೆಳೆಸಿರುವರೆಂಬ ಸಂಗತಿ ಕಂಡುಬರುವದು. ದೇವರ ವಾಕ್ಯಗಳನ್ನು ಯೆಹೋವನ ಧರ್ಮಶಾಸ್ತ್ರದ ಕಟ್ಟಳೆಗಳನ್ನು ಕಲಿಸಿಕೊಟ್ಟಿದ್ದರೆಂಬುದು ಸ್ಪಷ್ಟವಾಗಿ ಕಂಡುಬರುವದು. ದಾನಿಯೇಲನ ಚರಿತ್ರೆ ಹಾಗೂ ಆತನ ಪ್ರವಾದನೆ, ದೇವಜನರಿಗೆ ನಿರೀಕ್ಷೆ ಮತ್ತು ಪ್ರೋತ್ಸಾಹವನ್ನು ಕೊಡುವಂಥದ್ದಾಗಿದೆ. ಈತನ ಜೀವಿತ ನಮಗೆ ಮಾದರಿಯಾಗಿದೆ. ದಾನಿಯೇಲನ ಗ್ರಂಥ ಹಾಗೂ ಹೊಸ ಒಡಂಬಡಿಕೆಯಲ್ಲಿ ಕಂಡುಬರುವ ಕ್ರಿಸ್ತಯೇಸುವಿನ ಪ್ರಿಯ ಶಿಷ್ಯನಾದ ಯೋಹಾನನು ಪತ್ಮೋಸ್ ದ್ವೀಪದಲ್ಲಿ ಸೆರೆಯಲ್ಲಿದ್ದಾಗ ಬರೆದ ಪ್ರಕಟನೆಯ ಗ್ರಂಥ ಇವೆರಡನ್ನೂ ತಾಳೆ ಹಾಕಿ ನೋಡುವಾಗ ಇಬ್ಬರು ಕಂಡ ದರ್ಶನಗಳೂ, ಕ್ರಿಸ್ತನ ಎರಡನೇ ಬರೋಣದ ಸಮಯದಲ್ಲಿ ಲೋಕಾಂತ್ಯದಲ್ಲಿ ನಡೆಯುವ ಘಟನೆಗಳ ಕುರಿತು ಒಂದೇ ರೀತಿಯಾಗಿ ಬರೆಯಲ್ಪಟ್ಟಿರುವದನ್ನು ಕಾಣಬಹುದು.

ಯೆರೂಸಲೇಮಿನಿಂದ ಬ್ಯಾಬಿಲೋನ್ ದೇಶಕ್ಕೆ ಸೆರೆ ಒಯ್ಯಲ್ಪಟ್ಟಾಗ ದಾನಿಯೇಲನಿಗೆ ಹದಿನಾರು ವರುಷಗಳು. ‘ಯೆರೂಸಲೇಮ್’ ಅಂದರೆ ಸಮಾಧಾನದ ನಗರ. ‘ಬ್ಯಾಬಿಲೋನ್’ ಎಂದರೆ ಕಷ್ಟ ಸಂಕಟಗಳ ನಗರವೆಂದು ಅರ್ಥ. ಯೆರೂಸಲೇಮಿನಿಂದ ಬ್ಯಾಬಿಲೋನ್ ಸುಮಾರು 560 ಕಿ.ಮೀ. ದೂರದ ಪ್ರಯಾಣ.

ಆ ಕಾಲದಲ್ಲಿ ಸೆರೆಯಾಳುಗಳನ್ನು ಸರಪಣಿಗಳಿಂದ ಕಟ್ಟಿ ಕಾಲ್ನಡಿಗೆಯಲ್ಲಿ ಎಳೆದುಕೊಂಡು ಹೋಗುತ್ತಿದ್ದರು. ಇಂಥಹ ಎಲ್ಲಾ ಸನ್ನಿವೇಶಗಳಲ್ಲಿಯೂ ದಾನಿಯೇಲನು ತಾನು ನಂಬಿದ ಏಕದೇವರ ಕುರಿತಾಗಿ ಗುಣಗುಟ್ಟಲಿಲ್ಲ. ಈ ಎಲ್ಲಾ ಕಷ್ಟಗಳ ನಡುವೆಯೂ ಭಕ್ತಿ ವೈರಾಗ್ಯದಿಂದ ಕೂಡಿದವನಾಗಿದ್ದನು. ದಾನಿಯೇಲನು ಬ್ಯಾಬಿಲೋನಿಗೆ ಬಂದಾಗ ಬ್ಯಾಬಿಲೋನಿನ ನಾಗರಿಕತೆ, ಆಚಾರ ವಿಚಾರಗಳು, ಧಾರ್ಮಿಕ ಪದ್ಧತಿಗಳು ಎಲ್ಲಾ ತಲೆಕೆಳಗಾಗಿ ಅವನಿಗೆ ಕಂಡುಬಂದಿತು. ಅವರ ಆಚಾರ ಪದ್ಧತಿಗಳಲ್ಲಿ ತಾನು ಬೆರೆತುಹೋಗದಂತೆ ತನ್ನ ವ್ಯಕ್ತಿತ್ವವನ್ನು ಕಾಪಾಡಿಕೊಂಡನು. ತನ್ನ ಮೂಲಪಿತೃಗಳು ಬೋಧಿಸಿದ ಬೋಧನೆಗಳನ್ನು ದೃಢವಾಗಿ ಹಿಡಿದುಕೊಂಡು ಕರ್ತನಿಗಾಗಿ ದೃಢವಾಗಿ ನಿಲ್ಲಲು ಅವನು ವೈರಾಗ್ಯವುಳ್ಳವನಾಗಿದ್ದನು.

ದಾನಿಯೇಲ ಅವನ ಮೂಲದವರು ಸ್ನೇಹಿತರಾದ ಶದ್ರಕ್, ಮೇಷಕ್, ಅಬಿದ್ನೆಗೋರನ್ನು ಸನ್ನಿಧಿ ಸೇವೆಗೆಂದು ಆರಿಸಿದಾಗ, ಕಂಚುಕಿಯರ ಅಧ್ಯಕ್ಷನು ಅವರಿಗೆ ರಾಜಭೋಜನವನ್ನೂ, ದ್ರಾಕ್ಷಾರಸವನ್ನೂ, ಆಹಾರವಾಗಿ ನೀಡಿದಾಗ ದಾನಿಯೇಲನು ಅವುಗಳನ್ನು ತಿಂದು ತಾನು ಅಶುದ್ಧನಾಗಲಾರೆನು ಎಂದು ಹೇಳಿದಾಗ, ದೇವರು ಕಂಚುಕಿಯ ಅಧ್ಯಕ್ಷನ ಮನಸ್ಸಿನಲ್ಲಿ ದಾನಿಯೇಲನ ಮೇಲೆ ಕನಿಕರವನ್ನೂ ದಯೆಯನ್ನೂ ಹುಟ್ಟಿಸಿದನು. ತನಗೆ ಬಂದ ಎಲ್ಲಾ ಶೋಧನೆಗಳಲ್ಲಿಯೂ ಕರ್ತನಿಗಾಗಿಯೂ, ಪರಿಶುದ್ಧತೆಗಾಗಿಯೂ, ಭಕ್ತಿವೈರಾಗ್ಯದಿಂದ ದೃಢವಾಗಿ ನಿಂತನು. ಸ್ವಪ್ನಗಳಿಗೆ ಅರ್ಥವನ್ನು ಹೇಳುವ ಕೃಪೆ ಅವನಿಗೆ ದೇವರಿಂದ ಕೊಡಲ್ಪಟ್ಟಿತ್ತು. ಬ್ಯಾಬಿಲೋನಿನ ಅರಸರ ಕನಸುಗಳಿಗೆ ಆ ದೇಶದ ವಿದ್ವಾಂಸರೂ, ಪಂಡಿತರೂ, ಅರ್ಥ ಹೇಳಲಾದಾಗ, ದಾನಿಯೇಲನು ಅವುಗಳ ಗುಂಜುಗಂಟುಗಳನ್ನು ಬಿಡಿಸಿ ಮುಂದೆ ಸಂಭವಿಸುವ ಸಂಗತಿಗಳನ್ನು ಕುರಿತು ತಿಳಿಸಿದಾಗ ಅರಸನು ಅವನನ್ನು ತನ್ನ ರಾಜ್ಯದ ಉನ್ನತಾಧಿಕಾರಿಯಾಗಿ ನೇಮಿಸಿದನು. ತಗ್ಗಿದ ಹೃದಯವುಳ್ಳವರನ್ನು ಕರ್ತನು ಉನ್ನತಿಗೆ ತರುವನು. ದಾನಿಯೇಲನು ಬ್ಯಾಬಿಲೋನಿಗೆ ಹೋದರೂ ತನ್ನೊಳಗೆ ಯೆರೂಸಲೇಮನ್ನೂ, ಇಸ್ರಾಯೇಲಿನ ದೇವರನ್ನು ಸದಾ ಇಟ್ಟುಕೊಂಡಿದ್ದನು.

ದಾನಿಯೇಲನಿಗೆ ಶತ್ರುಗಳು ಇದ್ದರು. ಅವನ ಉನ್ನತಿಯನ್ನು ಸಹಿಸದಾದ ಅವನ ಸಹೋದ್ಯೋಗಿಗಳು ಅವನನ್ನು ಹೇಗಾದರೂ ರಾಜದಂಡನೆಗೆ ಒಳಪಡಿಸಬೇಕೆಂದು ಹೊಂಚುಹಾಕುತ್ತಿದ್ದರು. ಅವನ ಕೆಲಸ ಕಾರ್ಯಗಳಲ್ಲಿ ಅವರಿಗೆ ತಪ್ಪು ಕಂಡುಹಿಡಿಯಲು ಆಗಲಿಲ್ಲ. ಕೊನೆಗೆ ಅವರು ಇವನಲ್ಲಿ ದೇವಧರ್ಮದ ಮೂಲಕವೇ ಹೊರತು



ಇನ್ನಾವದರಲ್ಲಿಯೂ ನಮಗೆ ಅವಕಾಶ ಸಿಕ್ಕದು ಎಂದು ತಿಳಿದು ತಂತ್ರದ ಒಂದು ಬಲೆ ಬೀಸಿದರು. ಅರಸನಾದ ದಾರ್ಯಾವೆಷನ ಕಾಲದಲ್ಲಿ ಮುಖ್ಯಾಧಿಕಾರಿಗಳು ದೇಶಾಧಿಪತಿಗಳೂ, ರಾಜನ ಬಳಿ ಬಂದು ಅರಸನೇ ಯಾವನಾದರೂ ಮೂವತ್ತು ದಿನಗಳ ತನಕ ರಾಜನಾದ ನಿನಗೆ ಹೊರತು ಬೇರೆ ಯಾವ ದೇವರಿಗಾಗಲಿ ಮನುಷ್ಯನಿಗಾಗಲಿ ವಿಜ್ಞಾಪನೆ ಮಾಡಿಕೊಂಡರೆ ಅವನು ಸಿಂಹದ ಗವಿಯಲ್ಲಿ ಹಾಕಲ್ಪಡಬೇಕು ಎಂದು ರಾಜಾಜ್ಞೆ ಹೊರಡಿಸಬೇಕೆಂದು ವಿಜ್ಞಾಪನೆ ಮಾಡಿಕೊಂಡರು. ರಾಜನು ಅವರ ಮಾತಿನಂತೆ ಆಜ್ಞೆಯನ್ನು ಹೊರಡಿಸಿ ಆ ನಿಬಂಧನ ಶಾಸನಕ್ಕೆ ರುಜು ಹಾಕಿದನು. ದಾನಿಯೇಲನು ರಾಜನ ಈ ಶಾಸನ ವಿಷಯ ತಿಳಿದಾಗ, ಅವನು ತನ್ನ ಮನೆಗೆ ಹೋಗಿ ಯೆರೂಸಲೇಮಿನ ಕಡೆಗೆ ತನ್ನ ಕದವಿಲ್ಲದ ಕಿಟಕಿಗಳುಳ್ಳ ತನ್ನ ಮಹಡಿಯ ಕೋಣೆಯಲ್ಲಿ ಯಥಾಪ್ರಕಾರ ದಿನಕ್ಕೆ ಮೂರಾವರ್ತಿ ಮೊಣಕಾಲೂರಿ ತನ್ನ ದೇವರಿಗೆ ಪ್ರಾರ್ಥನೆ ಮಾಡಿ ಸ್ತೋತ್ರ ಸಲ್ಲಿಸಿದನು. ಜನರು ದಾನಿಯೇಲನು ದೇವರಿಗೆ ಪ್ರಾರ್ಥಿಸಿದ್ದನ್ನು ಕಂಡು ರಾಜನ ಬಳಿ ಬಂದು ದಾನಿಯೇಲನು ರಾಜಶಾಸನಕ್ಕೆ ವಿರೋಧವಾಗಿ ತನ್ನ ದೇವರಿಗೆ ವಿಜ್ಞಾಪನೆ ಸಲ್ಲಿಸಿದ ಕುರಿತು ದೂರು ಹೊರಿಸಲು ತನ್ನ ಆಜ್ಞೆಯನ್ನು ರದ್ದುಪಡಿಸಲಾಗದ ಸ್ಥಿತಿಯಲ್ಲಿದ್ದ ಅರಸನು ದಾನಿಯೇಲನನ್ನು ಸಿಂಹಗಳ ಗವಿಯಲ್ಲಿ ಒಲ್ಲದ ಮನಸ್ಸಿನಿಂದ ಹಾಕಿಸಿದಾಗ ಕರ್ತನು ಸಿಂಹಗಳ ಬಾಯನ್ನು ಕಟ್ಟಿಹಾಕಿ ದಾನಿಯೇಲನನ್ನು ರಕ್ಷಿಸಿದನು. ಆಗ ಅರಸನು ದಾನಿಯೇಲನ ದೇವರಿಗೆ ಸಕಲ ಕುಲ ಭಾಷೆ ಜನಾಂಗದವರು ಭಯಭಕ್ತಿಯಿಂದ ನಡೆದುಕೊಳ್ಳಬೇಕೆಂದು ಪತ್ರ ಬರೆಯಿಸಿದನು. ದಾನಿಯೇಲನಿಗೆ ವಿರೋಧವಾಗಿ ತಂತ್ರ ರೂಪಿಸಿದವರನ್ನು ಸಿಂಹಗಳ ಗವಿಗೆ ಹಾಕಿಸಿದನು.

ದಾನಿಯೇಲನ ಜೀವಿತ ಹಾಗೂ ಅವನ ಪ್ರವಾದನಾಗ್ರಂಥ ಓದುವಾಗ ಒಂದು ನೂತನವಾದ ನಂಬಿಕೆಯ ಬೆಳಕು ನಿಮ್ಮ ಹೃದಯಗಳಲ್ಲಿ ಪ್ರವೇಶಿಸುವದು ನಿಮ್ಮ ಸೋಲುಗಳನ್ನು ಗೆಲುವಾಗಿ ಮಾರ್ಪಡಿಸಿಕೊಳ್ಳಲು ನಿಮ್ಮನ್ನು ಉತ್ತೇಜನಗೊಳಿಸುವದು.

## ವಾಗ್ದಾನ ವಚನ – ಹೋಶೇಯ 6:3

ಯೆಹೋವನನ್ನು ತಿಳಿದುಕೊಳ್ಳೋಣ; ಹುಡುಕಿ ಹುಡುಕಿ ತಿಳಿದುಕೊಳ್ಳೋಣ; ಆತನ ಆಗಮನವು ಉದಯದಂತೆ ನಿಶ್ಚಯ. ಆತನು ಮುಂಗಾರಿನಂತೆಯೂ, ಭೂಮಿಯನ್ನು ತಂಪುಮಾಡುವ ಹಿಂಗಾರಿನಂತೆಯೂ ನಮಗೆ ಸಿಕ್ಕುವನು.

# ಕರ್ನಾಟಕದ ಗ್ರಾಮಗಳಲ್ಲಿ ಆಲಯ
## (KARNATAKA VILLAGE CHURCHES)

ಕರ್ತನು ಈ ಕೊನೆಯ ಕೃಪೆಯ ಕಾಲದಲ್ಲಿ ಜೀವಿಸುತ್ತಿರುವ ನಮಗೆ ಕರ್ನಾಟಕದ ಉಜ್ಜೀವನಕ್ಕಾಗಿ ಶ್ರಮಿಸುವ ಸೌಭಾಗ್ಯವನ್ನು ನೀಡಿರುವನು. ಅದನ್ನು ನಾವು ಆತ್ಮಭಾರದೊಂದಿಗೆ ನೆರವೇರಿಸಬೇಕಾಗಿದೆ.

ಇಂದು ಕರ್ನಾಟಕದ ಬಹಳಷ್ಟು ಹಳ್ಳಿಗಳಲ್ಲಿ ವಿಶ್ವಾಸಿಗಳು ಸಭೆಯಾಗಿ ಸೇರಿ ಕರ್ತನನ್ನು ಆರಾಧಿಸಲು ದೇವಾಲಯಗಳಿಲ್ಲ. ಈ ನಿಟ್ಟಿನಲ್ಲಿ ಅನುದಿನದ ಆಹಾರ ಸಂಸ್ಥೆಯು ಗ್ರಾಮಗಳಲ್ಲಿ ಆಲಯಗಳನ್ನು ನಿರ್ಮಿಸಿಕೊಡುವ ಮಹತ್ತರವಾದ ಕಾರ್ಯವನ್ನು ಕೈಗೊಂಡಿದೆ. ಇದಕ್ಕೆ ನಿಮ್ಮ ಪ್ರಾರ್ಥನೆ ಮತ್ತು ಪ್ರೋತ್ಸಾಹ ಬಹಳಷ್ಟು ಅಗತ್ಯವಿದೆ.

* ಕರ್ನಾಟಕದೆಲ್ಲೆಡೆ ಹೆಚ್ಚಾಗಿ ಸಭೆಗಳು ಕಟ್ಟಲ್ಪಡಲಿ ಎಂದು ಪ್ರಾರ್ಥಿಸಿರಿ.
* ಅನುದಿನದ ಆಹಾರ ಸಂಸ್ಥೆಯು ಈಗಾಗಲೇ ಅನೇಕ ಸಭೆಗಳನ್ನು ಕಟ್ಟಲು ಕರ್ತನು ಕೃಪೆ ನೀಡಿರುವನು, ಅದಕ್ಕಾಗಿ ಕರ್ತನನ್ನು ಸ್ತುತಿಸಿರಿ.
* 2015ರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಭೆಗಳನ್ನು ಕಟ್ಟಲು ಕರ್ತನು ಭಾರವನ್ನು ನೀಡಿದ್ದಾನೆ. ಇದಕ್ಕಾಗಿ ನೀವು ದಾಹದಿಂದ ಪ್ರಾರ್ಥಿಸಿರಿ.
* ಸಭೆಗಳು ಕಟ್ಟಲ್ಪಡಲು ಜನರು ಮುಂದೆ ಬಂದು ದಾಹವುಳ್ಳ ಹೃದಯದಿಂದ ಪ್ರೋತ್ಸಾಹವನ್ನು ನೀಡಲು ಪ್ರಾರ್ಥಿಸಿರಿ.
* ಗ್ರಾಮಗಳಲ್ಲಿ ಒಂದು ದೇವಾಲಯವನ್ನು ನಿರ್ಮಿಸಲು 2 $^{1}/_{2}$ ಯಿಂದ 3 ಲಕ್ಷ ರೂಗಳು ಬೇಕಾಗುತ್ತದೆ. ಈ ಅಗತ್ಯತೆಗಳು ಪೂರೈಸಲ್ಪಡುವಂತೆ ಪ್ರಾರ್ಥಿಸಿರಿ. ನಿಮ್ಮ ಉದಾರವಾದ ಕಾಣಿಕೆಗಳನ್ನು ಬಿತ್ತಿರಿ.

*ಬನ್ನಿರಿ ನಾವೆಲ್ಲರೂ ಒಟ್ಟಾಗಿ ಸೇರಿ ಕರ್ತನ ನಾಮದ ಮಹಿಮೆಗಾಗಿ ಶ್ರಮಿಸೋಣ, ಕರ್ನಾಟಕವನ್ನು ಉಜ್ಜೀವನಕ್ಕೆ ನಡೆಸೋಣ.*

### ಶಿಲುಬೆಯಲ್ಲಿ ಜಡಿಯಲ್ಪಡಬೇಕಾದವು

1. ಪೂರ್ವ ಸ್ವಭಾವ (ಹಳೆಯ ಮನುಷ್ಯ) (ರೋಮಾ 6:6) (ಗಲಾ.2:20).
2. ಶರೀರ ಭಾವ – (ಗಲಾ. 5:24).
3. ಲೋಕ – (ಗಲಾ. 6:14).

ದೇವಮಗುವೇ ಇವುಗಳನ್ನು ನೀನು ಶಿಲುಬೆಗೆ ಹಾಕಿರುವೆಯಾ?



# ಶತ್ರುವಿಗೂ ಪ್ರೀತಿ!

ಒಬ್ಬ ಕ್ರೈಸ್ತ ಬಾಲಕಿ, ಅಂಗಡಿಯಿಂದ ಎರಡು ಚಿಕ್ಕ ಕೋಳಿ ಮರಿಗಳನ್ನು ಕೊಂಡು ತಂದು ಸಾಕಲಾರಂಭಿಸಿದಳು. ಅವುಗಳಿಗೆ ಬೇಕಾದ ಕಾಳು, ಕಡ್ಡಿ, ಧಾನ್ಯಗಳನ್ನು ತನ್ನ ಖರ್ಚಿಗೆಂದು ಕೊಡುತ್ತಿದ್ದ ಸ್ವಲ್ಪ ಹಣದಿಂದಲೇ ಕೊಂಡುತಂದು ಪೋಷಿಸುತ್ತಿದ್ದಳು. ಆ ಕೋಳಿಮರಿಗಳೂ ಅವಳ ಹಿಂದೆ ಮುಂದೆ ಸುತ್ತಾಡುತ್ತಾ ಇದ್ದವು. ಕ್ರಮೇಣ ಅವು ದಷ್ಟಪುಷ್ಟವಾಗಿ ಬೆಳೆಯಲಾರಂಭಿಸಿದವು.

ಒಂದು ದಿನ ಆ ಕೋಳಿ ಮರಿಗಳು ಪಕ್ಕದ ಮನೆಯ ಬೇಲಿಯೊಳಗೆ ನುಗ್ಗಿ ಮೇಯಲಾರಂಭಿಸಿದವು. ಆ ಮನೆಯ ಯಜಮಾನನೋ ಬಹು ಮುಂಗೋಪಿ. ಆ ಎರಡು ಮರಿಗಳ ಕತ್ತು ಹಿಡಿದು ತಿರುಗಿಸಿ ಬೇಲಿಯಿಂದ ಹೊರಗೆ ಎಸೆದುಬಿಟ್ಟನು. ಅವು ಸತ್ತುಹೋದವು. ಅವುಗಳನ್ನು ಸಾಕಿದ ಬಾಲಕಿಯ ದುಃಖ ಹೇಳತೀರದು. ಆದರೂ ಅವಳು ಆ ಸತ್ತ ಕೋಳಿಗಳನ್ನು ತನ್ನ ತಾಯಿ ಬಳಿಗೆ ತಂದುಕೊಟ್ಟು ಅದನ್ನು ಅಡಿಗೆ ಮಾಡುವಂತೆ ಹೇಳಿದಳು. ಅವಳ ತಾಯಿ ಅವುಗಳ ಮಾಂಸವನ್ನು ಅಡಿಗೆ ಮಾಡಿದ ಮೇಲೆ ಆ ಹುಡುಗಿ ಅದನ್ನು ತೆಗೆದುಕೊಂಡು ನೆರೆಮನೆಯ ಯಜಮಾನನಿಗೆ ನೀಡಿ, ನೀವು ಬಹಳ ಹಸಿದಿರಬಹುದು ನಿಮಗೆ ಊಟ ನೀಡುವಂತೆ ನನ್ನ ದೇವರು ಹೇಳಿರುವನು ಅಂದಳು. ಬಾಲಕಿಯ ಮಾತನ್ನು ಕೇಳಿದ ನೆರೆಮನೆಯ ಯಜಮಾನನ ಹೃದಯಕ್ಕೆ ಚಮ್ಮಟಿಕೆಯಿಂದ ಹೊಡೆದಂತಾಯಿತು. ಅವನು ತಲೆ ತಗ್ಗಿಸಿದ್ದು ಮಾತ್ರವಲ್ಲ, ಬಿಕ್ಕಿ ಬಿಕ್ಕಿ ಅತ್ತನು. ಹೌದು ಆ ಬಾಲಕಿಯ ಕಾರ್ಯ ಮನಮಾರ್ಪಡುವಿಕೆಯನ್ನು ಅವನಲ್ಲಿ ತಂದಿತು.

### ಅಂತರಂಗದಲ್ಲಿಟ್ಟು ಕಾಪಾಡಬೇಕಾದ ಜ್ಞಾನಬೋಧೆ

1. ದುಡ್ಡಿನಾಸೆಯಿಂದ ದುಡಿಯಬೇಡ (ಜ್ಞಾನೋ. 23:4).
2. ಸ್ವಬುದ್ಧಿಯನ್ನೇ ಆಶ್ರಯಿಸಬೇಡ (ಜ್ಞಾನೋ. 23:4).
3. ಲೋಭಿಯ ಅನ್ನವನ್ನು ಉಣ್ಣದಿರು (ಜ್ಞಾನೋ. 23:6).
4. ಹುಡುಗನ ಶಿಕ್ಷೆಗೆ ಹಿಂತೆಗೆಯಬೇಡ (ಜ್ಞಾನೋ. 23:13).
5. ಕುಡುಕರಲ್ಲಿಯೂ ಅತಿಮಾಂಸಭಕ್ಷಕರಲ್ಲಿಯೂ ಸೇರದಿರು (ಜ್ಞಾನೋ. 23.20).

# ಎಲ್ಲವನ್ನೂ ಸಹಿಸುವದು!

ಕ್ರಿಸ್ತನು ತನ್ನ ಪ್ರೀತಿಯ ನಿಮಿತ್ತ ಶಮೆಯನ್ನು ಹೇಗೆ ಸಹಿಸಿದನು ಎಂಬುದನ್ನು ಆಫ್ರಿಕಾದಲ್ಲಿದ್ದ ಒಬ್ಬ ಮಿಶನರಿ ಹೇಳಲಾರಂಭಿಸಿದಾಗ, ಒಬ್ಬ ಯೌವನಸ್ಥ ನೀಗ್ರೋ ಹೆಣ್ಣುಮಗಳು ಅಳುತ್ತಾ ಹೊರಗೆ ಓಡಿದಳು. ಕೂಟ ಮುಗಿದಾಗ ಅವಳು ಕೈತುಂಬ ಹಣದೊಂದಿಗೆ ಹಿಂದಿರುಗಿಬಂದಳು. ಅದನ್ನು ಮಿಶನರಿಯವರಿಗೆ ನೀಡಿ "ನನಗಾಗಿ ರಕ್ತ ಚೆಲ್ಲಿದ ಯೇಸುವಿಗೆ ಈ ಹಣವನ್ನೆಲ್ಲಾ ಕಾಣಿಕೆಯಾಗಿ ಸ್ವೀಕರಿಸಿರಿ" ಎಂದಳು.

ಮಿಶನರಿ ಆ ಹಣವನ್ನು ತೆಗೆದುಕೊಳ್ಳಲು ಆತಂಕಗೊಂಡರು. "ಈ ಹೆಣ್ಣು ಮಗಳು ಬಡವಿ, ಕಾಣಿಕೆಯಾಗಿ ಚಿಲ್ಲರೆ ಕಾಸನ್ನೂ ಕೊಡಲು ಸಾಧ್ಯವಾಗದಂಥ ಬಡತನ" ಎಂದು ಯೋಚಿಸಿದರು. ಆಗ ಆ ಹೆಣ್ಣು ಮಗಳು "ಅಯ್ಯಾ, ನೀವು ಯೇಸು ನಮ್ಮ ಮೇಲೆ ಪ್ರೀತಿ ಇಟ್ಟು ದಾಸನ ರೂಪವನ್ನು ಧರಿಸಿದನು ಎಂದು ಹೇಳಿದಿರಿ. ಇದನ್ನು ನಾನು ಸಹಿಸಲಾರದಾದೆನು. ಕೂಡಲೆ ನಾನು ಹೋಗಿ ಎಣ್ಣೆ ತೋಟದ ಯಜಮಾನನ ಬಳಿ ಜೀವಿತಕಾಲವೆಲ್ಲಾ ನನ್ನನ್ನೇ ದಾಸಿಯಾಗಿ ಮಾರಿಬಿಟ್ಟೆನು. ಅದಕ್ಕೆ ಪ್ರತಿಯಾಗಿ ದೊರೆತ ಹಣ ಇದು!" ಎಂದು ಹೇಳಿದಳು. ಮಿಶನರಿಯ ಕಣ್ಣುಗಳಲ್ಲಿ ನೀರು ತುಂಬಿತು. ಆಗ ಆತನು "ಅಮ್ಮಾ, ನಾನು ಇಂಗ್ಲೆಂಡ್ ದೇಶವನ್ನು ಬಿಟ್ಟು ಮಿಶನರಿಯಾಗಿ ಆಫ್ರಿಕಾ ದೇಶಕ್ಕೆ ಬಂದದ್ದೇ ದೊಡ್ಡ ತ್ಯಾಗವೆಂದು ನೆನಸಿದೆ. ಆದರೆ ನೀನು ನನಗಿಂತ ಹೆಚ್ಚಾದ ತ್ಯಾಗ ಮಾಡಿಬಿಟ್ಟೆ!" ಅಂದರು. ಹೌದು ಪ್ರೀತಿ ಎಲ್ಲವನ್ನೂ ಸಹಿಸುತ್ತದೆ (1 ಕೊರಿಂ.13:7).

## ಯೇಸುಕ್ರಿಸ್ತನ ರಕ್ತದ ಮೂಲಕ 12 ಆಶೀರ್ವಾದಗಳು

1. ಪಾಪಕ್ಷಮೆಯನ್ನುಂಟು ಮಾಡುವ ರಕ್ತ (ಮತ್ತಾ. 26:28).
2. ಧೈರ್ಯಪಡಿಸುವ ರಕ್ತ (ಇಬ್ರಿ. 10–:19,20).
3. ಬಿಡುಗಡೆಯನ್ನುಂಟುಮಾಡುವ ರಕ್ತ (1 ಪೇತ್ರ. 1:19).
4. ನಮ್ಮನ್ನು ಶುದ್ಧೀಕರಿಸುವ ರಕ್ತ (1 ಯೋಹಾ. 1:7).
5. ಅತಿಶಯವಾದ ಕೃಪೆಯನ್ನುಂಟುಮಾಡುವ ರಕ್ತ (ಎಫೆ. 1:7).
6. ನೀತಿವಂತರನ್ನಾಗಿಸುವ ರಕ್ತ (ರೋಮಾ. 5:9).
7. ಸಮಸ್ತವನ್ನು ಸಂಧಾನಪಡಿಸುವ ರಕ್ತ (ಕೊಲೊ. 1:20).
8. ಪವಿತ್ರ ಪಡಿಸುವ ರಕ್ತ (ಇಬ್ರಿ. 13:12).
9. ಒಡಂಬಡಿಕೆಯ ರಕ್ತ (ಲೂಕ. 22:20).
10. ರಾಜ್ಯವನ್ನಾಗಿಯೂ ಯಾಜಕರನ್ನಾಗಿಯೂ ಮಾಡಿದ ರಕ್ತ (ಪ್ರಕ.5:9,10).
11. ನಿರ್ಜೀವ ಕರ್ಮಗಳಿಂದ ಬಿಡಿಸುವ ರಕ್ತ (ಇಬ್ರಿ. 9:14).
12. ಜಯಕೊಡುವ ರಕ್ತ (ಪ್ರಕ. 12:11).



# ಬಿಟ್ಟು ಕೊಡಿರಿ

ಒಮ್ಮೆ ಒಬ್ಬ ವಿಶ್ವಾಸಿಯು ದೂರ ಪ್ರಯಾಣ ಹೊರಟು ಬಸ್ಸಿನ ಮುಂಭಾಗದ ಆಸನದಲ್ಲಿ ಕುಳಿತು ಪ್ರಯಾಣ ಮಾಡುತ್ತಿದ್ದರು. ಅರ್ಧ ದಾರಿಯಲ್ಲಿ ಒಬ್ಬ ರಾಜಕೀಯ ಪ್ರಮುಖರು ಬಸ್ ಹತ್ತಿದರು. ಆ ಸೀಟು ತನಗೆ ಬೇಕೆಂದು ವಾದ ಮಾಡಿದರು. ಕಂಡೆಕ್ಟರ್ ಎಷ್ಟೋ ಹೇಳಿಯೂ ಆ ವ್ಯಕ್ತಿ ಕೇಳುವಂತಿಲ್ಲ.

ಆಗ ಕರ್ತನು ಮೆಲು ನುಡಿಯಲ್ಲಿ ಸಹೋದರನ ಬಳಿ, "ನೀನು ಬಿಟ್ಟುಕೊಡು" ಎಂದರು. ಮೊದಲು ಆ ಸಹೋದರನಿಗೆ ತನ್ನ ಗೌರವಕ್ಕೆ ಕುಂದಾಯಿತು ಎಂದು ಎಣಿಸಿದರೂ, ಕರ್ತನಿಗೆ ವಿಧೇಯನಾಗಿ ಆ ಸ್ಥಳವನ್ನು ಬಿಟ್ಟುಕೊಟ್ಟು ಹಿಂಭಾಗದಲ್ಲಿದ್ದ ಒಂದು ಆಸನದಲ್ಲಿ ಹೋಗಿ ಕುಳಿತರು.

ನಡೆದದ್ದೇನು ಗೊತ್ತೇ? ಸ್ವಲ್ಪ ಹೊತ್ತಿನಲ್ಲಿ ಒಂದು ದೊಡ್ಡ ಆಕಸ್ಮಿಕ ಸಂಭವಿಸಿ ಮುಂದಿನ ಆಸನದಲ್ಲಿ ಆಸೀನನಾಗಿದ್ದ ಆ ಪ್ರಮುಖ ವ್ಯಕ್ತಿ ಅಘೋರವಾದ ಅಪಘಾತದಲ್ಲಿ ಮಡಿದುಹೋದರು. ಆಗ ಹಿಂಭಾಗದಲ್ಲಿ ಕುಳಿತಿದ್ದ ಸಹೋದರನು ತಾನು ಬಿಟ್ಟು ಕೊಟ್ಟದ್ದರ ನಿಮಿತ್ತ ಉಂಟಾದ ಆಶೀರ್ವಾದವನ್ನು ನೆನಸಿ ಕರ್ತನನ್ನು ಸ್ತುತಿಸಿದರು.

"ಕೆಡುಕನನ್ನು ಎದುರಿಸಬೇಡ, ಒಬ್ಬನು ನಿನ್ನ ಬಲಗೆನ್ನೆಯ ಮೇಲೆ ಹೊಡೆದರೆ ಅವನಿಗೆ ಮತ್ತೊಂದು ಕೆನ್ನೆಯನ್ನೂ ಒಡ್ಡು" ಎಂದು ಸ್ವಾಮಿ ಹೇಳಿದ್ದಾನೆ (ಮತ್ತಾ.5:39–40).

## ಸತ್ಯವೇದವೂ ನಾನೂ

1. ನಾನು ಕತ್ತಲೆಯಲ್ಲಿರುವಾಗ ಸತ್ಯವೇದವು ನನಗೆ ಬೆಳಕಾಗಿದೆ.
2. ನಾನು ಒಂಟಿಯಾಗಿರುವಾಗ ಸತ್ಯವೇದವು ನನಗೆ ಸ್ನೇಹಿತನಾಗಿದೆ.
3. ನಾನು ಮನಗುಂದಿ ಹೋಗುವಾಗ ಸತ್ಯವೇದವು ನನಗೆ ಚೈತನ್ಯವಾಗಿದೆ.
4. ನಾನು ಹಸಿದಿರುವಾಗ ಸತ್ಯವೇದವು ನನಗೆ ಮನ್ನವಾಗಿದೆ.
5. ನಾನು ದಾಹಗೊಂಡಿರುವಾಗ ಸತ್ಯವೇದವು ನನಗೆ ಪಾನವಾಗಿದೆ.
6. ನಾನು ದಾರಿ ತಪ್ಪಿದಾಗ ಸತ್ಯವೇದವು ನನಗೆ ಮಾರ್ಗದರ್ಶನವಾಗಿದೆ.
7. ನಾನು ಸೈತಾನನೊಂದಿಗೆ ಹೋರಾಡುವಾಗ ಸತ್ಯವೇದವು ನನ್ನ ಸರ್ವಾಯುಧವಾಗಿದೆ.

# ನಮ್ಮ ದೇಶದ ಸುದ್ದಿಗಳು
## (INDIAN NEWS)

### 1. ಭಾರತ : ಎರಡನೇ ವಿಶ್ವಾಸಾರ್ಹ ರಾಷ್ಟ್ರ :

ವಿಶ್ವದಲ್ಲೇ ವಿಶ್ವಾಸಾರ್ಹ ರಾಷ್ಟ್ರಗಳ ಪೈಕಿ ಭಾರತ ಎರಡನೇ ಸ್ಥಾನದಲ್ಲಿದೆ. ಜಾಗತಿಕವಾಗಿ ನಂಬಿಕೆಯ ಪ್ರಮಾಣ ಕುಸಿದಿದ್ದರೂ ಭಾರತದ ಸಂಸ್ಥೆಗಳು ವಿಶ್ವಾಸಾರ್ಹತೆಯನ್ನು ಉಳಿಸಿಕೊಂಡಿವೆ ಎಂದು ಸಮೀಕ್ಷೆಯೊಂದು ಹೇಳಿದೆ.

### 2. ಹುಲಿ ಸಂಖ್ಯೆ ರಾಜ್ಯದಲ್ಲೇ ಅಧಿಕ :

ವನ್ಯಜೀವಿ ಮತ್ತು ಹುಲಿ ಪ್ರೇಮಿಗಳ ಸಂತಸಕ್ಕೆ ಕಾರಣವಾಗುವ ಸಂಗತಿಯೊಂದು ಇದೀಗ ಹೊರಬಿದ್ದಿದೆ. ದೇಶದಲ್ಲಿ ಹುಲಿಗಳ ಸಂಖ್ಯೆ ಗಣನೀಯವಾಗಿ ಏರಿಕೆಯಾಗಿದೆ. ವಿಶ್ವದ ಹುಲಿಗಳ ಪೈಕಿ ಶೇ. 70 ರಷ್ಟು ಭಾರತದಲ್ಲಿವೆ. ವಿಶೇಷ ಎಂದರೆ ದೇಶದಲ್ಲಿಯೇ ಅತಿ ಹೆಚ್ಚು ಹುಲಿಗಳಿರುವ ರಾಜ್ಯ ಕರ್ನಾಟಕ.

### 3. ಭಾರತ ಏಷ್ಯಾದ ಪ್ರಬಲ ಶಕ್ತಿ : ಅಮೆರಿಕ ಬಣ್ಣನೆ :

ಭದ್ರತೆ, ರಾಜಕೀಯ ಮತ್ತು ಹಣಕಾಸಿನ ವಿಚಾರದಲ್ಲಿ ಭಾರತದ ಜೊತೆ ಕಾರ್ಯ ನಿರ್ವಹಿಸಲು ಅಮೆರಿಕ ಉತ್ಸುಕವಾಗಿದೆ. ಜಾಗತಿಕ ವೇದಿಕೆಯಲ್ಲಿ ಅಮೆರಿಕದ ಕಾರ್ಯಕ್ರಮಗಳನ್ನು ಏಷ್ಯಾದ ಪ್ರಬಲ ಶಕ್ತಿಯೊಂದಿಗೆ ಪ್ರತಿನಿಧಿಸಲು ಅಧ್ಯಕ್ಷ ಬರಾಕ್ ಒಬಾಮ ಅವರ ಭಾರತ ಭೇಟಿ ನೆರವಾಗಲಿದೆ ಎಂದು ಶ್ವೇತಭವನ ವರದಿ ಮಾಡಿದೆ.

### 4. ವಿಶ್ವದಾಖಲೆ ಸರಿಗಟ್ಟಿದ ಭಾರತದ ಭಕ್ತಿ ಶರ್ಮ :

ಭಾರತದ ಈಜು ಸ್ಪರ್ಧಿ ಭಕ್ತಿ ಶರ್ಮ ಅಂಟಾರ್ಟಿಕ ಸಾಗರದಲ್ಲಿ 1 ಡಿಗ್ರಿ ತಾಪಮಾನದಲ್ಲಿ 1.4 ಮೈಲಿ ಈಜುವ ಮೂಲಕ ವಿಶ್ವ ದಾಖಲೆ ಬರೆದಿದ್ದಾರೆ. 52 ನಿಮಿಷಗಳಲ್ಲಿ ಈ ಸಾಧನೆ ಮಾಡಿದ ಶರ್ಮರವರು, ಬ್ರಿಟಿಷ್ ಈಜು ಸ್ಪರ್ಧೆ ಲೆವಿಸ್ ಪುಗ್ ಹಾಗೂ ಅಮೆರಿಕದ ಲಿನೆ ಕಾಕ್ಸ್ ಅವರ ದಾಖಲೆಯನ್ನು ಸರಿಗಟ್ಟಿದ್ದಾರೆ. ಏಷ್ಯಾದಲ್ಲೇ ಈ ಸಾಧನೆ ಮಾಡಿದ ಮೊದಲ ಮಹಿಳೆ ಎಂಬ ಗೌರವಕ್ಕೆ ಭಕ್ತಿ ಪಾತ್ರರಾಗಿದ್ದಾರೆ. ಅಲ್ಲದೆ ಈವರೆಗೂ ದಾಖಲೆ ಮಾಡಿದವರಲ್ಲೇ ಅತಿ ಕಿರಿಯರು ಎಂಬ ಮನ್ನಣೆ ಪಡೆದುಕೊಂಡಿದ್ದಾರೆ.

### 5. 3 ವರ್ಷದಲ್ಲಿ 35,600 ಬಂಕ್ :

ತೈಲ ಉತ್ಪನ್ನಗಳು ಬಳಕೆದಾರರಿಗೆ ಬಹಳ ಸುಲಭದಲ್ಲಿ ಲಭಿಸುವಂತಾಗಬೇಕು ಎಂಬ ಉದ್ದೇಶದಿಂದಲೇ ಈ ಸಾಮರ್ಥ್ಯ ವಿಸ್ತರಣಾ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಪೆಟ್ರೋಲಿಯಂ ಸಚಿವಾಲಯ ತಿಳಿಸಿದೆ.





# ಹೊರ ದೇಶದ ಸುದ್ದಿಗಳು
## (FOREIGN NEWS)

### 1. ಮೊದಲ ಮಹಿಳಾ ಬಿಷಪ್ :

ಪುರುಷ ಬಿಷಪ್‌ಗಳ ಪ್ರಾಬಲ್ಯವಿದ್ದ 'ದಿ ಚರ್ಚ್ ಆಫ್ ಲಂಡನ್'ನಲ್ಲಿ ಇದೇ ಮೊದಲ ಬಾರಿಗೆ ಮಹಿಳೆಯೊಬ್ಬರನ್ನು ಅತ್ಯುನ್ನತ ಬಿಷಪ್ ಸ್ಥಾನಕ್ಕೆ ಸೋಮವಾರ ನೇಮಕ ಮಾಡಲಾಗಿದೆ. ದಿ ರೆವರೆಂಡ್ ಲಿಬ್ಬಿ ಲೇನ್ (48) ನೇಮಕಗೊಂಡ ಮಹಿಳೆ. ಲಿಬ್ಬಿ ಅವರ ನೇಮಕದ ಮೂಲಕ ನೂರು ವರ್ಷಗಳಿಂದ ಜಾರಿಯಲ್ಲಿದ್ದ ಪುರುಷ ಪ್ರಧಾನ ಬಿಷಪ್‌ಗಳ ನೇಮಕಾತಿ ಸಂಪ್ರದಾಯವನ್ನು ಮುರಿದಂತಾಗಿದೆ.

### 2. ಹೊಸ ಔಷಧಿ ಶೋಧ :

ವಿಕಿರಣಗಳಿಂದ ಮಾನವನ ದೇಹದ ಮೇಲೆ ಬೀರುವ ದುಷ್ಪರಿಣಾಮವನ್ನು ತಡೆಯುವ ಹೊಸ ಔಷಧವನ್ನು ವಿಜ್ಞಾನಿಗಳು ಕಂಡುಹಿಡಿದಿದ್ದಾರೆ. ಇಲಿಗಳ ಮೇಲೆ ಈ ಔಷಧವನ್ನು ಪ್ರಯೋಗ ಮಾಡಿದ್ದು, ವಿಕಿರಣಗಳಿಂದ ಆಗುವ ಹಾನಿಯನ್ನು ತಡೆಯಲು ಈ ಔಷಧಿ ಸಹಕಾರಿಯಾಗಿದೆ ಎಂದು ಸಂಶೋಧಕರು ತಿಳಿಸಿದ್ದಾರೆ.

### 3. ವಿಜ್ಞಾನಿ ದಂಪತಿಗೆ ಜೈಲು ಶಿಕ್ಷೆ :

ಅಣ್ವಸ್ತ್ರ ತಂತ್ರಜ್ಞಾನಕ್ಕೆ ಸಂಬಂಧಿಸಿದ ರಾಷ್ಟ್ರೀಯ ಗೋಪ್ಯ ಮಾಹಿತಿಯನ್ನು ಸೋರಿಕೆ ಮಾಡಲು ಯತ್ನಿಸಿದ ಅಪರಾಧಕ್ಕಾಗಿ ಅಮೆರಿಕದ ವಿಜ್ಞಾನಿ ದಂಪತಿಗೆ ಐದು ವರ್ಷಗಳ ಕಾಲ ಸೆರೆವಾಸ ವಿಧಿಸಲಾಗಿದೆ ಎಂದು ಅಮೆರಿಕ ನ್ಯಾಯಾಂಗ ಇಲಾಖೆ ತಿಳಿಸಿದೆ.

### 4. ಸದ್ದಾಂ ಅರಮನೆಗೆ ಬಾಂಬ್ :

ಇರಾಕ್ ಮಾಜಿ ಅಧ್ಯಕ್ಷ ಸದ್ದಾಂ ಹುಸೇನ್‌ಗೆ ಸೇರಿದ ಒಂಬತ್ತು ಐಷಾರಾಮಿ ಅರಮನೆಗಳನ್ನು ಐ.ಎಸ್ ಉಗ್ರರು ಬಾಂಬ್ ಸ್ಫೋಟಿಸಿ ನಾಶಪಡಿಸಿದ್ದಾರೆ. ಸದ್ದಾಂ ಅವರ ತವರೂರು ಟಿಕ್ರಿತ್‌ನಲ್ಲಿ ಇರುವ ಒಂಬತ್ತು ವೈಭವೋಪೇತ ಸೌಧಗಳಲ್ಲಿ ಬಾಂಬ್ ಇರಿಸಿ ಸ್ಫೋಟಿಸಲಾಗಿದೆ ಎಂದು ಕ್ಲುನುವಾ ಸುದ್ದಿ ಸಂಸ್ಥೆ ವರದಿಮಾಡಿದೆ.

### 5. 5 ವರ್ಷದಲ್ಲಿ ನಿರುದ್ಯೋಗ ಪ್ರಮಾಣ ಹೆಚ್ಚಳ :

ಜಾಗತಿಕ ಆರ್ಥಿಕತೆಯು ಪ್ರಸ್ತುತ ಇರುವಂತೆ ನಿರಾಶಾದಾಯಕವಾಗಿದ್ದರೆ ಮುಂದಿನ ಐದು ವರ್ಷಗಳಲ್ಲಿ ಜಾಗತಿಕ ನಿರುದ್ಯೋಗ ಪ್ರಮಾಣ 1.1 ಕೋಟಿಯಷ್ಟು ಹೆಚ್ಚಲಿದೆ ಎಂದು ಮಂಗಳವಾರ ಬಿಡುಗಡೆಯಾದ ವಿಶ್ವಸಂಸ್ಥೆ ವರದಿ ಎಚ್ಚರಿಸಿದೆ. ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ಐಎಲ್‌ಒ) ಮಂಡಿಸಿರುವ ವಿಶ್ವ ಉದ್ಯೋಗ ಸಾಮಾಜಿಕ ದೃಷ್ಟಿಕೋನ ವರದಿಯ ಪ್ರಕಾರ 2019ರ ವೇಳೆಗೆ 21.2 ಕೋಟಿಗೂ ಹೆಚ್ಚು ಮಂದಿ ನೌಕರಿ ಕಳೆದುಕೊಳ್ಳಲಿದ್ದಾರೆ.

ಮಾರ್ಚ್ 1

## ಪರಲೋಕದ ಆಶೀರ್ವಾದಗಳು!

ಬೆಳಿಗ್ಗೆ : ಅರಣ್ಯ. 20,21,22,23
ಸಂಜೆ : ಮಾರ್ಕ. 7

"ಯೆಹೋವನು ಆಕಾಶದಲ್ಲಿರುವ ತನ್ನ ಜಲನಿಧಿಯನ್ನು ತೆರೆದು ನಿಮ್ಮ ದೇಶದ ಮೇಲೆ ಬೆಳೆಗೆ ಬೇಕಾದ ಹಾಗೆ ಮಳೆಯನ್ನು ಸುರಿಸಿ ನಿಮ್ಮ ಎಲ್ಲಾ ವ್ಯವಸಾಯವನ್ನೂ ಸಫಲ ಮಾಡುವನು. ನೀವು ಅನೇಕ ಜನರಿಗೆ ಸಾಲಕೊಡುವಿರೇ ಹೊರತು ಸಾಲ ತೆಗೆದುಕೊಳ್ಳುವದಿಲ್ಲ" (ಧರ್ಮೋ.28:12).

ಲೌಕೀಕವಾದ ಈ ಲೋಕದ ಆಶೀರ್ವಾದಗಳಿಗಿಂತಲೂ ಉನ್ನತ ಆತ್ಮೀಕ ಆಶೀರ್ವಾದಗಳು, ನಿತ್ಯತ್ವದ ಆಶೀರ್ವಾದಗಳು ಬಹಳ ಶ್ರೇಷ್ಠವಾದವುಗಳು. ಈ ತಿಂಗಳೆಲ್ಲಾ  ಪರಲೋಕದಿಂದ ಬರುವ ಆಶೀರ್ವಾದಗಳ ಕುರಿತು ಧ್ಯಾನಿಸಸಿಲಿರುವೆವು.

"ಪರಲೋಕದ ಸಕಲ ಆತ್ಮೀಯ ವರಗಳನ್ನು ಕರ್ತನು ನಮಗೆ ಕ್ರಿಸ್ತಯೇಸುವಿನಲ್ಲಿ ಅನುಗ್ರಹಿಸಿದ್ದಾನೆ" (ಎಫೆ. 1:3) ಎಂದು ಸತ್ಯವೇದ ಹೇಳುತ್ತದೆ. ಪರಲೋಕ ಒಂದು ಟಂಕಸಾಲೆಯಂತಿರುವದು. ಅದು ಒಂದು ಸೂಪರ್ ಮಾರ್ಕೆಟ್. ಯಾವ ಭಾಗದಿಂದ ಯಾವ ರೀತಿಯ ಆಶೀರ್ವಾದಗಳನ್ನು ನಿಮಗೆ ಕಳುಹಿಸಿಕೊಡಬೇಕೆಂದು ಬಯಸುವಿರೋ ಅವುಗಳನ್ನು ಕರ್ತನು ತನ್ನ ಮಕ್ಕಳಾದ ನಿಮಗೆ ಕಳುಹಿಸಿಕೊಡಲು ಶಕ್ತನಾದಾತನಾಗಿರುವನು. ಸೊಲೊಮೋನನು ಕರ್ತನ ಬಳಿ ಜ್ಞಾನವನ್ನು ಕೇಳಿದನು. ಆತನು ಜ್ಞಾನವನ್ನು ಮಾತ್ರವಲ್ಲ, ಸೊಲೊಮೋನನು ಕೇಳದೇ ಇದ್ದ ಐಶ್ವರ್ಯವನ್ನೂ ಕೂಡ ಕೊಲ್ಪಟ್ಟನು. ಒಮ್ಮೆ ಒಬ್ಬ ಸಹೋದರಿ ಪ್ರಾರ್ಥನೆಗಾಗಿ ಬಂದಿದ್ದಳು. ಅವಳ ಗಂಡ ಹಗಲಿರುಳು ಕುಡಿಯುತ್ತಿದ್ದ ಕುಡುಕನು. ಅವರಿಗೆ ಹೆಚ್ಚು ಮಕ್ಕಳು, ಮನೆಯಲ್ಲಿ ಬಡತನ ತಾಂಡವವಾಡುತ್ತಿತ್ತು. ಆದರೆ ಕರ್ತನು ಬಹಳ ಕನಿಕರದಿಂದ "ಮಗಳೇ, ಭಯಪಡಬೇಡ, ನಾನು ಪರಲೋಕದ ಬಾಗಿಲುಗಳನ್ನು ತೆರೆದು ನಿನ್ನನ್ನು ಆಶೀರ್ವದಿಸುವೆನು" ಎಂದು ಹೇಳಿದನು. ಆ ಸಹೋದರಿ ನಂಬಲು ಆಸ್ಪದವಿಲ್ಲದಿದ್ದಾಗಲೂ, ಆ ಮಾತುಗಳಲ್ಲಿ ನಂಬಿಕೆ ಇಟ್ಟು ಮನೆಗೆ ಹಿಂದಿರುಗಿದಳು. ದೇವರಿಂದ ಆಗದ ಕಾರ್ಯ ಒಂದೂ ಇಲ್ಲ (ಲೂಕ. 1:37) ಎಂದು ಅರಿಕೆ ಮಾಡಿದಳು. ಏನು ನಡೆಯಿತು ಗೊತ್ತೇ? ಹಲವು ವರ್ಷಗಳ ಮೊದಲು ಆಕೆಗೆ ಇಂಗ್ಲೆಂಡ್ ದೇಶದಲ್ಲಿದ್ದ ಒಬ್ಬ ಪೆನ್‌ಫ್ರೆಂಡ್ ಇದ್ದಳು. ಆಕೆ ಸಾಯುವಾಗ ತನ್ನ ಆಸ್ತಿಯನ್ನೆಲ್ಲಾ ಈ ಬಡ ಸಹೋದರಿಯ ಹೆಸರಿಗೆ ಬರೆದಿಟ್ಟು ಸತ್ತುಹೋದಳು. ಸ್ವಲ್ಪ ಸಮಯ ಕಳೆದ ನಂತರ ಈ ಸಹೋದರಿಗೆ ಹೇರಳವಾದ ಹಣ ದೊರಕಿತು.

ದೇವ ಜನರೇ ನಮ್ಮ ಕರ್ತನು ಕನಿಕರ ಉಳ್ಳಾತನು. ಕೃಪಾಪೂರ್ಣನು. ಆತನು ಎಂದೂ ಅಳೆದು ಕೊಡುವ ದೇವರಲ್ಲ, ತುಂಬಿ ಹೊರಸೂಸುವಂತೆ ಕೊಡುವಾತನು. ಆತನ ಹೆಸರಿನಲ್ಲಿ ನಂಬಿಕೆ ಇಟ್ಟವರ ಮುಖ ಲಜ್ಜೆಗೆಡುವದೇ ಇಲ್ಲ.

*ನೆನಪಿಗೆ : "ಇದು ನಿನ್ನ ತಂದೆಯ ದೇವರಿಂದಾಯಿತು, ಆತನು ನಿನಗೆ ಸಹಾಯ ಮಾಡಲಿ. ಸರ್ವಶಕ್ತನಾದ ದೇವರಿಂದಾಯಿತು, ಆತನು ನಿನ್ನನ್ನು ಆಶೀರ್ವದಿಸಲಿ (ಆದಿ. 49:25).*



ಮಾರ್ಚ್ 2

## ದೇವರು ಪರಲೋಕದಲ್ಲಿರುವನು!

ಬೆಳಿಗ್ಗೆ : ಅರಣ್ಯ. 24,25,26,27
ಸಂಜೆ : ಮಾರ್ಕ. 8:1–21

ದೇವರು ಆಕಾಶದಲ್ಲಿದ್ದಾನಲ್ಲವೆ, ನೀನು ಭೂಮಿಯಲ್ಲಿದ್ದೀ (ಪ್ರಸಂಗಿ. 5:2).

ನಮಗೆ ಮೇಲೆ ಆಕಾಶವಿರುವದು. ಅಲ್ಲಿ ಸೂರ್ಯ ಚಂದ್ರ, ನಕ್ಷತ್ರಗಳೆಲ್ಲಾ ಇರುವವು. ಆದರೆ ಗಗನ ಮಂಡಲದ ಮೇಲೆ ನಮ್ಮ ದೇವರ ವಾಸಸ್ಥಳವಾದ ಪರಲೋಕವಿರುವದು. ಅಲ್ಲಿ ಆತನು ಸಿಂಹಾಸನಾರೂಢನಾಗಿರುವನು. ಅಲ್ಲಿಂದ ಆತನು ಸಕಲ ಲೋಕಗಳನ್ನು ಜೀವರಾಶಿಗಳನ್ನು ಆಳುತ್ತಿರುವನು. ಅಲ್ಲಿ ಕರ್ತನ ಬೊಕ್ಕಸವಿರುವದು (ಆದಿ. 28:12). ಆಕಾಶದ ದ್ವಾರಗಳಿರುವವು (ಮಲಾಕಿ. 3:10), ಅದೇ ವೇಳೆಯಲ್ಲಿ ಪರಲೋಕದಿಂದ ಇಳಿದುಬರುವ ಅಭಿಷೇಕದ ಅಗ್ನಿಯೂ ಇರುವದು (ಯೆಶಾಯ 64:2).

ಸಾಲದ ಸಮಸ್ಯೆಯಿಂದ ತೊಳಲುತ್ತಿದ್ದ ಒಬ್ಬ ಬಡ ಮನುಷ್ಯನು ಊರಿನ ಹೊರಗೆ ಇದ್ದ ಒಂದು ಪಾಳು ಮನೆಯೊಳಗೆ ಹೋಗಿ ಪ್ರಾರ್ಥಿಸುತ್ತಿದ್ದನು. ಇದ್ದಕ್ಕಿದ್ದಂತೆ 'ಬೀಳಲಾ?' ಎಂಬ ಶಬ್ದ ಕೇಳಿಸಿತು. ಅವನು ಈ ಮನೆಯ ಗೋಡೆ ಬಿದ್ದುಹೋಗುವದೇನೋ ಗೊತ್ತಿಲ್ಲ. ಸಾಲಗಾರನಾಗಿ ಬದುಕುವದಕ್ಕಿಂತ ಈ ಮನೆಯ ಗೋಡೆ ಕುಸಿದು ನನ್ನ ಮೇಲೆ ಬಿದ್ದು ಸತ್ತುಹೋದರೆ ಎಷ್ಟೋ ಉತ್ತಮವೆಂದು ಚಿಂತಿಸಿ 'ಬೀಳಲಿ' ಎಂದು ಹೇಳಿದನು. ಆದರೆ ಗೋಡೆ ಕುಸಿದು ಬೀಳಲಿಲ್ಲ. ಮೇಲಿನಿಂದ ಚಿನ್ನದ ನಾಣ್ಯಗಳು ಅವನ ಮೇಲೆ ಬಿದ್ದವು. ಅವೆಲ್ಲವನ್ನು ಆರಿಸಿ ತೆಗೆದುಕೊಂಡು ತನ್ನ ಸಾಲವನ್ನೆಲ್ಲಾ ತೀರಿಸಿ, ಸುಖ ಜೀವಿತವನ್ನು ನಡೆಸಲಾರಂಭಿಸಿದನು. ಅವನಿಗೆ ಸಾಲ ಕೊಟ್ಟವರಲ್ಲಿ ದುರಾಸೆಯುಳ್ಳ ಒಬ್ಬನು ಅದೇ ಪಾಳುಮನೆಗೆ ಹೋಗಿ ಪ್ರಾರ್ಥಿಸಲಾರಂಭಿಸಿದನು. 'ಬೀಳಲಾ?' ಎಂಬ ಶಬ್ದ ಕೇಳಿ ಬರಲು, ಅವನು ಕೂಡಲೇ 'ಬೀಳಲಿ' ಅನ್ನಲು, ಮೇಲಿನಿಂದ ಹಾವು ಚೇಳುಗಳು ಅವನ ಮೇಲೆ ಬೀಳಲಾರಂಭಿಸಿದವು. ಅವನೋ ಪ್ರಾಣ ಉಳಿದರೆ ಸಾಕೆಂದು ಓಡಿಹೋದನು.

ದೇವಮಕ್ಕಳೇ, ನಮ್ಮನ್ನು ಪ್ರೀತಿಸುವ ನಮ್ಮ ತಂದೆ ದೇವರಿಗೆ ನಮ್ಮ ಅಗತ್ಯತೆ ಏನೆಂಬುದು ತಿಳಿದಿರುವದು. ಆತನನ್ನು ಪ್ರೀತಿಸಿ, ಸ್ತುತಿಸುವ ಆತನ ಮಕ್ಕಳಿಗೆ ನಿಶ್ಚಯವಾಗಿ ತನ್ನ ಬೊಕ್ಕಸ ಶಾಲೆಯಾದ ಪರಲೋಕದ ದ್ವಾರಗಳನ್ನು ತೆರೆದು ಆಶೀರ್ವದಿಸುವನು. ಮೊದಲು ದೇವರ ರಾಜ್ಯಕ್ಕಾಗಿಯೂ ನೀತಿಗಾಗಿಯೂ ತವಕಪಡಿರಿ. ಇದರೊಂದಿಗೆ ಎಲ್ಲವನ್ನೂ ಸೇರಿಸಿಕೊಡುವನು (ಮತ್ತಾ. 6:33).

*ನೆನಪಿಗೆ : "ನನಗೆ ಪ್ರಾಪ್ತವಾಗಿರುವ ಸ್ವಾಸ್ತ್ಯವು ರಮಣೀಯವಾದದ್ದು. ಅದು ನನಗೆ ಸಂತೃಪ್ತಿಕರವಾಗಿದೆ" (ಕೀರ್ತನೆ 16:6).*

ಮಾರ್ಚ್ 3

## ಪರಲೋಕದ ದ್ವಾರಗಳು!

ಬೆಳಿಗ್ಗೆ : ಅರಣ್ಯ. 28,29,30
ಸಂಜೆ : ಮಾರ್ಕ. 8:22–38

ನಾನು ಪರಲೋಕದ ದ್ವಾರಗಳನ್ನು ತೆರೆದು ನಿಮ್ಮಲ್ಲಿ ಸ್ಥಳ ಹಿಡಿಯಲಾಗದಷ್ಟು ಸುವರವನ್ನು ಸುರಿಯುವೆನೋ ಇಲ್ಲವೋ ನನ್ನನ್ನು ಹೀಗೆ ಪರೀಕ್ಷಿಸಿರಿ (ಮಲಾಕಿ 3:10).

ಪರಲೋಕದ ಅರಸನಾದ ಕರ್ತನ ಅರಮನೆಯಲ್ಲಿ ಅನೇಕಾನೇಕ ಬಾಗಿಲುಗಳು ಕಿಟಕಿಗಳು ಇರುವದು. ಅವುಗಳ ಮೂಲಕ ಕರ್ತನು ನಿಮಗೆ ಆಶೀರ್ವಾದಗಳನ್ನು ಸುರಿಯಮಾಡುವನು. ಸೊಲೊಮೋನನಿಗೆ ತನ್ನ ಭಂಡಾರವಾದ ಪರಲೋಕವನ್ನು ತೆರೆದು ಇದುವರೆಗೂ ಯಾರಿಗೂ ಸಿಗದಷ್ಟು ಜ್ಞಾನವನ್ನು ಕೊಟ್ಟನು. ಆತ್ಮನವರಗಳನ್ನು ಕೇಳಿದ ಎಲೀಷನಿಗೆ ಎರಡರಷ್ಟು ಆತ್ಮನವರವನ್ನು ಕೊಟ್ಟನು (2 ಅರಸು 2:9). ದಾನಿಯೇಲನಿಗೆ ರಹಸ್ಯಗಳನ್ನು ಅರಿಯುವ ಕೃಪೆಯನ್ನು ನೀಡಿದನು. ಬ್ಯಾಬಿಲೋನಿನಲ್ಲಿರುವ ಎಲ್ಲಾ ಪಂಡಿತರಿಗಿಂತ ವಿದ್ವಾಂಸರಿಗಿಂತ ದಾನಿಯೇಲನು ಹತ್ತರಷ್ಟು ಸಮರ್ಥನಾಗಿದ್ದನು (ದಾನಿ. 1:20). ಇಸಾಕನಿಗೆ ನೂರರಷ್ಟು ಫಲ ಸಿಗುವಂತೆ ಅನುಗ್ರಹಿಸಿದನು (ಆದಿ. 26:12). ಇಸ್ರಾಯೇಲ್ಯರು ಅಂದು ಇದ್ದದ್ದಕ್ಕಿಂತ ಸಾವಿರಪಟ್ಟು ಹೆಚ್ಚುವಂತೆ ಮಾಡಿದನು (ಧರ್ಮೋ. 1:11).

ಇಷ್ಟೊಂದು ಕನಿಕರ ಪ್ರೀತಿಯುಳ್ಳ ದೇವರು ನಿಮ್ಮನ್ನು ಆಶೀರ್ವದಿಸದೇ ಇರುವನಾ? ನಿಶ್ಚಯವಾಗಿ ಆಶೀರ್ವದಿಸುವನು "ಬೆಳ್ಳಿಯೂ, ಬಂಗಾರವೂ ಆತನದೇ" (ಹಗ್ಗಾಯ. 2:8). ಭೂಮಿಯೂ ಅದರಲ್ಲಿರುವ ಸಮಸ್ತವೂ ಯೆಹೋವನದು (ಕೀರ್ತ. 24:1). ಭೂಮಿಯ ಕೆಳಗೆ ಆತನು ಎಷ್ಟೋ ಚಿನ್ನದ ಗಣಿಗಳನ್ನೂ, ವಜ್ರದ ಗಣಿಗಳನ್ನೂ ಇಟ್ಟಿರುವನು. ಸಮುದ್ರದಲ್ಲಿ ಮುತ್ತುಗಳನ್ನು ಸೃಷ್ಟಿಸುವಾತನು ಆತನೇ. ನಿಮ್ಮನ್ನು ಆಶೀರ್ವದಿಸುವಾತನು. ಆತನು ಕನಿಕರದಲ್ಲಿ ಐಶ್ವರ್ಯವಂತನು.

ದೇವಜನರೇ, ಇಂದು ಕರ್ತನು ಯಾವ ರೀತಿಯಾಗಿ ನಿಮ್ಮನ್ನು ಆಶೀರ್ವದಿಸಬೇಕೆಂಬುದನ್ನು ಕೇಳಿರಿ. ಲೌಕೀಕವಾದ ಆಶೀರ್ವಾದಕ್ಕಿಂತ ಆತ್ಮೀಕವಾದ ಆಶೀರ್ವಾದ ಬಹು ಅಮೂಲ್ಯವಾದದ್ದು. ದೇವರು ನಿಮ್ಮನ್ನು ಸಕಲ ಆಶೀರ್ವಾದಗಳಿಂದ ಆಶೀರ್ವದಿಸುವಂತೆ ನಿಮ್ಮ ದಶಮಭಾಗದಿಂದ ಕರ್ತನನ್ನು ಘನಪಡಿಸಿರಿ. ಅಬ್ರಹಾಮನು ದೇವಯಾಜಕನಾದ ಮೆಲ್ಕಿಜೆದೇಕನಿಗೆ ದಶಮಭಾಗ ಕಾಣಿಕೆಯಾಗಿ ನೀಡಿ ಗೌರವಿಸಿದನು. ಇದರಿಂದ ಅಬ್ರಹಾಮನು ಮಾತ್ರವಲ್ಲ, ಅಬ್ರಹಾಮನ ಸಂತತಿಯನ್ನು ತಲತಲಾಂತರವಾಗಿ ಕರ್ತನು ಆಶೀರ್ವದಿಸಿದನು.

*ನೆನಪಿಗೆ : "ದೇವರು ಸಕಲವಿಧವಾದ ದಾನಗಳನ್ನು ನಿಮಗೆ ಧಾರಾಳವಾಗಿ ಅನುಗ್ರಹಿಸುವದಕ್ಕೆ ಶಕ್ತನು. ಆದುದರಿಂದ ನೀವು ಯಾವಾಗಲೂ ಎಲ್ಲಾ ವಿಷಯಗಳಲ್ಲಿ ಪರಿಪೂರ್ಣತೆಯುಳ್ಳವರಾಗಿ ಸಕಲ ಸತ್ಕಾರ್ಯಗಳನ್ನು ಹೇರಳವಾಗಿ ಮಾಡುವವರಾಗಿರಬೇಕು" (2 ಕೊರಿಂ. 9:8).*



ಮಾರ್ಚ್ 4

## ಆಕಾಶದ ದ್ವಾರಗಳು!

ಬೆಳಿಗ್ಗೆ : ಅರಣ್ಯ. 31,32,33
ಸಂಜೆ : ಮಾರ್ಕ. 9:1–29

"ಆತನು ಮೇಘಗಳಿಗೆ ಅಪ್ಪಣೆಕೊಟ್ಟು ಆಕಾಶದ ದ್ವಾರಗಳನ್ನು ತೆರೆದು ಸ್ವರ್ಗಧಾನ್ಯವಾದ ಮನ್ನವನ್ನು ಅವರಿಗೋಸ್ಕರ ಸುರಿಸಿ ಉಣ್ಣಲಿಕ್ಕೆ ಕೊಟ್ಟನು. ಅವರಲ್ಲಿ ಪ್ರತಿಯೊಬ್ಬನು ದೇವದೂತರ ಆಹಾರವನ್ನು ಭುಜಿಸಿದನು" (ಕೀರ್ತ. 78:23–25).

ಕರ್ತನು ಇಸ್ರಾಯೇಲ್ಯರನ್ನು ಐಗುಪ್ತದಿಂದ ಬಿಡುಗಡೆ ಮಾಡಿ, ಅರಣ್ಯಕ್ಕೆ ಕರೆದುಕೊಂಡು ಬಂದಾಗ, ಅವರ ಆಹಾರ, ನೀರು, ಉಡುಗೆ ತೊಡುಗೆ ಎಲ್ಲದರ ಜವಾಬ್ದಾರಿಯನ್ನು ಹೊತ್ತುಕೊಂಡನು. ಕರ್ತನನ್ನೇ ಆಶ್ರಯಿಸಿ ಅವರು ಧೈರ್ಯವಾಗಿ ಹೊರಟುಬಿಟ್ಟರು. ಅರಣ್ಯದಲ್ಲಿ ಯೆಹೋವನು ಮೋಶೆಗೆ ನಾನು ಆಕಾಶದಿಂದ ನಿಮಗೋಸ್ಕರ ಆಹಾರವನ್ನು ಸುರಿಸುವೆನು. ಈ ಜನರು ಪ್ರತಿದಿನವೂ ಹೊರಗೆ ಹೋಗಿ ಆಯಾ ದಿನಕ್ಕೆ ಬೇಕಾದಷ್ಟು ಮಾತ್ರ ಕೂಡಿಸಿಕೊಳ್ಳಬೇಕು" ಎಂದು ಹೇಳಿದನು (ವಿಮೋ.16:4).

ಕರ್ತನು ತಾನು ಹೇಳಿದಂತೆಯೇ ಆಕಾಶದಿಂದ ದೇವದೂತರ ಆಹಾರವಾದ ಮನ್ನವೆಂಬ ಧಾನ್ಯವನ್ನು ಸುರಿಸಿದನು. ಅದು ರುಚಿಯಲ್ಲಿ ಜೇನುತುಪ್ಪ ಕಲೆಸಿದ ದೋಸೆಗಳ ಹಾಗಿತ್ತೆಂದು ಸತ್ಯವೇದ ಹೇಳುತ್ತದೆ (ವಿಮೋ. 16:31). ಅದು ಅವರಿಗೆ ಘೇಂಡಾಮೃಗದ ಬಲವನ್ನು ತಂದುಕೊಟ್ಟಿತು. ಅದು ಆಕಾಶದ ಧಾನ್ಯವೆಂದೂ ದೇವದೂತರ ರೊಟ್ಟಿಯೆಂದು ಸತ್ಯವೇದ ವರ್ಣಿಸುತ್ತದೆ. ಕರ್ತನು ಅದ್ಭುತವಾಗಿಯೂ, ಕೃಪೆಯಿಂದಲೂ ತನ್ನ ಮಕ್ಕಳನ್ನು ಅರಣ್ಯದಲ್ಲಿ ನಾಲ್ವತ್ತು ವರ್ಷಗಳು ಪೋಷಿಸುತ್ತಾ ಬಂದನು. ಒಬ್ಬ ದೇವದೂತನ ಬಲ ಎಷ್ಟೆಂದರೆ ಒಬ್ಬ ದೇವದೂತನು ಅಸ್ಸಿರಿಯರ ಪಾಳೆಯದಲ್ಲಿ ನುಗ್ಗಿ 1,85,000 ಜನರನ್ನು ಸಂಹರಿಸಿದನೆಂದು ಸತ್ಯವೇದ ಹೇಳುತ್ತದೆ. ಅಂಥಹ ಬಲವನ್ನು ಅಂದು ಇಸ್ರಾಯೇಲ್ಯರಿಗೆ ಪರಲೋಕದ ಧಾನ್ಯವಾದ ಮನ್ನವನ್ನು ಸುರಿಸುವದರ ಮೂಲಕ ನೀಡಿ ಕಾನಾನಿನಲ್ಲಿದ್ದ ಏಳು ಜನಾಂಗಗಳನ್ನು, ಮೂವತ್ತೊಂದು ರಾಜರನ್ನು ಅವರು ಜಯಿಸುವಂತೆ ಆಶೀರ್ವದಿಸಿದನು.

ದೇವಜನರೇ, ಇಂದು ಪರಲೋಕದ ಮನ್ನವಾಗಿ ಕರ್ತನು ತನ್ನ ವಾಕ್ಯಗಳನ್ನು ಕೊಟ್ಟಿರುವನು. ಮನುಷ್ಯನು ರೊಟ್ಟಿ ತಿಂದ ಮಾತ್ರವಲ್ಲ, ದೇವರ ಬಾಯಿಂದ ಹೊರಡುವ ಪ್ರತಿಯೊಂದು ಮಾತಿನಿಂದಲೂ ಬದುಕುವನು (ಮತ್ತಾ. 4:4). ಹೊಸ ಒಡಂಬಡಿಕೆಯಲ್ಲಿ ಮನ್ನವಾಗಿ ಕ್ರಿಸ್ತನ ಶರೀರಗವೂ, ಸತ್ಯವೇದ ವಾಕ್ಯಗಳು ಇರುವವು. ಅದನ್ನು ನೀವು ಸೇವಿಸಿ ಬಲಹೊಂದುವಾಗ ಆಕಾಶಮಂಡಲದಲ್ಲಿರುವ ಅಶುದ್ಧಾತ್ಮ ಸೈನ್ಯಗಳನ್ನು ಜಯಿಸುವಿರಿ.

*ನೆನಪಿಗೆ : "ದೇವರು ಕೊಡುವ ಆ ರೊಟ್ಟಿ ಯಾವದೆಂದರೆ, ಪರಲೋಕದಿಂದ ಇಳಿದುಬಂದು ಲೋಕಕ್ಕೆ ಜೀವವನ್ನುಂಟು ಮಾಡುವಂಥದೇ ಎಂದು ಹೇಳಿದನು" (ಯೋಹಾ. 6:33).*

ಮಾರ್ಚ್
5

## ಆಕಾಶದ ತೂಬುಗಳು!

ಬೆಳಿಗ್ಗೆ : ಅರಣ್ಯ. 34,35,36
ಸಂಜೆ : ಮಾರ್ಕ. 9:30–50

“ಆ ದಿನದಲ್ಲಿ ಭೂಮಿಯ ಕೆಳಗಿರುವ ಸಾಗರದ ಸೆಲೆಗಳು ಒಡೆದವು ಆಕಾಶದ ತೂಬುಗಳು ತೆರೆದವು” (ಆದಿ. 7:11).

ಇಲ್ಲಿ ಕರ್ತನು ಆಕಾಶದ ತೂಬುಗಳನ್ನು ಕುರಿತು ಮಾತನಾಡುವನು. ತೂಬುಗಳೆಂದರೇನು? ನದಿಗಳಿಂದ ಹರಿದು ಬರುವ ನೀರು ಸಮುದ್ರಕ್ಕೆ ಸೇರಿ ವ್ಯರ್ಥವಾಗಬಾರದೆಂಬ ಉದ್ದೇಶದಿಂದ ನದಿಗಳಿಗೆ ಅಲ್ಲಲ್ಲಿ ಅಣೆಕಟ್ಟುಗಳನ್ನು ನಿರ್ಮಿಸಿ ಬೇಕಾದಷ್ಟು ನೀರನ್ನು ಉಪಯೋಗಿಸುವರು. ಅಣೆಕಟ್ಟಿನಲ್ಲಿ ಶೇಖರವಾಗುವ ನೀರು ಅಧಿಕವಾಗುವಾಗ ಅಣೆಕಟ್ಟಿನಲ್ಲಿ ನಿರ್ಮಿಸಿದ ದ್ವಾರಗಳಿಂದ ಅಧಿಕವಾದ ನೀರನ್ನು ಹೊರಗೆ ಹರಿದು ಹೋಗುವಂತೆ ಬಿಡುವರು. ಆ ದ್ವಾರಗಳಿಗೆ ತೂಬು ಎಂದು ಕರೆಯುವರು. ದ್ವಾರಗಳು ತೆರೆಯಲ್ಪಟ್ಟಾಗ ನೀರು ರಭಸದಿಂದ ಹೊರಗೆ ಹರಿದುಬರುವದು.

ಹಾಗೆಯೇ, ಆಕಾಶಕ್ಕೂ ತೂಬುಗಳಿರುವದನ್ನು ಆದಿ. 7:11,12ರಲ್ಲಿ ಓದುತ್ತೇವೆ. ನೋಹನ ಕಾಲದಲ್ಲಿ ಪಾಪವು ಭೂಮಿಯಲ್ಲಿ ಹೆಚ್ಚಾದಾಗ, ಕರ್ತನು ತಾನು ಸೃಷ್ಟಿಸಿದ ಮನುಷ್ಯನನ್ನು ನಾಶಪಡಿಸಬೇಕೆಂದು ನಿರ್ಧರಿಸಿದನು (ಆದಿ. 6:7). ಅದಕ್ಕಾಗಿ ನಾಲ್ವತ್ತು ದಿನಗಳು ಮಳೆ ಸುರಿಯಮಾಡಿದನು. ಅದು ತುಂತುರು ಮಳೆಯಾಗಿ ಪ್ರಾರಂಭವಾಗಿ ದೊಡ್ಡ ಮಳೆಯಾಗಿ ಹುಚ್ಚು ಮಳೆಯಾಗಿ ಬೀಳಲು ಪ್ರಾರಂಭಿಸಿತು. ಕೊನೆಗೆ ಆಕಾಶದ ತೂಬುಗಳೆಲ್ಲಾ ತೆರೆಯಲ್ಪಟ್ಟಿತು. ಆದರೆ ನೋಹನಿಗೋ, ಕರ್ತನ ದಯೆ ದೊರಕಿತು. ಕೃಪೆ ದೊರಕಿತು (ಆದಿ. 6:8). ಅವರು ನಾವೆಯಲ್ಲಿ ರಕ್ಷಿಸಲ್ಪಟ್ಟಿದ್ದರು. ಅಂದು ಕರ್ತನು ಆಕಾಶದ ತೂಬುಗಳನ್ನು ತೆರೆದಾಗ ಎರಡು ಕಾರ್ಯಗಳು ನಡೆಯಿತು. ಒಂದು ಅದು ಎಲ್ಲಾ ಪಾಪಿಷ್ಠರನ್ನು ನಾಶಮಾಡಿಬಿಟ್ಟಿತು. ಎರಡನೆಯದಾಗಿ ಆ ನಾವೆ ಬಹಳ ಎತ್ತರದ ಅರಾರಟ್ ಬೆಟ್ಟದಲ್ಲಿ ತಂಗಿತು. ಹಾಗೆಯೇ ಕರ್ತನ ಎರಡನೇ ಬರುವಿಕೆಯ ಮೊದಲು ಒಂದು ಬಹುದೊಡ್ಡ ಮಳೆ ಸುರಿಯುವದು. ಆಕಾಶದ ತೂಬುಗಳು ತೆರೆಯಲ್ಪಡುವವು. ಆದರೆ ಅದು ನಾಶನದ ಮಳೆಯಲ್ಲ. ಆತ್ಮೀಕವಾದ ಪವಿತ್ರಾತ್ಮನ ಹಿಂಗಾರಿನ ಮಳೆ. ಆ ಮಳೆ ಸುರಿಯುವಾಗ ಸಭೆಯೆಂಬ ನಾವೆ ಕ್ರಿಸ್ತನ ಬರುವಿಕೆಯಲ್ಲಿ ಬಹಳ ಎತ್ತರಕ್ಕೆ ಮಧ್ಯಾಕಾಶಕ್ಕೆ ಎತ್ತಲ್ಪಡುವದು. ಆದ್ದರಿಂದ ಹಿಂಗಾರಿನ ಮಳೆಗಾಗಿ ಕರ್ತನಲ್ಲಿ ಬೇಡಿಕೊಳ್ಳಿರಿ (ಜೆಕರ್ಯ. 10:1).

ದೇವಜನರೇ, ಇಂದು ನಮ್ಮ ದೇಶದಲ್ಲಿ ಹಿಂಗಾರಿನ ಮಳೆ ಬಲವಾಗಿ ಸುರಿಯುತ್ತಿರುವದು. ಕರ್ತನ ಬರುವಿಕೆಗಾಗಿ ಸಿದ್ಧಪಡಿಸಿಕೊಳ್ಳಲು ಕಡೇ ಗಳಿಗೆಗೆ ಬಂದಿದ್ದೇವೆ. ಪರಿಶುದ್ಧ ಪಡಿಸಿಕೊಳ್ಳುವವನು ತನ್ನನ್ನು ಇನ್ನೂ ಪರಿಶುದ್ಧಪಡಿಸಿಕೊಳ್ಳಲಿ. ಇಗೋ ಶೀಘ್ರವಾಗಿ ಬರುವೆನು ಎಂದು ಕರ್ತನು ಹೇಳುವನು (ಪ್ರಕ. 22:11).

*ನೆನಪಿಗೆ : “ಇಗೋ, ಮಳೆಗಾಲ ಕಳೆಯಿತು. ವೃಷ್ಟಿಯು ನಿಂತುಹೋಯಿತು. ಭೂಮಿಯಲ್ಲೆಲ್ಲಾ ಹೂವುಗಳು ಕಾಣುತ್ತವೆ, ಕುಡಿ ಸವರುವಕಾಲ ಬಂತು.... (ಪ.ಗೀ. 2:11,12).*



ಮಾರ್ಚ್
6

## ಪರಲೋಕದ ಅಗ್ನಿ!

ಬೆಳಿಗ್ಗೆ : ಧರ್ಮೋ. 1,2
ಸಂಜೆ : ಮಾರ್ಕ. 10:1–31

“ಕೂಡಲೇ ಯೆಹೋವನ ಕಡೆಯಿಂದ ಬೆಂಕಿಬಿದ್ದು ಯಜ್ಞ ಮಾಂಸವನ್ನೂ ಕಟ್ಟಿಗೆ ಕಲ್ಲು ಮಣ್ಣುಗಳನ್ನೂ ದಹಿಸಿಬಿಟ್ಟು ಕಾಲುವೆಯಲ್ಲಿದ್ದ ನೀರನ್ನೆಲ್ಲಾ ಹೀರಿಬಿಟ್ಟಿತು” (1 ಅರಸು. 18:38).

ಇಸ್ರಾಯೇಲ್ ದೇಶವನ್ನು ಆಹಾಬ ಅವನ ಹೆಂಡತಿಯಾದ ಈಜಬೇಲಳು ರಾಜ್ಯವಾಳುತ್ತಿದ್ದಾಗ, ದೇಶವು ವಿಗ್ರಹಾರಾಧನೆಗಳಿಂದ ಅಶುದ್ಧವಾಗಿಬಿಟ್ಟಿತು. ಜನರು ಬಾಳನೆಂಬ ವಿಗ್ರಹವನ್ನೂ, ಬಾಳನ ಪ್ರವಾದಿಗಳನ್ನೂ ಹಿಂಬಾಲಿಸಿ ದೇವರಿಗೆ ಕೋಪವೆಬ್ಬಿಸಿದರು. ಆ ಸಮಯದಲ್ಲಿ ಕರ್ತನಿಗಾಗಿ ಭಕ್ತಿ ವೈರಾಗ್ಯವುಳ್ಳ ಪ್ರವಾದಿಯಾದ ಎಲೀಯನನ್ನು ಕರ್ತನು ಎಬ್ಬಿಸಿದನು. ಅವನು ಯೆಹೋವನೊಬ್ಬನೇ ದೇವರೆಂದು ನಿರೂಪಿಸಿದನು. ಭಕ್ತಿ ವೈರಾಗ್ಯವುಳ್ಳವನಾದನು.

ಎಲೀಯನು ಬಾಳನ ಪ್ರವಾದಿಗಳನ್ನು ಕರೆದು ನಿಜವಾದ ದೇವರು ಯಾರು? ಎಂದು ತೀರ್ಮಾನಿಸುವಂತೆ ಸವಾಲೊಡ್ಡಿದನು. ಅದರಂತೆಯೇ ಬಾಳನ ಪ್ರವಾದಿಗಳು ತಮಗೆಂದು ಒಂದು ಹೋರಿಯನ್ನು ಆರಿಸಿಕೊಂಡರು. ಎಲೀಯನೂ ಒಂದು ಹೋರಿಯನ್ನು ಆರಿಸಿಕೊಂಡನು “ನಿಜವಾದ ದೇವರು ಅಗ್ನಿಯ ಮೂಲಕ ಉತ್ತರ ನೀಡಬೇಕು. ಯಜ್ಞವೇದಿಯ ಮೇಲೆ ಸಮರ್ಪಿಸಿರುವ ಬಲಿಯ ಮೇಲೆ ಅಕಾಶದಿಂದ ಅಗ್ನಿ ಇಳಿದುಬರಬೇಕು” ಎಂಬ ಸವಾಲನ್ನು ಎರಡು ಕಡೆಯವರೂ ಒಪ್ಪಿಕೊಂಡರು. ಬಾಳನಿಗೆ ಹೆಚ್ಚು ಪ್ರವಾದಿಗಳಿದ್ದದರಿಂದ ಮೊದಲ ಸರದಿ ಅವರದಾಯಿತು. ಅವರು ಬೆಳಗ್ಗಿನಿಂದ ಸಂಜೆಯವರೆಗೂ ಬಾಳನೇ ದೇವರೆಂದು ಕೂಗುತ್ತಾ ಕುಣಿಯುತ್ತಾ ತಮ್ಮನ್ನು ಕತ್ತಿಗಳಿಂದ ಗೀರಿಕೊಳ್ಳುತ್ತಾ ಎಷ್ಟೇ ಪ್ರಾರ್ಥಿಸಿದರೂ ಆಕಾಶದಿಂದ ಅಗ್ನಿ ಇಳಿದುಬರಲಿಲ್ಲ. ಈಗ ಎಲೀಯನ ಸರದಿ. ಎಲೀಯನು ಆಕಾಶದ ಕಡೆಗೆ ನೋಡುತ್ತಾ ಅಬ್ರಹಾಮ, ಇಸಾಕ, ಯಾಕೋಬನ ದೇವರೇ, ನೀನೊಬ್ಬನೇ ದೇವರೆಂದು ಜನರಿಗೆ ನಿರೂಪಿಸು ಎಂದು ಪ್ರಾರ್ಥಿಸಲು ಆಕಾಶದಿಂದ ಅಗ್ನಿ ಇಳಿದುಬಂದು ಯಜ್ಞಾರ್ಪಿತ ಬಲಿಯನ್ನು ದಹಿಸಿಬಿಟ್ಟಿತು (1 ಅರ. 18:36–40).

ದೇವಜನರೇ, ನಮ್ಮ ದೇವರು ಅಗ್ನಿಯ ಮೂಲಕ ಉತ್ತರಿಸುವಾತನು. ಪರಿಶುದ್ಧಾತ್ಮನೆಂಬ ಅಗ್ನಿಯಿಂದ ನಿಮಗೆ ದೀಕ್ಷಾಸ್ನಾನವನ್ನು ಕೊಡುವಾತನು. ಆತನು ಸುರಿಸುವ ಅಗ್ನಿ ಪವಿತ್ರಾತ್ಮನ ಅಗ್ನಿಯಾಗಿದೆ. ನಾನು ಬೆಂಕಿಯನ್ನು ಭೂಮಿಯ ಮೇಲೆ ಹಾಕಬೇಕೆಂದು ಬಂದೆನು, ಅದು ಇಷ್ಟರೊಳಗೆ ಹತ್ತಿಕೊಂಡಿದ್ದರೆ ಎಷ್ಟೋ ಸಂತೋಷ ಎಂದು ಕ್ರಿಸ್ತನು ಹೇಳುವನು (ಲೂಕ. 12:49).

*ನೆನಪಿಗೆ : ಸೊಲೊಮೋನನು ಪ್ರಾರ್ಥಿಸುವದನ್ನು ಮುಗಿಸಿದ ಕೂಡಲೆ, ಆಕಾಶದಿಂದ ಬೆಂಕಿಬಿದ್ದು ಸರ್ವಾಂಗಹೋಮ ದ್ರವ್ಯಗಳನ್ನೂ, ಯಜ್ಞಮಾಂಸವನ್ನೂ ದಹಿಸಿಬಿಟ್ಟಿತು. ಯೆಹೋವನ ತೇಜಸ್ಸು ಆಲಯದಲ್ಲಿ ತುಂಬಿಕೊಂಡಿತು (2. ಪೂ.ವೃ. 7:1).*

ಮಾರ್ಚ್ 7

## ಆಕಾಶದ ಪಾರಿವಾಳ!

ಬೆಳಿಗ್ಗೆ : ಧರ್ಮೋ. 3,4
ಸಂಜೆ : ಮಾರ್ಕ. 10:32–52

"ಯೇಸು ದೀಕ್ಷಾಸ್ನಾನ ಮಾಡಿಸಿಕೊಂಡ ಕೂಡಲೆ ನೀರಿನಿಂದ ಮೇಲಕ್ಕೆ ಬರಲು, ಇಗೋ, ಆತನಿಗೆ ಆಕಾಶವು ತೆರೆಯಿತು; ಮತ್ತು ದೇವರಾತ್ಮ ಪಾರಿವಾಳದ ಹಾಗೆ, ಇಳಿದು ತನ್ನ ಮೇಲೆ ಬರುವದನ್ನು ಕಂಡನು" (ಮತ್ತಾಯ. 3:16).

ಯೇಸುಕ್ರಿಸ್ತನು ದೀಕ್ಷಾಸ್ನಾನ ಹೊಂದಿದ ಸಮಯದಲ್ಲಿ ತ್ರಯೇಕ ದೇವರು ಒಬ್ಬರನ್ನೊಬ್ಬರು ಸಂಧಿಸಿದರು. ಕೆಳಗೆ ಯೊರ್ದಾನ್ ನದಿಯಲ್ಲಿ ದೀಕ್ಷಾಸ್ನಾನ ಪಡೆಯಲು ಯೇಸುಕ್ರಿಸ್ತನು ತನ್ನನ್ನು ತಗ್ಗಿಸಿ ಒಪ್ಪಿಸಿಕೊಟ್ಟನು. ನಮಗೆ ಮಾದರಿಯಾದನು. ಆಗ ಪರಿಶುದ್ಧಾತ್ಮನು ದೇಹಾಕಾರವಾಗಿ ಪಾರಿವಾಳದ ಹಾಗೆ ಆತನ ಮೇಲೆ ಇಳಿದು ಬಂದನು. ಮಾತ್ರವಲ್ಲ, ಆಕಾಶದಿಂದ ಒಂದು ಶಬ್ದವುಂಟಾಗಿ "ನೀನು ಪ್ರಿಯನಾಗಿರುವ ನನ್ನ ಮಗನು ನಿನ್ನನ್ನು ನಾನು ಮೆಚ್ಚಿದ್ದೇನೆ" ಎಂದು ದೈವವಾಣಿಯಾಯಿತು (ಲೂಕ. 3:22).

ಇತರರಂತೆ ಯೇಸುಕ್ರಿಸ್ತನು ದೀಕ್ಷಾಸ್ನಾನ ಮಾಡಿಸಿಕೊಂಡು ತಲೆ ಒರೆಸಿಕೊಂಡು ಹೊಸ ಬಟ್ಟೆಯನ್ನು ಬದಲಾಯಿಸಿಕೊಂಡು ಹಿಂದಿರುಗಲಿಲ್ಲ. ಮೊದಲ ಕೆಲಸವಾಗಿ ಪ್ರಾರ್ಥಿಸಲಾರಂಭಿಸಿದನು. ಯೇಸು ದೀಕ್ಷಾಸ್ನಾನ ಮಾಡಿಸಿಕೊಂಡು ಪ್ರಾರ್ಥನೆ ಮಾಡುತ್ತಿರುವಲ್ಲಿ ಆಕಾಶ ತೆರೆಯಿತು ಎಂದು ಸತ್ಯವೇದ ಹೇಳುತ್ತದೆ (ಲೂಕ. 3:21). ಪ್ರಾರ್ಥನೆಯೇ ಆಕಾಶವನ್ನು ತೆರೆಯುವಂಥದ್ದು. ಪ್ರಾರ್ಥನೆಯೇ ಪವಿತ್ರಾತ್ಮನನ್ನು ನಮ್ಮ ಮೇಲೆ ಇಳಿಯಮಾಡುವಂಥದ್ದು. ಶಿಷ್ಯರ ಜೀವಿತವನ್ನು ಗಮನಿಸಿ ನೋಡಿರಿ. ಅವರು ನೂರಿಪ್ಪತ್ತು ಮಂದಿ ಹತ್ತುದಿನಗಳು ಒಂದು ಕಡೆ ಸೇರಿ ಏಕಮನಸ್ಸಿನಿಂದ ಕೂಡಿದವರಾಗಿ ಪ್ರಾರ್ಥನೆಯಲ್ಲೂ ವಿಜ್ಞಾಪನೆಗಳಲ್ಲೂ ನಿರತರಾಗಿದ್ದಾಗ ಪವಿತ್ರಾತ್ಮನು ಉರಿಯಂತಿದ್ದ ನಾಲಿಗೆಗಳು ವಿಂಗಡಿಸಿಕೊಳ್ಳುವ ಹಾಗೆ ಅವರಿಗೆ ಕಾಣಿಸಿ ಒಬ್ಬೊಬ್ಬರ ಮೇಲೆ ಒಂದೊಂದಾಗಿ ಕೂತುಕೊಂಡವು. ಆಗ ಅವರೆಲ್ಲರೂ ಪವಿತ್ರಾತ್ಮಭರಿತರಾಗಿ ಆ ಆತ್ಮ ತಮತಮಗೆ ನುಡಿಯುವ ಶಕ್ತಿಯನ್ನು ಕೊಡುವ ಪ್ರಕಾರ ಬೇರೆ ಬೇರೆ ಭಾಷೆಗಳಿಂದ ಮಾತನಾಡುವದಕ್ಕೆ ಪ್ರಾರಂಭಿಸಿದರು (ಅ.ಕೃ. 2:2–4) ಎಂದು ಸತ್ಯವೇದ ಹೇಳುತ್ತದೆ. ಕ್ರಿಸ್ತನಿಗೇ ಪವಿತ್ರಾತ್ಮನ ಅಗತ್ಯತೆ ಇತ್ತೆಂದರೆ ನಿಮಗೆ ಇನ್ನೆಷ್ಟು ಅಧಿಕವಾಗಿ ಪವಿತ್ರಾತ್ಮನ ಬಲ ಅಗತ್ಯವಾದದ್ದು! ಯೇಸುಕ್ರಿಸ್ತನ ಹೆಸರಿನಲ್ಲಿ ಅದ್ಭುತಕಾರ್ಯಗಳನ್ನು ಸೂಚಕ ಕಾರ್ಯಗಳನ್ನು ಮಾಡಲು ಆತ್ಮನ ಬಲ ಅಗತ್ಯ. ಪರಿಶುದ್ಧಾತ್ಮನ ಅಭಿಷೇಕ ಅಗತ್ಯವಾದದ್ದು.

ದೇವಜನರೇ, ಪವಿತ್ರಾತ್ಮನು ನಿಮ್ಮ ಮೇಲೆ ಇಳಿದುಬರುವವರೆಗೂ ಪ್ರಾರ್ಥಿಸುತ್ತಲೇ ಇರಿ. ಯೇಸುಕ್ರಿಸ್ತನ ಮೇಲೆ ಪಾರಿವಾಳದೋಪಾದಿಯಲ್ಲಿ ಇಳಿದುಬಂದ ಪವಿತ್ರಾತ್ಮನು ನಿಮ್ಮ ಮೇಲೂ ಇಳಿದುಬರುವನು.

*ನೆನಪಿಗೆ : "ದೇವರು ನಜರೇತಿನ ಯೇಸುವನ್ನು ಪವಿತ್ರಾತ್ಮನಿಂದಲೂ ಬಲದಿಂದಲೂ ಅಭಿಷೇಕಿಸಿದನು. ದೇವರು ಆತನ ಸಂಗಡ ಇದ್ದದರಿಂದ ಆತನು ಉಪಕಾರಗಳನ್ನು ಮಾಡುತ್ತಾ ಸೈತಾನನಿಂದ ಬಾಧಿಸಲ್ಪಡುತ್ತಿರುವರೆಲ್ಲರನ್ನೂ ಗುಣಮಾಡುತ್ತಾ ಸಂಚರಿಸಿದನು (ಅ.ಕೃ. 10:38).*



ಮಾರ್ಚ್ 8

## ಆಕಾಶವಾಣಿ!

ಬೆಳಿಗ್ಗೆ : ಧರ್ಮೋ. 5,6,7
ಸಂಜೆ : ಮಾರ್ಕ. 11:1–18

"ನಾವು ಪರಿಶುದ್ಧ ಪರ್ವತದ ಮೇಲೆ ಆತನ ಸಂಗಡ ಇದ್ದಾಗ, ಆಕಾಶದಿಂದ ಬಂದ ಆ ವಾಣಿಯನ್ನು ನಾವೇ ಕೇಳಿದೆವು" (2 ಪೇತ್ರ. 1:18).

ಯೇಸುಕ್ರಿಸ್ತನಿಗೆ ಹಲವು ಸಾರಿ ಆಕಾಶವಾಣಿ ಆಯಿತು. 1. ಆತನು ದೀಕ್ಷಾಸ್ನಾನ ಪಡೆದಾಗ, "ಈತನು ಪ್ರಿಯನಾಗಿರುವ ನನ್ನ ಮಗನು. ಈತನನ್ನು ನಾನು ಮೆಚ್ಚಿದ್ದೇನೆ" ಎಂದು ದೈವವಾಣಿಯಾಯಿತು (ಮತ್ತಾ. 3:17). 2. ರೂಪಾಂತರ ಬೆಟ್ಟಕ್ಕೆ ಯೇಸು ತನ್ನ ಶಿಷ್ಯರಾದ ಪೇತ್ರ, ಯೋಹಾನ, ಯಾಕೋಬರನ್ನು ಕರೆದುಕೊಂಡು ಹೋಗಿ ಪ್ರಾರ್ಥಿಸಿದಾಗ, "ಈತನು ನನ್ನ ಮಗನು, ನಾನು ಆರಿಸಿಕೊಂಡವನು; ಈತನ ಮಾತನ್ನು ಕೇಳಿರಿ" ಎಂಬ ದೈವವಾಣಿ ಆಯಿತು (ಲೂಕ.9:35), 3. ಯೇಸುಕ್ರಿಸ್ತನು "ತಂದೆಯೇ ನಿನ್ನ ಹೆಸರನ್ನು ಮಹಿಮೆಪಡಿಸಿಕೋ" ಅಂದನು. ಅದಕ್ಕೆ "ಮಹಿಮೆ ಪಡಿಸಿದ್ದೇನೆ, ತಿರುಗಿ ಮಹಿಮೆ ಪಡಿಸುವೆನು" ಎಂದು ಆಕಾಶವಾಣಿ ಆಯಿತು (ಯೋಹಾ.12:28).

ನೀವು ಸಹಾ ಕರ್ತನ ಶಬ್ದವನ್ನು ಕೇಳಲು ಕಾತರದಿಂದ ನಿಮ್ಮ ಆಂತರ್ಯವನ್ನು ಆತನ ಕಡೆಗೆ ತಿರುಗಿಸಿರಿ. ನಿಮ್ಮ ಆಂತರ್ಯ ಆತನ ಶಬ್ದಕ್ಕಾಗಿ ಹಂಬಲಿಸಲಿ. ಆಗ ಕರ್ತನ ಮೆಲುದನಿಯನ್ನು ಕೇಳುವಿರಿ. ಆತನು ಸಂತೋಷದಿಂದ ನಿಮ್ಮೊಂದಿಗೆ ಮಾತನಾಡುವನು. ಪುಟ್ಟ ಸಮುವೇಲನೊಂದಿಗೆ ಮಾತನಾಡಲಿಲ್ಲವೇ? "ಕರ್ತನೇ, ಹೇಳು ದಾಸನು ಕಾದಿರುವನು" ಎಂದು ಒಂದು ಚಿಕ್ಕ ಪ್ರಾರ್ಥನೆ ಮಾಡಿದಾಗ ದೊಡ್ಡ ದೊಡ್ಡ ವೇದ ರಹಸ್ಯಗಳನ್ನು ಕರ್ತನು ಅವನಿಗೆ ತಿಳಿಸಿದನಲ್ಲವೇ? ನಿಮ್ಮೊಂದಿಗೆ ಮಾತನಾಡಲು ಆತನು ಬಯಸುವನು. ದಾನಿಯೇಲನು, ನನ್ನ ದೇವರೇ, ನನ್ನೊಂದಿಗೆ ಮಾತನಾಡಿ, ನನ್ನನ್ನು ಬಲಗೊಳಿಸು! ಎಂದು ತಗ್ಗಿಸಿಕೊಂಡು ಕೇಳಿದಾಗ ಕರ್ತನು ದಾನಿಯೇಲನೊಂದಿಗೂ ಸಹಾ ಮಾತನಾಡಿದನು. ಮರೆಯಾದ ರಹಸ್ಯಗಳನ್ನು ಅವನಿಗೆ ಪ್ರಕಟಿಸಿದನು.

ದೇವಜನರೇ, ಕರ್ತನು ನಿಮ್ಮೊಂದಿಗೆ ಮಾತನಾಡುವಂತೆ ಒಂದು ನಿಶ್ಯಬ್ದವಾದ ಪರಿಸರವನ್ನು ಸೃಷ್ಟಿಸಿರಿ. ಪ್ರಪಂಚದ ಶಬ್ದಕ್ಕೆ ನಿಮ್ಮ ಆಂತರ್ಯವನ್ನು, ಕಿವಿಗಳನ್ನು ಮುಚ್ಚಿಬಿಡಿರಿ. "ನನ್ನ ದೇವರು ಮಾತನಾಡುವನು" ಎಂದು ಕೇಳಿಸಿಕೊಳ್ಳುತ್ತಲೇ ಇರಿ. ಮೋಶೆ ಹೇಳುತ್ತಾನೆ ಯೆಹೋವನ ಮಾತನ್ನು ಶ್ರದ್ಧೆಯಿಂದ ಕೇಳಿ ಆತನ ಆಜ್ಞೆಗಳನ್ನೆಲ್ಲಾ ಅನುಸರಿಸಿ ನಡೆದರೆ ಆತನು ಭೂಮಿಯ ಮೇಲಿರುವ ಎಲ್ಲಾ ಜನಾಂಗಗಳಿಗಿಂತಲೂ ನಿಮ್ಮನ್ನು ಉನ್ನತ ಸ್ಥಿತಿಗೆ ತರುವನು (ಧರ್ಮೋ. 28:1) ಎಂದು.

*ನೆನಪಿಗೆ : "ನಿಮ್ಮ ಹಿರಿಯರು ಅರಣ್ಯದಲ್ಲಿರುವ ಮೆರೀಬದಲ್ಲಿ ಮಸ್ಸಾದಿನದಲ್ಲಿ ಮಾಡಿದಂತೆ ನೀವು ನಿಮ್ಮ ಹೃದಯವನ್ನು ಕಠಿಣ ಮಾಡಿಕೊಳ್ಳಬೇಡಿರಿ" (ಕೀರ್ತ. 95:8).*

ಮಾರ್ಚ್ 9

# ಆಕಾಶದಿಂದ!

ಬೆಳಿಗ್ಗೆ : ಧರ್ಮೋ. 8,9,10
ಸಂಜೆ : ಮಾರ್ಕ. 11:1–33

"ಆಹಾ, ವಾಣಿಯು ಮತ್ತೆ ಕೇಳಿಸಿ ಕೂಗು ಎನ್ನುತ್ತದೆ. ಅದಕ್ಕೆ ನಾನು ಏನು ಕೂಗಲಿ ಎಂದು ಕೇಳಲು.... (ಯೆಶಾ. 40:6).

ಕ್ರಿಸ್ತನು ಜನಿಸುವ ಏಳುನೂರು ವರ್ಷಗಳಿಗೆ ಮೊದಲು ಪ್ರಾರ್ಥಿಸುತ್ತಿದ್ದ ಪ್ರವಾದಿಯಾದ ಯೆಶಾಯನಿಗೆ ಆಕಾಶವಾಣಿಯುಂಟಾಯಿತು. "ಎಲ್ಲಾ ಹಳ್ಳಕೊಳ್ಳಗಳು ಮುಚ್ಚಲ್ಪಡುವವು, ಎಲ್ಲಾ ಬೆಟ್ಟಗುಡ್ಡಗಳು ತಗ್ಗಿಸಲ್ಪಡುವವು, ಕೊರಕಲು ನೆಲವು ಸಮವಾಗುವದು. ಯೆಹೋವನ ಮಹಿಮೆಯು ಗೋಚರವಾಗುವದು. ಎಲ್ಲಾ ಮನುಷ್ಯರೂ ಒಟ್ಟಿಗೆ ಅದನ್ನು ಕಾಣುವರು" (ಯೆಶಾ. 40:4–5) ಎಂದು ಆ ವಾಣಿ ತಿಳಿಸಿತು.

ನೋಹನ ಕಾಲದಲ್ಲಿ ಏನು ನಡೆಯಿತೋ, ಮನುಷ್ಯ ಕುಮಾರನ ಬರುವಿಕೆಯ ಕಾಲದಲ್ಲೂ ನಡೆಯುವದು. ಇಡೀ ಪ್ರಪಂಚವು ನಾಶವಾಗುವದು ಎಂದು ಆಕಾಶದಿಂದ ಬಂದ ಎಚ್ಚರಿಕೆಯ ಶಬ್ದವನ್ನು ಕೇಳಿ, ನೋಹನು ದೇವರ ಆಜ್ಞೆಗೆ ವಿಧೇಯನಾಗಿ ನಾವೆಯನ್ನು ಕಟ್ಟಿ ಕುಟುಂಬ ಸಹಿತನಾಗಿ ಜಲ ಪ್ರಳಯದಿಂದ ತಪ್ಪಿಸಿಕೊಂಡನು. ಈಗಲಾದರೋ ಪ್ರಪಂಚವು ಪುನಃ ಅಳಿವಿಗೆ ಇಡಲ್ಪಟ್ಟಿರುವುದು. ಆದರೆ ಜನರೋ, ಅದನ್ನು ಅರಿಯದವರಾಗಿ ಹಣ, ಹಣ ಎಂದು ಹಗಲಿರುಳು ಶ್ರಮೆಪಡುತ್ತಿರುವರೇ ಹೊರತು ಕರ್ತನ ಬರುವಿಕೆಗೆ ಸಿದ್ಧಮಾಡಿಕೊಳ್ಳುತ್ತಿಲ್ಲ. ಸತ್ಯವೇದ ಹೇಳುತ್ತದೆ "ದೇವರು ತಾನು ಮೆಚ್ಚಿದವನಿಗೆ ಜ್ಞಾನವನ್ನೂ, ತಿಳುವಳಿಕೆಯನ್ನೂ, ಸಂತೋಷವನ್ನೂ ದಯಪಾಲಿಸುತ್ತಾನಲ್ಲವೇ; ಪಾಪಿಗಾದರೋ ತನ್ನ ಮೆಚ್ಚಿಕೆಯಾದವನಿಗೆ ಒದಗತಕ್ಕವುಗಳನ್ನು ಕೂಡಿಸಿಡುವ ಪ್ರಯಾಸವನ್ನೇ ನೇಮಿಸುತ್ತಾನೆ. ಇದೂ ಗಾಳಿಯನ್ನು ಹಿಂದಟ್ಟಿದ ಹಾಗೆ ವ್ಯರ್ಥ" (ಪ್ರಸಂಗಿ. 2:26). "ಪಾಪಿಯ ಸೊತ್ತು ಸಜ್ಜನರಿಗೆ ಗಂಟು" (ಜ್ಞಾನೋ. 13:22) ಎಂದು. ಕರ್ತನು ಆಕಾಶದಿಂದ ಏನನ್ನು ಕೂಗಬೇಕೆಂದು ಹೇಳುತ್ತಾನೆ? "ನರಜಾತಿಯೆಲ್ಲಾ ಹುಲ್ಲಿನ ಹಾಗಿದೆ. ಅದರ ಲಾವಣ್ಯವೆಲ್ಲಾ ಅಡವಿಯ ಹೂವಿನಂತಿದೆ. ಯೆಹೋವನ ಶ್ವಾಸವು ಅದರ ಮೇಲೆ ಬೀಸುವದರಿಂದ ಹುಲ್ಲು ಒಣಗಿ ಹೋಗುವದು. ಹೂವು ಬಾಡಿಹೋಗುವದು. ಜನವು ಹುಲ್ಲೇ ಹುಲ್ಲು. ನಮ್ಮ ದೇವರ ಮಾತೋ ಸದಾಕಾಲವೂ ಇರುವದು" ಎಂದು ಕರ್ತನು ತಿಳಿಸುತ್ತಾನೆ (ಯೆಶಾ. 40:6–8). ಇದನ್ನೇ ಹೊಸ ಒಡಂಬಡಿಕೆಯಲ್ಲಿ ಯಾಕೋಬನು ಬರೆಯುತ್ತಾನೆ. ಸೂರ್ಯನು ಉದಯಿಸಿ ಉಷ್ಣವಾದ ಗಾಳಿ ಬೀಸಿ ಹುಲ್ಲನ್ನು ಬಾಡಿಸಲು, ಆ ಹುಲ್ಲಿನ ಹೂವು ಉದುರಿ ಅದರ ರೂಪದ ಸೊಗಸು ಕೆಡುವದಷ್ಟೆ. ಹೀಗೆಯೇ ಐಶ್ವರ್ಯವಂತನು ತನ್ನ ವ್ಯವಹಾರಗಳಲ್ಲಿಯೇ ಕುಂದಿಹೋಗುವನು ಎಂದು (ಯಾಕೋಬ. 1:11).

ದೇವಜನರೇ, ದೇವರು ನಿಮ್ಮನ್ನು ಆಶೀರ್ವದಿಸಬೇಕೆಂದರೆ ಆತನ ಮುಂದೆ ನಿಮ್ಮನ್ನು ತಗ್ಗಿಸಿಕೊಂಡು "ನಾನು ಏನು ಇಲ್ಲ ಬರೀ ಹುಲ್ಲೇ" ಎಂದು ಹೇಳಿ ಆತನ ಮಾರ್ಗಗಳಲ್ಲಿ ನಡೆಯಲು ತೀರ್ಮಾನಿಸಿರಿ".

*ನೆನಪಿಗೆ : "ಉನ್ನತ ಲೋಕವೆಂಬ ಪವಿತ್ರಾಲಯದಲ್ಲಿ ವಾಸಿಸುವ ನಾನು ಜಜ್ಜಿಹೋದ ದೀನಮನದೊಂದಿಗೆ ಇದ್ದುಕೊಂಡು ದೀನನ ಆತ್ಮವನ್ನೂ, ಜಜ್ಜಿಹೋದವನ ಮನಸ್ಸನ್ನೂ ಉಜ್ಜೀವಿಸುವವನಾಗಿದ್ದೇನೆ" (ಯೆಶಾ. 57:15).*



ಮಾರ್ಚ್ 10

# ಪರಲೋಕದ ಬೆಳಕು!

ಬೆಳಿಗ್ಗೆ : ಧರ್ಮೋ. 11,12,13
ಸಂಜೆ : ಮಾರ್ಕ. 12:1–27

ಪಕ್ಕನೆ ಆಕಾಶದೊಳಗಿಂದ ಒಂದು ಬೆಳಕು ಅವನ ಸುತ್ತಲು ಮಿಂಚಿತು. ಅವನು ನೆಲಕ್ಕೆ ಬಿದ್ದು "ಸೌಲನೇ, ಸೌಲನೇ ಯಾಕೆ ನನ್ನನ್ನು ಹಿಂಸೆ ಪಡಿಸುತ್ತೀ" ಎಂದು ಹೇಳುವ ವಾಣಿಯನ್ನು ಕೇಳಿದನು (ಅ.ಕೃ. 9:3–4).

ಸೌಲನು ಪೌಲನಾಗಿ ಮಾರ್ಪಡಲು ಆಕಾಶದೊಳಗಿಂದ ಒಂದು ಬೆಳಕು ಅವನನ್ನು ಸಂಧಿಸಬೇಕಿತ್ತು. ಯಾವ ಮನುಷ್ಯನನ್ನೂ ಪ್ರಕಾಶಗೊಳಿಸುವ ಯೇಸುಕ್ರಿಸ್ತನು, ತನ್ನ ಬೆಳಕನ್ನು ಸೌಲನ ಮೇಲೆ ಪ್ರಕಾಶಿಸುವಂತೆ ಮಾಡಿದನು. ಆ ಬೆಳಕು ಅಧಿಕವಾಗಿದ್ದದರಿಂದ ಅವನು ನೆಲಕ್ಕೆ ಬಿದ್ದನು. ಕಣ್ಣುಗಳು ಕುರುಡಾದವು. ನಂತರ ಆಕಾಶದಿಂದ ಸೌಲನೇ, ಸೌಲನೇ ನನ್ನನ್ನು ಯಾಕೆ ಹಿಂಸೆ ಪಡಿಸುತ್ತೀ? ಎಂಬ ಶಬ್ದ ಉಂಟಾಯಿತು.

ಅಲ್ಲಿಯವರೆಗೆ ಸೌಲನು ಒಂದು ದಿನವಾದರೂ ತಾನು ದೇವರನ್ನು ಹಿಂಸೆ ಪಡಿಸುತ್ತಿದ್ದೇನೆ ಎಂಬ ಅರಿವು ಇಲ್ಲದವನಾಗಿದ್ದನು. ಯೆಹೋವ ದೇವರಿಗಾಗಿ ವೈರಾಗ್ಯವುಳ್ಳವನಾಗಿದ್ದನು. ಆ ಭಕ್ತಿವೈರಾಗ್ಯದ ನಿಮಿತ್ತ ಕ್ರೈಸ್ತಮಾರ್ಗವನ್ನು ಅವನು ಸಹಿಸಲಾರದವನಾಗಿದ್ದನು. ಕ್ರೈಸ್ತರನ್ನು ಸಂಪೂರ್ಣವಾಗಿ ನಾಶಗೊಳಿಸಬೇಕೆಂದು ಯೋಚಿಸಿದ್ದ. ಭಕ್ತಿಯುಳ್ಳವರನ್ನು ದೇವರು ತನಗಾಗಿ ಆರಿಸಿಕೊಳ್ಳುವನು (ಕೀರ್ತ. 4:3). ಸೌಲನು ತಿಳಿಯದೆ ಹಾಗೆ ಮಾಡಿದ್ದರಿಂದ ದೇವರ ಕನಿಕರವನ್ನು ಪಡೆದನು. ಕರ್ತನನ್ನು ಹಿಂಸೆ ಪಡಿಸುವ ಸ್ಥಿತಿಯಿಂದ, ಕರ್ತನನ್ನು ಪ್ರೀತಿಸುವ ಸಂತೋಷದ ಅನುಭವದೊಳಗೆ ಪ್ರವೇಶಿಸಿದನು. ತನ್ನ ಹಳೆಯ ಭಕ್ತಿ ವೈರಾಗ್ಯವನ್ನು ಸುವಾರ್ತೆ ಸಾರುವದಕ್ಕಾಗಿಯೂ, ಆತ್ಮಗಳನ್ನು ರಕ್ಷಿಸುವದಕ್ಕಾಗಿಯೂ ಅವನು ಉಪಯೋಗಿಸಿದನು. ನೀವು ಆಶ್ಚರ್ಯಪಡುವ ರೀತಿಯಲ್ಲಿ ಎಷ್ಟೋ ದುಷ್ಟರನ್ನು ದೇವರು ಸಂಧಿಸಿ, ಅವರನ್ನು ಪೂರ್ಣವಾಗಿ ಮಾರ್ಪಡಿಸಿರುವನು. ಕೇಡು ಮಾಡುವ ಕರಗಳನ್ನು ಉಪಕಾರ ಮಾಡುವ ಕರಗಳನ್ನಾಗಿ ಮಾರ್ಪಡಿಸಿರುವನು. ಕಾನೂನು ಸಮಾಜ ಮಾರ್ಪಡಿಸಲಾಗದವರನ್ನು ಪರಿಶುದ್ಧ ಜನರನ್ನಾಗಿ ಮಾರ್ಪಡಿಸಿರುವನು. ಅವನನ್ನು ತಿದ್ದಲು ಸಾಧ್ಯವೇ ಇಲ್ಲ ಎಂದು ನೆನಸಿದ್ದವರನ್ನು ಕರ್ತನು ಉತ್ತಮವಾದ ದೇವ ಸೇವಕರನ್ನಾಗಿ ಮಾರ್ಪಡಿಸಿರುವನು.

ದೇವಜನರೇ, ಈಗ ನಿಮ್ಮನ್ನು ನೋಡಿ ಒಂದು ಶಬ್ದವು ಪರಲೋಕದಿಂದ ಬರುತ್ತಿರುವದು. ನೀವು ರಕ್ಷಿಸಲ್ಪಡುವದರೊಂದಿಗೆ ನಿಂತುಬಿಡಬಾರದು. ದೀಕ್ಷಾಸ್ನಾನ ಹೊಂದಿ, ಪವಿತ್ರಾತ್ಮನಿಂದ ತುಂಬಲ್ಪಡಬೇಕು. ಕರ್ತನಿಗಾಗಿ ಸೇವೆ ಮಾಡಬೇಕು. ಆತ್ಮಗಳ ಆದಾಯ ಮಾಡಬೇಕು. ಇದುವೇ ನಿಮ್ಮ ದೇವರ ಚಿತ್ತವಾಗಿದೆ.

*ನೆನಪಿಗೆ : "ಯೇಸು ಅವನಿಗೆ ಸದ್ಯಕ್ಕೆ ಒಪ್ಪಿಕೋ; ಹೀಗೆ ನಾವು ಎಲ್ಲಾ ಧರ್ಮವನ್ನು ನೆರವೇರಿಸತಕ್ಕದ್ದಾಗಿದೆ ಎಂದು ಹೇಳಿದಾಗ ಅವನು ಒಪ್ಪಿಕೊಂಡನು" (ಮತ್ತಾ. 3:15).*

ಮಾರ್ಚ್ 11

## ಆಗಸದಿಂದ ಒಂದು ಜೋಳಿಗೆ!

ಬೆಳಿಗ್ಗೆ : ಧರ್ಮೋ. 14,15,16
ಸಂಜೆ : ಮಾರ್ಕ. 12:28–44

"ಅವನು ಧ್ಯಾನಪರವಶನಾಗಿ ಆಕಾಶವು ತೆರೆದಿರುವದನ್ನೂ.... ಪೇತ್ರನೇ ಎದ್ದು ಕೊಯ್ದು ತಿನ್ನು ಎಂದು ಅವನಿಗೆ ಒಂದು ವಾಣಿ ಕೇಳಿಸಿತು" (ಅ.ಕೃ. 10:11,13).

ಅಪೊ. ಪೇತ್ರನು ಯೊಪ್ಪ ಪಟ್ಟಣದಲ್ಲಿದ್ದಾಗ, ಪ್ರಾರ್ಥನೆ ಮಾಡಲು ಮಾಳಿಗೆಯನ್ನು ಹತ್ತಿದನು. ಆಗ ಒಂದು ದರ್ಶನವನ್ನು ಕಂಡನು. ಆಕಾಶವು ತೆರೆದಿರುವದನ್ನೂ, ನಾಲ್ಕು ಮೂಲೆಗಳನ್ನು ಹಿಡಿದಿದ್ದ ಜೋಳಿಗೆಯಂತಿರುವ ಏನೋ ಒಂದು ವಸ್ತುವು ಭೂಮಿಯ ಮೇಲೆ ಇಳಿಯುವುದನ್ನೂ ಕಂಡನು. ಅದರೊಳಗೆ ಸಕಲವಿಧವಾದ ಪಶುಗಳೂ, ನೆಲದ ಮೇಲೆ ಹರಿದಾಡುವ ಕ್ರಿಮಿಕೀಟಗಳೂ ಅಂತರಿಕ್ಷದಲ್ಲಿ ಹಾರಾಡುವ ಹಕ್ಕಿಗಳೂ ಇದ್ದವು. ಆಗ "ಪೇತ್ರನೇ ಎದ್ದು ಕೊಯ್ದು ತಿನ್ನು" ಎಂಬ ವಾಣಿ ಅವನಿಗೆ ಕೇಳಿಸಿತು. ಅದಕ್ಕೆ ಪೇತ್ರನು "ಬೇಡವೇ ಬೇಡ ಸ್ವಾಮಿ ನಾನು ಎಂದೂ ಹೊಲೆ ಪದಾರ್ಥವನ್ನಾಗಲಿ ಅಶುದ್ಧ ಪದಾರ್ಥಗಳನ್ನಾಗಲಿ ತಿಂದವನಲ್ಲ" ಅಂದನು. ದೇವರು ಶುದ್ಧ ಮಾಡಿದ್ದನ್ನು ನೀನು ಹೊಲೆ ಎನ್ನಬೇಡ ಎಂದು ತಿರುಗಿ ಎರಡನೆಯ ಸಾರಿ ಅವನಿಗೆ ವಾಣಿ ಕೇಳಿಸಿತು(ಅ.ಕೃ.10:11–15).

ಆಕಾಶದಿಂದ ಉಂಟಾದ ಹಲವು ವಾಣಿಗಳ ಕುರಿತು ಧ್ಯಾನಿಸುತ್ತಾ ಬಂದಿರುವೆವು. ಯೆಶಾಯನಿಗೆ ಆ ವಾಣಿ ಉಂಟಾಗಿ ಕರ್ತನ ಬರುವಿಕೆಗೆ ಸಿದ್ಧಪಡಿಸಿಕೊಳ್ಳುವಂತೆ ಮಾತನಾಡಿತು. ಸೌಲನಾಗಿದ್ದ ಪೌಲನು ದೀಕ್ಷಾಸ್ನಾನ ಹೊಂದಿ ಅಭಿಷೇಕ ಪಡೆಯುವಂತೆ ಪ್ರೇರೇಪಿಸಿತು. ಈಗ ಪೇತ್ರನ ಬಳಿ ಸುವಾರ್ತೆಯನ್ನು ಅನ್ಯ ಜನರಿಗೆ ಸಾರಬೇಕು ಎಂಬುದನ್ನು ಕುರಿತು ಮಾತನಾಡಿತು. ಇಂದು ಆ ವಾಣಿ, ಅನುಕೂಲವಾದ ಕಾಲದಲ್ಲೂ ಅನುಕೂಲವಿಲ್ಲದ ಕಾಲದಲ್ಲೂ ಸುವಾರ್ತೆಯನ್ನು ಸಾರುವಂತೆ ಪ್ರೇರೇಪಿಸುವದು (2 ತಿಮೊ. 4:2). ಪರಲೋಕ ರಾಜ್ಯದ ಈ ಸುವಾರ್ತೆಯು ಸರ್ವಲೋಕದಲ್ಲಿ ಎಲ್ಲಾ ಜನಾಂಗಗಳಿಗೆ ಸಾಕ್ಷಿಗಾಗಿ ಸಾರಲ್ಪಡುವದು. ಆಗ ಅಂತ್ಯ ಬರುವದು (ಮತ್ತಾಯ 24:14) ಎಂದು ಸತ್ಯವೇದ ಹೇಳುತ್ತದೆ. ಶತಾಧಿಪತಿಯಾದ ಕೊರ್ನೇಲ್ಯನೂ ಅವನ ಕುಟುಂಬದವರು ಸುವಾರ್ತೆಯನ್ನು ಕೇಳಲು ಸಿದ್ಧರಾಗಿದ್ದರು. ಅವನು ಯೆಹೂದ್ಯನಾಗಿದ್ದನು. ಆದರೂ ಬಹಳ ದೇವಭಕ್ತಿವಂತನಾಗಿದ್ದನು. ಕರ್ತನು ಅವನಿಗೆ ಸುವಾರ್ತೆಸಾರಲು ನಿಶ್ಚಯಿಸಿದನು. ಪೇತ್ರನ ಮೂಲಕ ಅವನಿಗೆ ಸುವಾರ್ತೆ ಸಾರಲ್ಪಟ್ಟಿತು.

ದೇವಜನರೇ, ಯೇಸುಕ್ರಿಸ್ತನು ಪಾಪಿಗಳನ್ನು ರಕ್ಷಿಸಲು ಈ ಭೂಮಿಗೆ ಬಂದನು. ಯಾರ್‍ಯಾರು ತಮ್ಮನ್ನು ಪಾಪಿಗಳೆಂದು ಒಪ್ಪಿಕೊಂಡು ದೇವರ ಕೃಪೆಗಾಗಿ ಬೇಡುವರೋ ಅವರನ್ನು ರಕ್ಷಿಸಲು ದೇವರು ಸತ್ಯವಂತನಾಗಿರುವನು. ಮೇಲ್ಜಾತಿಯವರು, ಕೀಳ್ಜಾತಿಯವರೆಂಬ ವ್ಯತ್ಯಾಸ ಆತನಲ್ಲಿಲ್ಲ. ಎಲ್ಲರನ್ನೂ ಅಂಗೀಕರಿಸುವ ಕಿಸ್ತನ ಬಳಿಗೆ ಬನ್ನಿರಿ.

*ನೆನಪಿಗೆ : "ನರರು ಬರೀ ಉಸಿರೇ, ನರಾಧಿಪತಿಗಳು ಬರೀ ಮಾಯವೇ, ಅವರೆಲ್ಲರನ್ನೂ ತ್ರಾಸಿನಲ್ಲಿ ತೂಗಿನೋಡಿದರೆ ಉಸಿರಿಗಿಂತಲೂ ಲಘು" (ಕೀರ್ತ. 62:9).*



ಮಾರ್ಚ್ 12

## ಮೇಘದೊಳಗಿಂದ ವಾಣಿ!

ಬೆಳಿಗ್ಗೆ : ಧರ್ಮೋ. 17,18,19
ಸಂಜೆ : ಮಾರ್ಕ. 13:1–17

ಅವರು ಮೋಡದೊಳಗೆ ಸೇರಿದಾಗ, ಹೆದರಿದರು. ಆಗ ಆ ಮೋಡದೊಳಗಿಂದ "ಈತನು ನನ್ನ ಮಗನು, ನಾನು ಆರಿಸಿಕೊಂಡವನು. ಈತನ ಮಾತನ್ನು ಕೇಳಿರಿ" ಎಂಬ ಆಕಾಶವಾಣಿ ಆಯಿತು" (ಲೂಕ. 9:34–35).

ಯೇಸುಕ್ರಿಸ್ತನು ಪೇತ್ರನನ್ನೂ, ಯೋಹಾನ, ಯಾಕೋಬರನ್ನೂ ಕರೆದುಕೊಂಡು ಪ್ರಾರ್ಥನೆ ಮಾಡಲು ಒಂದು ಬೆಟ್ಟವನ್ನೇರಿದನು. ಆತನು ಪ್ರಾರ್ಥಿಸುತ್ತಿರಲು ಆತನ ಮುಖ ಭಾವವು ಬೇರೆಯಾಯಿತು. ಆತನ ಉಡುಪು ಬೆಳ್ಳಗಾಗಿ ಮಿಂಚುತ್ತಾ ಇತ್ತು (ಲೂಕ. 9:28,29) ಎಂದು ಸತ್ಯವೇದ ಹೇಳುತ್ತದೆ.

ಪ್ರಾರ್ಥಿಸುವಾಗ ಇಂಥಹ ಅದ್ಭುತವಾದ ಸಂಭವಗಳು ನಡೆಯುವದು. ಯೇಸುಕ್ರಿಸ್ತನು ದೀಕ್ಷಾಸ್ನಾನ ಪಡೆದಾಗ ಮೊದಲು ಪ್ರಾರ್ಥಿಸಿದನು. ಆಗ ಆಕಾಶವು ತೆರೆಯಲ್ಪಟ್ಟಿತು. ಪವಿತ್ರಾತ್ಮನು ಪಾರಿವಾಳದ ರೂಪದಲ್ಲಿ ಆತನ ಮೇಲೆ ಇಳಿದನು. ರೂಪಾಂತರ ಬೆಟ್ಟದಲ್ಲಿ ಆತನು ಪ್ರಾರ್ಥಿಸಿದಾಗ ಆತನ ಮುಖಭಾವ ಪ್ರಕಾಶಿಸಿತು. ಗೆತ್ಸೇಮನೆ ತೋಟದಲ್ಲಿ ಆತನು ಪ್ರಾರ್ಥಿಸುತ್ತಿದ್ದಾಗ, ಒಬ್ಬ ದೇವದೂತನು ಇಳಿದುಬಂದು ಆತನನ್ನು ಬಲಪಡಿಸಿದನು (ಲೂಕ. 22:43). ನೀವೂ ಆಸಕ್ತಿಯುಳ್ಳ ಪ್ರಾರ್ಥನಾ ಜೀವಿತಕ್ಕೆ ನಿಮ್ಮನ್ನು ಒಪ್ಪಿಸಿಕೊಡಿರಿ. ನಿಮ್ಮ ಜೀವಿತವೆಲ್ಲಾ ಪ್ರಾರ್ಥನೆಯಾಗಿರಲಿ. ಆಗ ದೇವರೊಂದಿಗೆ ಎಡೆಬಿಡದೆ ಸಂಚರಿಸುವಿರಿ. ಪ್ರಾರ್ಥಿಸುವವರೇ ಕರ್ತನ ಬರುವಿಕೆಯಲ್ಲಿ ಮಹಿಮೆಯ ಮೇಲೆ ಮಹಿಮೆ ಹೊಂದಿ ಮರುರೂಪಗೊಳ್ಳುವರು. ಆದ್ದರಿಂದ ಪ್ರಾರ್ಥನೆಯು ನಿಮ್ಮ ಜೀವಿತದ ಉಸಿರಾಗಿರಲಿ. ಅಂದು ಆಕಾಶದಿಂದ ಉಂಟಾದ ಶಬ್ದವನ್ನು ಶಿಷ್ಯರಾದ ಪೇತ್ರ, ಯೋಹಾನ, ಯಾಕೋಬರು ಕೇಳಿಸಿಕೊಂಡರು. ಇನ್ನು ಮೇಲೆ ಆಕಾಶದಿಂದ ದೇವದೂತರ ತುತೂರಿ ಶಬ್ದ ಕೇಳಲ್ಪಡುವದು. ಆ ಶಬ್ದವನ್ನು ಕೇಳಿ ಕ್ರಿಸ್ತನಲ್ಲಿ ಮರಣ ಹೊಂದಿದವರು ಮೊದಲು ಎಬ್ಬಿಸಲ್ಪಡುವರು. ನಂತರ ಬದುಕಿರುವ ಸಕಲ ದೇವಜನರು ದೇವಮಕ್ಕಳೂ ರೂಪಾಂತರಗೊಳ್ಳುವರು. ಆ ಒಂದು ಉದ್ದೇಶದಿಂದಲೇ ಕರ್ತನು ಲೋಕದವರಿಂದ ನಿಮ್ಮನ್ನು ಬೇರ್ಪಡಿಸಿರುವನು.

ದೇವಮಕ್ಕಳೇ, ಕರ್ತನು ನಮ್ಮನ್ನು ಅಶುದ್ಧತೆಗಲ್ಲ, ಪರಿಶುದ್ಧತೆಗಾಗಿಯೇ ಕರೆದಿರುವನು (1 ಥೆಸ. 4:7). ನೀವು ಪ್ರಾರ್ಥಿಸಬೇಕು, ಪರಿಶುದ್ಧರಾಗಿ ಕಾಣಲ್ಪಡಬೇಕು. ಕರ್ತನ ಬರುವಿಕೆಯನ್ನು ಕಾತರದಿಂದ ಎದುರು ನೋಡುವವರಾಗಿರಬೇಕೆಂದು ಆಕಾಶದಿಂದ ಉಂಟಾದ ವಾಣಿ ನಿಮ್ಮೊಡನೆ ಮಾತನಾಡುತ್ತಿರುವದು.

*ನೆನಪಿಗೆ : "ನನ್ನನ್ನು ಪ್ರೀತಿಸುವವರನ್ನು ನಾನು ಪ್ರೀತಿಸುತ್ತೇನೆ. ಆತುರದಿಂದ ಹುಡುಕುವವರು ನನ್ನನ್ನು ಕಂಡುಕೊಳ್ಳುವರು" (ಜ್ಞಾನೋ. 8:17).*

ಮಾರ್ಚ್ 13

## ಮಹಿಮೆ ಪಡಿಸುವ ಶಬ್ದ!

ಬೆಳಿಗ್ಗೆ : ಧರ್ಮೋ. 20,21,22
ಸಂಜೆ : ಮಾರ್ಕ. 13:18–37

"ತಂದೆಯೇ ನಿನ್ನ ಹೆಸರನ್ನು ಮಹಿಮೆ ಪಡಿಸಿಕೋ ಅಂದನು ಅದಕ್ಕೆ ಮಹಿಮೆ ಪಡಿಸಿದ್ದೇನೆ, ತಿರುಗಿ ಮಹಿಮೆ ಪಡಿಸುವೆನು ಎಂದು ಆಕಾಶವಾಣಿಯಾಯಿತು" (ಯೋಹಾ. 12:28).

ಇಲ್ಲಿ ಕರ್ತನಾದ ಯೇಸುಕ್ರಿಸ್ತನು ತನ್ನ ಮರಣವನ್ನು ಕುರಿತು ಶಿಷ್ಯರೊಂದಿಗೆ ಮಾತನಾಡುತ್ತಿರುವನು. "ಈಗ ನನ್ನ ಪ್ರಾಣವು ತತ್ತರಿಸುತ್ತದೆ, ಮತ್ತು ನಾನೇನು ಹೇಳಲಿ? ತಂದೆಯೇ ಈ ಕಾಲದೊಳಗಿಂದ ನನ್ನನ್ನು ತಪ್ಪಿಸು. ಆದರೆ ಇದಕ್ಕಾಗಿಯೇ ಈ ಕಾಲ ಸೇರಿದೆನು. ತಂದೆಯೇ ನಿನ್ನ ಹೆಸರನ್ನು ಮಹಿಮೆ ಪಡಿಸಿಕೋ" ಅಂದನು (ಯೋಹಾ. 12:27,28).

ಕರ್ತನಾದ ಯೇಸುಕ್ರಿಸ್ತನು ಆಡಿದ ಪ್ರತಿಯೊಂದು ಮಾತನ್ನೂ ಪರಲೋಕ ಗಮನಿಸುತ್ತಲೇ ಇತ್ತು. ಪ್ರತಿಯೊಬ್ಬ ಕ್ರೈಸ್ತನ ಅಂತ್ಯವು ಆತನ ನಾಮವನ್ನು ಮಹಿಮೆ ಪಡಿಸುವಂಥದ್ದಾಗಿರಬೇಕು. ಎಂಬುದನ್ನು ಪರಲೋಕ ನಿರೀಕ್ಷಿಸುತ್ತದೆ. ಕ್ರಿಸ್ತೇಸುವಿಗೆ ಪರಲೋಕ ನೀಡಿದ ಪ್ರತ್ಯುತ್ತರವೇನು? "ಮಹಿಮೆ ಪಡಿಸಿದ್ದೇನೆ ತಿರುಗಿ ಮಹಿಮೆ ಪಡಿಸುವೆನು" ಎಂಬುದೇ. ಅಲ್ಲಿ ನಿಂತಿದ್ದ ಜನರು ಅದನ್ನು ಕೇಳಿ "ಗುಡುಗಿತು" ಅಂದರು. ಇನ್ನು ಕೆಲವರು ದೇವದೂತನು ಈತನ ಸಂಗಡ ಮಾತನಾಡಿದನು ಅಂದರು. ಆದರೆ ಯೇಸು ಅವರಿಗೆ "ಈ ಆಕಾಶವಾಣಿ ನನಗಾಗಿ ಆಗಲಿಲ್ಲ, ನಿಮಗಾಗಿ ಆಯಿತು" ಅಂದನು (ಯೋಹಾ. 12:29–30). ಒಬ್ಬ ಮನುಷ್ಯನ ಜನ್ಮದಿನಕ್ಕಿಂತಲೂ, ಮರಣದಿನ ಮಹಿಮೆಯುಳ್ಳದ್ದಾಗಿರಬೇಕು. ಪ್ರಾರಂಭವು ಅಲ್ಪವಾಗಿ ಎಣಿಸಲ್ಪಟ್ಟರೂ ಅಂತ್ಯವೋ ಪರಲೋಕವು ಘನಪಡಿಸಿ ಮಹಿಮೆ ಪಡಿಸಬೇಕು. ಒಬ್ಬ ಮನುಷ್ಯನು ಪಾಪದಿಂದ ತುಂಬಿದ ಈ ಭೂಮಿಯಲ್ಲಿ ಕಷ್ಟ ಸಂಕಟಗಳನ್ನು ಅನುಭವಿಸಲೇ ಹುಟ್ಟಿರುವನೆಂದು ಪ್ರಸಂಗಿ ಹೇಳುತ್ತಾನೆ. ಆದರೆ ಅವನು ಈ ಭೂಮಿಯಲ್ಲಿ ಜೀವಿಸುವಾಗ ಕ್ರಿಸ್ತನನ್ನು ಅರಿತುಕೊಂಡು ಆತನನ್ನೇ ಆಶ್ರಯಿಸುವದಾದರೆ ಭಾಗ್ಯವಂತನಾಗಿರುವನು. ನಮ್ಮನ್ನು ಪಾಪ ಶೋಧನೆಗಳಿಂದ, ಕಷ್ಟ ಸಂಕಟ, ವ್ಯಾಧಿಗಳಿಂದ ಬಿಡುಗಡೆಗೊಳಿಸುವದಕ್ಕಾಗಿಯೇ ಕ್ರಿಸ್ತನು ಈ ಲೋಕದಲ್ಲಿ ಯಜ್ಞರೂಪ ಪ್ರಾಯಶ್ಚಿತ್ತವಾಗಿ ತನ್ನನ್ನೇ ಆ ಕ್ರೂಜೆಯ ಮರಣಕ್ಕೆ ಒಪ್ಪಿಸಿಕೊಟ್ಟನು.

ದೇವಜನರೇ, ನಾನೂ ನೀವೂ ಸಾಯುವಾಗ ಒಂದು ಗೋದಿಯ ಕಾಳಾಗಿ ಮರಣಹೊಂದಬೇಕೇ ಹೊರತು ಬರೀ ಹೊಟ್ಟಾಗಿ ಸಾಯಬಾರದು. ಗೋದಿಕಾಳನ್ನು ಕರ್ತನು ತನ್ನ ಪರಲೋಕದ ಕಣಜದಲ್ಲಿ ಸೇರಿಸುವನು.

*ನೆನಪಿಗೆ : ದೂಳಿನ ನೆಲದೊಳಗೆ ದೀರ್ಘ ನಿದ್ರೆ ಮಾಡುವವರಲ್ಲಿ ಅನೇಕರು ಎಚ್ಚೆತ್ತು ಕೆಲವರು ನಿತ್ಯಜೀವವನ್ನು, ಕೆಲವರು ನಿಂದನೆ ನಿತ್ಯ ತಿರಸ್ಕಾರಗಳನ್ನು ಅನುಭವಿಸುವರು. (ದಾನಿ. 12:2).*



ಮಾರ್ಚ್ 14

## ತೆರೆಯಲ್ಪಟ್ಟ ಆಕಾಶ!

ಬೆಳಿಗ್ಗೆ : ಧರ್ಮೋ. 23,24,25
ಸಂಜೆ : ಮಾರ್ಕ. 14:1–25

"ನಿಮ್ಮ ಬಳಿಯಿಂದ ಆಕಾಶದೊಳಕ್ಕೆ ಸೇರಿಸಲ್ಪಟ್ಟಿರುವ ಈ ಯೇಸು ಯಾವ ರೀತಿಯಲ್ಲಿ ಆಕಾಶದೊಳಕ್ಕೆ ಹೋಗಿರುವದನ್ನು ನೀವು ಕಂಡಿರೋ ಅದೇ ರೀತಿಯಲ್ಲಿ ಬರುವನು ಎಂದು ಹೇಳಿದರು" (ಅ.ಕೃ. 1:11).

ಈ ತಿಂಗಳಲ್ಲಿ ಆಕಾಶದಿಂದ ಬರುವ ಆಶೀರ್ವಾದಗಳನ್ನು ಕುರಿತು ಧ್ಯಾನಿಸುತ್ತಾ ಬಂದಿರುವೆವು. "ಯೇಸು ಬಾಧೆಪಟ್ಟು ಸತ್ತು ಜೀವಿತನಾಗಿ ಎದ್ದ ಮೇಲೆ ಅನೇಕ ಪ್ರಮಾಣಗಳಿಂದ ಅಪೊಸ್ತಲರಿಗೆ ತೋರಿಸಿಕೊಂಡನು. ನಲವತ್ತು ದಿವಸಗಳ ತನಕ ಅವರಿಗೆ ಕಾಣಿಸಿಕೊಳ್ಳುತ್ತಾ ದೇವರ ರಾಜ್ಯದ ವಿಷಯವಾದ ಸಂಗತಿಗಳನ್ನು ಹೇಳುತ್ತಾ ಇದ್ದನು ಎಂದು ಅ.ಕೃ. 1:3ರಲ್ಲಿ ನೋಡುತ್ತೇವೆ. ನಂತರ ಶಿಷ್ಯರು ನೋಡುತ್ತಿದ್ದಂತೆಯೇ ಅವರ ಕಣ್ಣಿಗೆ ಮರೆಯಾಗಿ ಒಂದು ಮೋಡವು ಆತನನ್ನು ಮೇಲಕ್ಕೆ ಒಯ್ಯಿತು. ಅವರು ಹಾಗೆ ಆಕಾಶದ ಕಡೆಗೆ ನೋಡುತ್ತಿರುವಾಗ ಇಬ್ಬರು ದೇವದೂತರು ಅವರಿಗೆ ಕಾಣಿಸಿಕೊಂಡು ನೀವು ಯಾವ ರೀತಿಯಲ್ಲಿ ಆತನು ಆಕಾಶದೊಳಗೆ ಹೋಗುವದನ್ನು ಕಂಡಿರೋ ಅದೇ ರೀತಿಯಲ್ಲಿ ಇಳಿದುಬರುವನು ಎಂದು ಹೇಳಿದರು (ಅ.ಕೃ. 1:9–11).

ಪ್ರಿಯರೇ, ಈ ಪ್ರಪಂಚ ನಮ್ಮ ನಿರಂತರವಾದ ವಾಸಸ್ಥಳವಲ್ಲ ದಾರಿಹೋಕರಂತೆ ಈ ಲೋಕದ ಮಾರ್ಗವಾಗಿ ಸಾಗಿಹೋಗುತ್ತೇವೆ. ಸ್ವಲ್ಪಕಾಲ ಈ ಭೂಮಿಯಲ್ಲಿ ಬಾಳುವಂತೆ ಕರ್ತನು ಒಂದು ಅವಕಾಶವನ್ನು ನೀಡಿರುವನು. ಅಪೊ. ಪೌಲನು ಹೀಗೆ ಬರೆಯುತ್ತಾನೆ "ನಾವಾದರೋ ಪರಲೋಕ ಸಂಸ್ಥಾನದವರು; ಕರ್ತನಾದ ಯೇಸುಕ್ರಿಸ್ತನು ಅಲ್ಲಿಂದಲೇ ರಕ್ಷಕನಾಗಿ ಬರುವದನ್ನು ಎದುರುನೋಡುತ್ತಾ ಇದ್ದೇವೆ" (ಫಿಲಿ. 3:20) ಎಂದು. ಹೌದು ಆಗ ನಾವು ಕ್ರಿಸ್ತನ ಸುಂದರ ಮುಖವನ್ನು ಮುಖಾಮುಖಿಯಾಗಿ ಕಾಣುತ್ತೇವೆ. ಆತನನ್ನು ನೋಡುವಾಗ ಈ ಲೋಕದ ಜೀವಿತದಲ್ಲಿ ಪಟ್ಟ ಎಲ್ಲಾ ಕಷ್ಟಗಳು ಮರೆತುಹೋಗುವದು.

ದೇವಮಕ್ಕಳೇ, ಈ ಭೂಮಿಯಲ್ಲಿ ಜೀವಿಸಿರುವಷ್ಟು ಕಾಲವೂ ಪರಲೋಕದ ಚಿಂತನೆ ಉಳ್ಳವರಾಗಿ ಕ್ರಿಸ್ತಯೇಸುವನ್ನು ಕುರಿತ ಚಿಂತನೆಯುಳ್ಳವರಾಗಿ ಬಾಳುವದನ್ನು ಕಲಿತುಕೊಳ್ಳಿರಿ. ನೀವು ಕ್ರಿಸ್ತನೊಳಗೆ ಎಬ್ಬಿಸಲ್ಪಟ್ಟಿರುವದರಿಂದ ಮೇಲಿರುವದನ್ನೇ ಹುಡುಕಿರಿ. ಅಲ್ಲಿ ಕ್ರಿಸ್ತನು ದೇವರ ಬಲಗಡೆಯಲ್ಲಿ ಆಸನಾರೂಢನಾಗಿದ್ದಾನೆ ಎಂದು ಅಪೊ. ಪೌಲನು ಹೇಳುತ್ತಾನೆ (ಕೊಲೊ. 3:1).

*ನೆನಪಿಗೆ : ಮಿಂಚು ಮಿಂಚುತ್ತಾ ಆಕಾಶದಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಯವರೆಗೂ ಹೇಗೆ ಹೊಳೆಯುವದೋ ಹಾಗೆಯೇ ಮನುಷ್ಯಕುಮಾರನು ತನ್ನ ದಿನದಲ್ಲಿರುವನು (ಲೂಕ.17:24)*

ಮಾರ್ಚ್
15

## ತೆರೆದ ಆಗಸ!

ಬೆಳಿಗ್ಗೆ : ಧರ್ಮೋ. 26,27
ಸಂಜೆ : ಮಾರ್ಕ. 14:26–52

ಅವನು ಪವಿತ್ರಾತ್ಮಭರಿತನಾಗಿ ಆಕಾಶದ ಕಡೆಗೆ ದೃಷ್ಟಿಸಿ ನೋಡಿ ದೇವರ ಪ್ರಭಾವವನ್ನೂ, ದೇವರ ಬಲಗಡೆಯಲ್ಲಿ ನಿಂತಿದ್ದ ಯೇಸುವನ್ನೂ ಕಂಡು "ಅಗೋ, ಆಕಾಶವು ತೆರೆದಿರುವದನ್ನೂ ಮನುಷ್ಯಕುಮಾರನು ದೇವರ ಬಲಗಡೆಯಲ್ಲಿ ನಿಂತಿರುವದನ್ನೂ ನೋಡುತ್ತೇನೆ ಎಂದು ಹೇಳಿದನು (ಅ.ಕೃ. 7:55,56).

ಯೆಹೂದ್ಯರು ದೇವಸೇವಕನಾದ ಸ್ತೆಫನನನ್ನು ಕಲ್ಲೆಸೆದು ಕೊಲ್ಲುವ ಒಂದು ಸಮಯ ಬಂದಿತು. ಸ್ತೆಫನನು ತನ್ನ ಜೀವಿತದ ಅಂತಿಮ ವೇಳೆಯನ್ನು ಸಮೀಪಿಸುತ್ತಿದ್ದನು. ಯೆಹೂದ್ಯರು ಕೋಪಾವೇಷದಿಂದ ಅವನ ಮೇಲೆ ಕಲ್ಲೆಸೆಯಲು ಸಿದ್ಧರಾಗಿ ಒಟ್ಟಿಗೆ ಕಲ್ಲುಗಳನ್ನೆಸೆದರು. ಆದರೆ ಸ್ತೆಫನನು ತನ್ನ ವೈರಿಗಳ ಮುಂದೆ ತನಗಾಗಿ ಒಂದು ಔತಣವನ್ನು ಸಿದ್ಧಪಡಿಸುವ ದೇವರನ್ನು ಪ್ರೀತಿಯಿಂದ ದೃಷ್ಟಿಸಿದಾಗ ಆಕಾಶವು ತೆರೆದಿರುವದನ್ನೂ ಮನುಷ್ಯಕುಮಾರನು ದೇವರ ಬಲಗಡೆಯಲ್ಲಿ ನಿಂತಿರುವದನ್ನು ಕಾಣುತ್ತಿದ್ದೇನೆ ಎಂದು ಹೇಳುತ್ತಾನೆ.

ಪರಲೋಕದ ದೃಶ್ಯ ಅವನ ಮನೋವೇದನೆಗಳನ್ನು ಮಾರ್ಪಡಿಸಿ ಆನಂದವನ್ನು ತಂದಿತು. ಈ ಪ್ರಪಂಚದ ಜೀವಿತ ಮುಗಿಯುವಾಗ ಮಹಿಮೆಯಾದ ನಿತ್ಯ ಜೀವಿತ ಪ್ರಾರಂಭವಾಗುವದು. ಕ್ರಿಸ್ತನೊಂದಿಗೆ ಜೀವಿಸುವೆವು ಎಂಬ ಭಾವನೆಯೇ ಮರಣದ ಮಾರ್ಗವಾಗಿ ಸಾಗಿಹೋಗಲು ಸಹಾಯಕವಾಗಿರುವದು. ಶತ್ರುಗಳು ಎಸೆದ ಕಲ್ಲುಗಳಿಂದ ಉಂಟಾದ ವೇದನೆಗಳು ಈಗ ಸಂತೋಷದಿಂದ ಕೂಡಿದ್ದಾಗಿದ್ದಿತು. ಮುಂದಿನ ಕಾಲದಲ್ಲಿ ಪ್ರತ್ಯಕ್ಷವಾಗುವ ಮಹಿಮಪದವಿಯನ್ನು ಆಲೋಚಿಸಿ ಈಗಿನ ಕಾಲದ ಕಷ್ಟಗಳು ಅಲ್ಪವೇ ಸರಿ ಎಂದು ಎಣಿಸುತ್ತೇನೆ (ರೋಮಾ. 8:18) ಎಂದು ಅಪೊ.ಪೌಲನು ಹೇಳುತ್ತಾನೆ. ರಾತ್ರಿ ಅಧಿಕವಾಗಿ ಕತ್ತಲಾಗುವಾಗಲೇ, ಆಕಾಶದಲ್ಲಿ ನಕ್ಷತ್ರಗಳು ಅಧಿಕವಾಗಿ ಪ್ರಕಾಶಿಸಲಾರಂಭಿಸುವದು ಎಂದು ಒಬ್ಬ ಭಕ್ತನು ಹೇಳುತ್ತಾನೆ. ಶದ್ರಕ್, ಮೇಶಕ್, ಅಬಿದ್ನೆಗೋ ಎಂಬ ಇಬ್ರಿಯ ಯುವಕರನ್ನು ಅಗ್ನಿಕುಂಡದಲ್ಲಿ ಹಾಕಿದಾಗ ಅಲ್ಲಿ ದೇವಕುಮಾರನಾದ ಯೇಸು ತಾನೇ ಅವರಿಗಾಗಿ ಕಾದು ನಿಂತಿದ್ದನು. ಮರುಕ್ಷಣವೇ ಅವರ ಕಟ್ಟುಗಳು ತುಂಡರಿಸಲ್ಪಟ್ಟು ಕ್ರಿಸ್ತನ ಕೈ ಹಿಡಿದು ನಡೆದಾಡಿದರು.

ದೇವಮಕ್ಕಳೇ, ನಿಮಗೆ ಕಷ್ಟ ಸಂಕಟಗಳು ಮುಸುಕುವಾಗ, ಪರಿಸ್ಥಿತಿಗಳನ್ನು ದೃಷ್ಟಿಸದೆ, ಶತ್ರುಗಳನ್ನು ನೋಡದೆ ಕರ್ತನ ಮುಖವನ್ನು ನೋಡಿರಿ. ತಂದೆಯ ಬಲಗಡೆಯಲ್ಲಿ ನಿಂತಿರುವ ಕ್ರಿಸ್ತನನ್ನು ನೋಡಿರಿ. ಆತನ ಕರಗಳು ನಿಮ್ಮನ್ನು ಸಂತೈಸಲು ನಿಮ್ಮ ಕಡೆಗೆ ಚಾಚಲ್ಪಟ್ಟಿರುವದು.

*ನೆನಪಿಗೆ : "ಕ್ರಿಸ್ತನಲ್ಲಿ ನಿಮ್ಮನ್ನು ತನ್ನ ನಿತ್ಯಪ್ರಭಾವಕ್ಕೆ ಕರೆದ ಕೃಪಾಪೂರ್ಣನಾದ ದೇವರು ತಾನೇ ನೀವು ಸ್ವಲ್ಪಕಾಲ ಬಾಧೆಪಟ್ಟ ಮೇಲೆ ನಿಮ್ಮನ್ನು ಯೋಗ್ಯಸ್ಥಿತಿಗೆ ತಂದು ನೆಲೆಗೊಳಿಸಿ ಬಲಪಡಿಸುವನು" (1 ಪೇತ್ರ. 5:10).*



ಮಾರ್ಚ್
16

## ಅಬ್ರಹಾಮನಿಗೊಂದು ವಾಣಿ!

ಬೆಳಿಗ್ಗೆ : ಧರ್ಮೋ. 28,29
ಸಂಜೆ : ಮಾರ್ಕ. 14:53–72

ಯೆಹೋವನ ದೂತನು ಆಕಾಶದೊಳಗಿಂದ "ಅಬ್ರಹಾಮನೇ, ಅಬ್ರಹಾಮನೇ ಎಂದು ಅವನನ್ನು ಕರೆದನು. ಅದಕ್ಕೆ ಅಬ್ರಹಾಮನು "ಇಗೋ, ಇದ್ದೇನೆ ಅಂದನು" (ಆದಿ. 22:11).

ಸತ್ಯವೇದದಲ್ಲಿ ಅಬ್ರಹಾಮನು ದೇವರ ಸ್ನೇಹಿತ ಎಂದೂ, ವಿಶ್ವಾಸಿಗಳ ತಂದೆ ಎಂದೂ, ಇಬ್ರಿಯರ ಮೂಲಪಿತೃವೆಂದೂ ಕರೆಯಲ್ಪಟ್ಟಿರುವನು. ದೇವರು ಅಬ್ರಹಾಮನಿಗೆ ಹತ್ತು ಬಾರಿ ದರ್ಶನ ನೀಡಿರುವನು. ಸ್ವಪ್ನಗಳ ಮೂಲಕವೂ ದರ್ಶನಗಳ ಮೂಲಕವೂ ಅವನೊಂದಿಗೆ ದೇವರು ಮಾತನಾಡಿದನು.

ಅಬ್ರಹಾಮನು ತನ್ನ ನಂಬಿಕೆಯ ಕುರಿತಾಗಿ ಒಂದು ಬಹುದೊಡ್ಡ ಶೋಧನೆಯನ್ನು ಎದುರಿಸಬೇಕಾಯಿತು. ಒಂದು ದಿನ ಕರ್ತನು ಅಬ್ರಹಾಮನಿಗೆ ನಿನಗೆ ಪ್ರಿಯನಾಗಿರುವ ಒಬ್ಬನೇ ಮಗನಾದ ಇಸಾಕನನ್ನು ಮೋರಿಯಾ ಬೆಟ್ಟದಲ್ಲಿ ತನಗೆ ಬಲಿಯಾಗಿ ಅರ್ಪಿಸಬೇಕು (ಆದಿ. 22:2) ಎಂದು ಹೇಳಿದನು. ಆ ಮಾತುಗಳನ್ನು ಕೇಳಿದ ಅಬ್ರಹಾಮನ ಆಂತರ್ಯ ಬಹಳವಾಗಿ ವೇದನೆಗೆ ಒಳಗಾಗಿರಬಹುದಲ್ಲವೇ. ಇಂಥಹ ಪರಿಸ್ಥಿತಿಯನ್ನು ಯಾವ ತಂದೆಯಾದರೂ ಎದುರಿಸಿ ನಿಲ್ಲಲು ಸಿದ್ಧನಾದಾನು? ತಂದೆಯಾದ ದೇವರು ತನ್ನ ಏಕಪುತ್ರನಾದ ಯೇಸುಕ್ರಿಸ್ತನನ್ನು ನಮಗಾಗಿ ಕಲ್ವಾರಿಯಲ್ಲಿ ಒಪ್ಪಿಸಿಕೊಡಲು ತೀರ್ಮಾನಿಸಿದಾಗ, ಆತನ ಹೃದಯ ಎಷ್ಟು ನೊಂದಿರಬಹುದು! ಅಂಥಹ ಪರಿಸ್ಥಿತಿಯಲ್ಲಿ ತನ್ನ ಸ್ನೇಹಿತನಾದ ಅಬ್ರಹಾಮನು ಯಾವ ರೀತಿಯಲ್ಲಿ ತನ್ನ ವಿಶ್ವಾಸದಲ್ಲಿ ನೆಲೆಯಾಗಿ ನಿಲ್ಲುವನು ಎಂಬುದನ್ನು ಅರಿಯುವದಕ್ಕಾಗಿಯೇ ಆ ಶೋಧನೆಯನ್ನು ಅಬ್ರಹಾಮನಿಗೆ ಅನುಮತಿಸಿದನು. ದೇವರು ಸತ್ತವರನ್ನು ಬದುಕಿಸುವವನಾಗಿಯೂ, ಇಲ್ಲದ್ದನ್ನು ಇರುವುದಾಗಿ ಕರೆಯುವವನಾಗಿಯೂ ಇದ್ದಾನೆಂದು ಅಬ್ರಹಾಮನು ನಂಬಿದ್ದನು. "ನೀನು ಅನೇಕ ಜನಾಂಗಗಳಿಗೆ ಮೂಲಪಿತೃವಾಗುವಿ" (ಆದಿ. 17:4) ಎಂಬ ಕರ್ತನ ವಾಗ್ದಾನವನ್ನು ಪೂರ್ಣವಾಗಿ ನಂಬಿದವನಾಗಿದ್ದನು. ತನ್ನ ಮಗನು ಸತ್ತರೂ, ದೇವರು ಅವನನ್ನು ಬದುಕಿಸುವನು ಎಂದು ನಂಬಿದ್ದರಿಂದ ದೇವರ ಆಜ್ಞೆಗೆ ವಿಧೇಯನಾಗುವದು ಕಷ್ಟವೆನಿಸಲಿಲ್ಲ.

ದೇವಮಕ್ಕಳೇ, ಅಂದು ಅಬ್ರಹಾಮನು ತನ್ನ ಮಗನನ್ನು ಕೊಲ್ಲಲು ಕತ್ತಿ ಎತ್ತಿದಾಗ, ನಿನ್ನ ಮಗನ ಮೇಲೆ ಕೈ ಹಾಕಬೇಡವೆಂಬ ವಾಣಿಯನ್ನು ಅಬ್ರಹಾಮನು ಮಾತ್ರವಲ್ಲ, ಇಸಾಕನೂ ಕೇಳಿಸಿಕೊಂಡನು. ಇಸಾಕನಿಗೆ ಬದಲಾಗಿ ಯಜ್ಞಕ್ಕಾಗಿ ಒಂದು ಟಗರನ್ನು ಕರ್ತನು ಏರ್ಪಡಿಸಿದನು. ಅದೇ ರೀತಿ ಕರ್ತನು ತನ್ನ ಒಬ್ಬನೇ ಮಗನಾದ ಕ್ರಿಸ್ತನನ್ನು ನಮ್ಮಲ್ಲಿರುವ ಪಾಪಗಳನ್ನು, ಶಾಪಗಳನ್ನು ಹೊತ್ತುಕೊಂಡು ಹೋಗುವ ಯಜ್ಞದ ಕುರಿಯಾಗಿ ಕಲ್ವಾರಿಯಲ್ಲಿ ಒಪ್ಪಿಸಿಕೊಟ್ಟಿರುವನು. ಆ ರಕ್ಷಕನನ್ನೇ ನಿಮ್ಮ ಕಣ್ಣುಗಳು ನೋಡಲಿ.

*ನೆನಪಿಗೆ : ಆತನು ನಿಮ್ಮ ಶಿಕ್ಷಣಕ್ಕಾಗಿಯೇ ಆಕಾಶದಿಂದ ತನ್ನ ಸ್ವರವನ್ನು ನಿಮಗೆ ಕೇಳಿಸುವಂತೆ ಮಾಡಿದನು... ಆತನು ನುಡಿದ ಮಾತುಗಳನ್ನು ಕೇಳಿಸುವಂತೆ ಮಾಡಿದನು (ಧರ್ಮೋ. 4:36).*

ಮಾರ್ಚ್ 17

## ಪ್ರಾರ್ಥಿಸುವಾಗ!

ಬೆಳಿಗ್ಗೆ : ಧರ್ಮೋ. 30,31
ಸಂಜೆ : ಮಾರ್ಕ. 15:1–15

"ಸೊಲೊಮೋನನು ಪ್ರಾರ್ಥಿಸುವದನ್ನು ಮುಗಿಸಿದ ಕೂಡಲೆ ಆಕಾಶದಿಂದ ಬೆಂಕಿ ಬಿದ್ದು ಸರ್ವಾಂಗ ಹೋಮದ್ರವ್ಯಗಳನ್ನೂ ಯಜ್ಞಮಾಂಸವನ್ನೂ ದಹಿಸಿಬಿಟ್ಟಿತು" (2 ಪೂ.ವೃ.7:1).

ಆಕಾಶದಿಂದ ಇಳಿದು ಬರುವ ದೇವಪ್ರಸನ್ನತೆ ಅಥವಾ ದೇವಮಹಿಮೆಯನ್ನು ಯಾವಾಗ ಕಾಣಲು ಸಾಧ್ಯ? ಸೊಲೊಮೋನನು ದೇವಾಲಯವನ್ನು ಪ್ರತಿಷ್ಠೆ ಮಾಡಿದಾಗ, ಹೇರಳವಾದ ಸರ್ವಾಂಗ ಹೋಮ ಯಜ್ಞಗಳನ್ನು ಕರ್ತನಿಗಾಗಿ ಮಾಡಿ ಪ್ರಾರ್ಥಿಸಿದನು. ಅವನ ಪ್ರಾರ್ಥನೆಯನ್ನು ಕೇಳಿದ ಕರ್ತನು, ತನ್ನ ಮಹಿಮೆಯೊಂದಿಗೆ ಇಳಿದುಬಂದನು. ಭಕ್ತನಾದ ನೋಹನನೇ ಪ್ರಥಮವಾಗಿ ಕರ್ತನಿಗೆಂದು ಯಜ್ಞವೇದಿಯನ್ನು ಕಟ್ಟಿದವನು. ಪ್ರಪಂಚವು ಜಲಪ್ರಳಯದಿಂದ ನಾಶವಾದಾಗ, ತನ್ನ ಕುಟುಂಬವು ರಕ್ಷಿಸಲ್ಪಟ್ಟದ್ದರಿಂದ ತನ್ನ ಕೃತಜ್ಞತೆಯನ್ನು ಕರ್ತನಿಗೆ ಸಲ್ಲಿಸಲು ಶುದ್ಧವಾದ ಮೃಗ ಪಶುಪಕ್ಷಿಗಳಲ್ಲಿ ಕೆಲವನ್ನು ಯಜ್ಞಾರ್ಪಣೆ ಮಾಡಿದನು. ಅದು ಕರ್ತನ ಅಂತರ್ಯವನ್ನು ಕರಗಿಸಿದ್ದರಿಂದ ಇನ್ನು ಮೇಲೆ ನಾನು ಮನುಷ್ಯನ ನಿಮಿತ್ತ ಭೂಮಿಯನ್ನು ಶಪಿಸುವದಿಲ್ಲ. ಇನ್ನು ಸಕಲ ಜೀವಿಗಳನ್ನು ಸಂಹಾರ ಮಾಡುವದಿಲ್ಲ ಎಂದು ಒಡಂಬಡಿಕೆ ಮಾಡಿಕೊಂಡನು (ಆದಿ. 8:20,21).

ಹೊಸ ಒಡಂಬಡಿಕೆಯ ದೇವರ ಮಕ್ಕಳಾದ ನಾವು ಕರ್ತನಿಗೆ ನಾಲ್ಕು ವಿಧಗಳಲ್ಲಿ ಯಜ್ಞವನ್ನು ಸಲ್ಲಿಸಬೇಕು. ಮೊದಲನೆಯದು ಸ್ತೋತ್ರಯಜ್ಞ, ಎರಡನೆಯದು ನಮ್ಮನ್ನೇ ಸಜೀವಯಜ್ಞವಾಗಿ ಅರ್ಪಿಸುವದು, ಮೂರನೆಯದು ಜಜ್ಜಿದ ಹೃದಯ, ನಾಲ್ಕನೆಯದು ಕ್ರಿಸ್ತನೊಂದಿಗೆ ಶಿಲುಬೆಯಲ್ಲಿ ಜಜ್ಜಲು ನಮ್ಮನ್ನು ಒಪ್ಪಿಸಿಕೊಡುವದು. ಸೊಲೊಮೋನನು ಯಜ್ಞಗಳನ್ನು ಅರ್ಪಿಸಿ ಪ್ರಾರ್ಥಿಸಿದಾಗ ಕರ್ತನ ತೇಜಸ್ಸು ಇಳಿದು ಬಂದು ದೇವಾಲಯವನ್ನು ತುಂಬಿತು. ಹಳೆಯ ಒಡಂಬಡಿಕೆಯ ಕಾಲದಲ್ಲಿ ದೇವ ಮಹಿಮೆಯನ್ನು ಕಾಣುವ ಸ್ಥಳ ದೇವಾಲಯವಾಗಿತ್ತು. ಯೆಶಾಯನು, ದಾವೀದನು, ಸೊಲೊಮೋನನು ಇವರು ದೇವರ ಮಹಿಮೆಯನ್ನು ಕಂಡದ್ದು ದೇವಾಲಯದಲ್ಲಿ (ಯೆಶಾ. 6:1) (ಕೀರ್ತ. 63:2, 2 ಪೂ.ವೃ. 7:1).

ದೇವಮಕ್ಕಳೇ, ಪ್ರಾರ್ಥನೆಯೂ, ಮಹಿಮೆಯೂ ಒಂದಕ್ಕೊಂದು ಸೇರಿರುವಂಥದ್ದು. ಇಂದು ಕರ್ತನ ಆಲಯ ನಾವೇ ಆಗಿದ್ದೇವೆ. "ಇಗೋ, ದೇವರ ನಿವಾಸವು ಮನುಷ್ಯರಲ್ಲಿ ಅದೆ. ಆತನು ಅವರೊಡನೆ ವಾಸಮಾಡುವನು" (ಪ್ರಕ. 21:3) ಎಂದು ಸತ್ಯವೇದ ಹೇಳುತ್ತದೆ. ನೀವು ಪ್ರಾರ್ಥಿಸುವಾಗ ಅಂದು ದೇವಾಲಯವನ್ನು ತುಂಬಿದ ಅದೇ ಮಹಿಮೆ ನಿಮ್ಮನ್ನು ತುಂಬಲು ಸಿದ್ಧವಾಗಿರುವದು. ಈ ಆಲಯದ ಮುಂದಿನ ವೈಭವವು ಹಿಂದಿನ ವೈಭವಕ್ಕಿಂತ ವಿಶೇಷವಾಗಿರುವದು (ಹಗಾಯ2:9) ಎಂದು ಸತ್ಯವೇದ ಹೇಳುತ್ತದೆ.

*ನೆನಪಿಗೆ : "ದೇವರೇ, ನನ್ನ ಹೃದಯವು ಸ್ಥಿರವಾಗಿದೆ. ನಾನು ಬಾರಿಸುತ್ತಾ ಹಾಡುವೆನು. ನನ್ನ ಅಂತರಂಗವೂ ಸಹ" (ಕೀರ್ತ. 108:1).*



ಮಾರ್ಚ್ 18

## ಉನ್ನತಾಕಾಶಗಳು!

ಬೆಳಿಗ್ಗೆ : ಧರ್ಮೋ. 32,33,34
ಸಂಜೆ : ಮಾರ್ಕ. 15:16–47

"ದೇವರು ನಿಜವಾಗಿ ಭೂಲೋಕದಲ್ಲಿ ವಾಸಿಸುವನೋ? ಆಕಾಶವೂ ಉನ್ನತೋನ್ನತವಾದ ಆಕಾಶವೂ ನಿನ್ನ ವಾಸಕ್ಕೆ ಸಾಲವು ಹೀಗಿರುವಲ್ಲಿ ನಾನು ಕಟ್ಟಿಸಿದ ಈ ಮಂದಿರವು ಹೇಗೆ ಸಾಕಾದೀತು!" (1 ಅರಸು 8:27).

ಪ್ರಪ್ರಥಮವಾಗಿ ಕರ್ತನಿಗಾಗಿ ದೇವಾಲಯವನ್ನು ಕಟ್ಟಿದವನು ಸೊಲೊಮೋನನು ಅವನು ಸುಮಾರು ನಾಲ್ವತ್ತು ವರ್ಷಗಳು ಇಸ್ರಾಯೇಲ್ ರಾಜ್ಯವನ್ನು ಆಳಿದನು. ಅವನ ಕಾಲದಲ್ಲಿ ದೇವರು ಸಮಾಧಾನವನ್ನು ಕರುಣಿಸಿದ್ದನು. ಆದಕಾರಣ ಆಲಯವನ್ನು ಕಟ್ಟುವದು ಸುಲಭವಾಯಿತು. ಆಗಲೇ ಆಲಯವನ್ನು ಕಟ್ಟಲು ಅವನ ತಂದೆಯಾದ ದಾವೀದನು ಹೇರಳವಾದ ಬೆಳ್ಳಿ ಬಂಗಾರ, ದೇವದಾರು ಮರಗಳನ್ನು ಸಂಗ್ರಹಿಸಿ ಇಟ್ಟಿದ್ದನು. ನನ್ನ ದೇವರು ಎಲ್ಲಾ ದೇವರುಗಳಿಗಿಂತ ದೊಡ್ಡವನು. ಆದ್ದರಿಂದ ನಾನು ಆತನಿಗಾಗಿ ಕಟ್ಟುವ ಆಲಯ ದೊಡ್ಡದಾಗಿರುವದು ಎಂದು ಹೇಳಿ ಒಂದು ದೊಡ್ಡ ಆಲಯವನ್ನು ಕರ್ತನಿಗಾಗಿ ನಿರ್ಮಿಸಿದನು.

ದೇವಾಲಯದ ಪ್ರತಿಷ್ಠೆಯ ಸಮಯ ಬಂದಿತು. ತಾನು ಕಟ್ಟಿದ ಆಲಯದಲ್ಲಿ ದೇವರು ಬಂದು ನೆಲೆಸುವನಾ? ಆತನ ಮಹಿಮೆ ಇಲ್ಲಿ ಕಾಣಲ್ಪಡುವದಾ? ಎಂಬ ಅನುಮಾನ ಸೊಲೊಮೋನನಿಗೆ ಬಂದಿತು. ಅವನು ಆಲಯದ ಪ್ರತಿಷ್ಠೆಯ ಸಮಯದಲ್ಲಿ "ದೇವರು ನಿಜವಾಗಿ ಭೂಲೋಕದಲ್ಲಿ ವಾಸವಾಗಿರುವನೋ? ಆಕಾಶವೂ ಉನ್ನತವಾದ ಆಕಾಶವೂ ನಿನ್ನ ವಾಸಸ್ಥಳಕ್ಕೆ ಸಾಲವು ಹೀಗಿರುವಲ್ಲಿ ನಾನು ಕಟ್ಟಿಸಿದ ಮಂದಿರವು ಹೇಗೆ ಸಾಕಾದೀತು!" (1 ಅರಸು 8:27) ಎಂದು ಹೇಳಿ ಪ್ರಾರ್ಥಿಸಿದನು. ನಿಜವಾಗಿಯೂ ದೇವಾದಿದೇವನೂ ಮಹೋನ್ನತನೂ ಆದ ಕರ್ತನನ್ನು ಒಂದು ಕಟ್ಟಡದಲ್ಲಿ ಅಡಗಿಸಿಡುವದು. ಆಗದ ಕಾರ್ಯ "ಆಕಾಶವು ನನಗೆ ಸಿಂಹಾಸನದ ಭೂಮಿಯು ನನಗೆ ಪಾದಪೀಠ ನೀವು ನನಗೆ ಇನ್ನೆಂಥಾ ಮನೆಯನ್ನು ಕಟ್ಟಿಕೊಡುವಿರಿ?" (ಯೆಶಾ. 66:1) ಎಂದು ಕರ್ತನು ಹೇಳುತ್ತಾನೆ.

ಹೊಸ ಒಡಂಬಡಿಕೆಗೆ ಬರುವಾಗ, ನಾನೂ ನೀವು ಆತನ ಆಲಯಗಳಾಗಿರುವೆವು. ನೀವು ದೇವರ ಆಲಯವಾಗಿದ್ದೀರೆಂದೂ, ದೇವರ ಆತ್ಮನು ನಿಮ್ಮಲ್ಲಿ ವಾಸಮಾಡುತ್ತಾನೆಂದೂ ನಿಮಗೆ ಗೊತ್ತಿಲ್ಲವೋ? (1 ಕೊರಿಂ. 3:16). ದೇವರಿಂದ ದೊರಕಿ ನಿಮ್ಮೊಳಗೆ ನೆಲೆಗೊಂಡಿರುವ ಪವಿತ್ರಾತ್ಮನಿಗೆ ನಿಮ್ಮ ದೇಹವು ಗರ್ಭಗುಡಿಯಾಗಿದೆಯೆಂಬುದು ನಿಮಗೆ ತಿಳಿಯದೋ? (1 ಕೊರಿಂ. 6:19) ಎಂದು ಅಪೊ. ಪೌಲನು ಹೇಳುತ್ತಾನೆ. ದೇವರ ಆಲಯವು ನೀವೇ ಆಗಿರುವದರಿಂದ ನಿಮ್ಮ ದೇಹಾತ್ಮಗಳನ್ನು ಶುದ್ಧವಾಗಿಟ್ಟುಕೊಳ್ಳಿರಿ. ಪರಿಶುದ್ಧತೆ ಇಲ್ಲದ ಕಡೆ ದೇವರು ತಂಗುವವನಲ್ಲ.

*ನೆನಪಿಗೆ : ಪ್ರಭಾವ ಹೊಂದುವದಕ್ಕೆ ತಾನು ಮುಂದಾಗಿ ಸಿದ್ಧಮಾಡಿದ ಕರುಣಾ ಪಾತ್ರರಲ್ಲಿ ತನ್ನ ಮಹಿಮಾತಿಶಯವನ್ನು ತೋರ್ಪಡಿಸಿದ್ದಾನೆ (ರೋಮಾ. 9:23).*

## ಮಾರ್ಚ್ 19 ಆಕಾಶವನ್ನು ಉಂಟುಮಾಡಿದವನು!

ಬೆಳಿಗ್ಗೆ : ಯೆಹೋಶುವ 1,2,3
ಸಂಜೆ : ಮಾರ್ಕ. 16

"ಯೆಹೋವನು ಸಣ್ಣವರು ಮೊದಲುಗೊಂಡು ದೊಡ್ಡವರ ಪರ್ಯಂತ ಎಲ್ಲರನ್ನೂ ಆಶೀರ್ವದಿಸುವನು. ಯೆಹೋವನು ನಿಮ್ಮನ್ನೂ ನಿಮ್ಮ ಮಕ್ಕಳನ್ನೂ ಆಶೀರ್ವದಿಸುವನು. ಆತನು ಭೂಪರಲೋಕಗಳನ್ನು ಉಂಟುಮಾಡಿದ್ದಾನೆ" (ಕೀರ್ತನೆ. 115:12–15).

ಸತ್ಯವೇದದಲ್ಲಿ ಅನೇಕಾನೇಕ ಆಶೀರ್ವಾದಗಳಿರುವವು. ಇಲ್ಲಿ ದೈವೀಕ ವಾಗ್ದಾನಗಳಿವೆ. ಕರ್ತನ ಒಡಂಬಡಿಕೆ ಇರುವದು. ಮಹಿಮೆಯಾದ ಆಶೀರ್ವಾದಗಳುಂಟು. ಕರ್ತನು ನೀಡುವ ಆಶೀರ್ವಾದಗಳನ್ನು ಆರು ವಿಧಗಳಲ್ಲಿ ವಿಭಾಗಿಸಬಹುದು. 1. ಶರೀರ ಪ್ರಕಾರವಾದ ಆಶೀರ್ವಾದಗಳು, 2. ಸಂಪತ್ತು ಐಶ್ವರ್ಯಗಳ ಆಶೀರ್ವಾದಗಳು, 3. ಪ್ರಾಪಂಚಿಕವಾದ ಆಶೀರ್ವಾದಗಳು, 4. ಆತ್ಮೀಕ ಆಶೀರ್ವಾದಗಳು, 5. ಪರಲೋಕದ ಆಶೀರ್ವಾದಗಳು, 6. ನಿತ್ಯತ್ವದ ಆಶೀರ್ವಾದಗಳು.

ಇವುಗಳನ್ನು ಬಾಧ್ಯತೆಯಾಗಿ ಪಡೆಯುವಾಗ, ಜೀವಿತಕಾಲವೆಲ್ಲಾ ಕರ್ತನ ಕೃಪೆಯು ನಿಮ್ಮನ್ನು ಹಿಂಬಾಲಿಸುವದು. ನೀವು ಕರ್ತನ ಮನೆಯಲ್ಲಿ ನಿರಂತರವಾಗಿ ನೆಲೆಗೊಳ್ಳುವಿರಿ. ಈ ಎಲ್ಲಾ ಆಶೀರ್ವಾದಗಳನ್ನು ಕರ್ತನು ನಿಮ್ಮ ಮೇಲೆ ಸುರಿಸಲು ಬಯಸುವನು. ಈ ಪ್ರಪಂಚದಲ್ಲಿ ನೀವು ಅನುಭವಿಸಲು ಅಗತ್ಯವಾದ ಎಲ್ಲವನ್ನೂ ಕೊಡುವ ಜೀವಸ್ವರೂಪನಾದ ದೇವರು ಎಂದು ಸತ್ಯವೇದ ಹೇಳುತ್ತದೆ (1 ತಿಮೊ. 6:17). ಮಾತ್ರವಲ್ಲ, ಇವೆಲ್ಲಾ ಆಶೀರ್ವಾದಗಳನ್ನು ನೀವು ಪಡೆಯಬೇಕೆಂದೇ ಕ್ರಿಸ್ತಯೇಸು ಶಿಲುಬೆಯಲ್ಲಿ ಜಜ್ಜಲ್ಪಟ್ಟನು. ಸ್ವಂತ ಮಗನನ್ನು ಉಳಿಸಿಕೊಳ್ಳದೆ ಆತನನ್ನು ನಮಗೋಸ್ಕರ ಒಪ್ಪಿಸಿಕೊಟ್ಟನಲ್ಲಾ. ಮಗನನ್ನು ಕೊಟ್ಟ ಮೇಲೆ ಸಮಸ್ತವನ್ನೂ ನಮಗೆ ಕೊಡದೆ ಇರುವನೇ? (ರೋಮಾ.8:32) ಎಂದು ಅಪೊ. ಪೌಲನು ಬರೆಯುತ್ತಾನೆ. ಕರ್ತನಿಂದ ಬರುವ ಎಣಿಸಲಾಗದ ಆಶೀರ್ವಾದಗಳನ್ನು ದಾವೀದನು ನೋಡಿ ಹೀಗೆ ಬರೆಯುತ್ತಾನೆ "ಯೆಹೋವನ ಮಹೋಪಕಾರಗಳಿಗೆ ಬದಲೇನು ಮಾಡಲಿ? ರಕ್ಷಣಾ ಪಾತ್ರೆಯನ್ನು ತೆಗೆದುಕೊಂಡು ಯೆಹೋವನಾಮವನ್ನು ಪ್ರಖ್ಯಾತಿ ಪಡಿಸುವೆನು" (ಕೀರ್ತ. 116:12,13).

ದೇವಜನರೇ, ನೀವು ಆಶೀರ್ವಾದಗಳನ್ನು ಪಡೆಯುವಂತೆ ಕರೆಯಲ್ಪಟ್ಟವರು. ಆದ್ದರಿಂದ ಕರ್ತನನ್ನು ಸ್ತುತಿಸಿ ಸ್ತೋತ್ರಮಾಡಿ ಆತನು ನಿಮಗೆ ಇಟ್ಟಿರುವ ಸಕಲ ಆಶೀರ್ವಾದಗಳನ್ನು ಬಾಧ್ಯತೆಯಾಗಿ ಹೊಂದಿಕೊಳ್ಳಿರಿ.

*ನೆನಪಿಗೆ : "ನೀವು ನನ್ನಲ್ಲಿಯೂ, ನನ್ನ ವಾಕ್ಯಗಳು ನಿಮ್ಮಲ್ಲಿಯೂ ನೆಲೆಗೊಂಡಿದ್ದರೆ ಏನು ಬೇಕಾದರೂ ಬೇಡಿಕೊಳ್ಳಿರಿ, ಅದು ನಿಮಗೆ ದೊರೆಯುವದು" (ಯೋಹಾ. 15:7,8).*



## ಮಾರ್ಚ್ 20 ಆಕಾಶದಲ್ಲಿ ಸೂಚಕ ಕಾರ್ಯ!

ಬೆಳಿಗ್ಗೆ : ಯೆಹೋಶುವ 4,5,6
ಸಂಜೆ : ಲೂಕ. 1:1–25

"ನೀನು ಆಕಾಶದಲ್ಲಿ ಒಂದು ಸೂಚಕ ಕಾರ್ಯವನ್ನು ತೋರಿಸಿಕೊಡಬೇಕೆಂದು ಕೇಳಿದರು" (ಮತ್ತಾ. 16:1).

ಯೆಹೂದ್ಯರು ಯಾವಾಗಲೂ ಸೂಚಕ ಕಾರ್ಯವನ್ನು ಕೇಳುತ್ತಲೇ ಇದ್ದರು. ಅವರು ಕರ್ತನ ಮಾತನ್ನು ನಂಬಲಿಲ್ಲ (ಮತ್ತಾ. 12:38). ಆತನನ್ನು ಪರೀಕ್ಷಿಸಲು ಆಕಾಶದಲ್ಲಿ ಒಂದು ಸೂಚಕ ಕಾರ್ಯವನ್ನು ಕೇಳಿದರು. ನಾವು ನೋಡಿ ನಡೆಯದೆ ನಂಬಿ ನಡೆಯಬೇಕು.

ಇಂದು ಜನರು ಆಕಾಶದ ಸೂಚನೆಗಳನ್ನು ನಿರೀಕ್ಷಿಸಿ ದಿನ, ಘಳಿಗೆ, ನಕ್ಷತ್ರ ನೋಡುವರು. ಇನ್ನು ಕೆಲವರು ಆಕಾಶ ಸೈನ್ಯಗಳನ್ನು ನಮಸ್ಕರಿಸುವರು. ಅಂತ್ಯದಲ್ಲಿ ಆಕಾಶಮಂಡಲದಲ್ಲಿರುವ ದುಷ್ಟ ಶಕ್ತಿಗಳ ಕೈಯಲ್ಲಿ ಸಿಕ್ಕಿಕೊಳ್ಳುವರು. ಆದರೆ ಯೇಸುಕ್ರಿಸ್ತನು, ಆಕಾಶದ ಕಡೆಗೆ ಕಣ್ಣೆತ್ತಿ ನೋಡಿ ಪ್ರಾರ್ಥಿಸಿದ ಮುಖ್ಯವಾದ ಮೂರು ಸಂದರ್ಭಗಳುಂಟು. 1. ಹಸಿವಿನಿಂದ ಇದ್ದ ಜನರಿಗೆ ಉಣಬಡಿಸುವ ಮೊದಲು ಐದು ರೊಟ್ಟಿ, ಎರಡು ಮೀನುಗಳನ್ನು ತೆಗೆದುಕೊಂಡು ಆಕಾಶದ ಕಡೆಗೆ ನೋಡಿ ಆಶೀರ್ವದಿಸಿದನು (ಮತ್ತಾ. 14:19). ಆ ರೊಟ್ಟಿಗಳನ್ನು ಮುರಿದು ಶಿಷ್ಯರ ಬಳಿ ಕೊಟ್ಟಾಗ, ಅದು ಹೆಚ್ಚುತ್ತಲೇ ಇದ್ದು ಐದು ಸಾವಿರ ಮಂದಿಗೆ ಹಂಚಲ್ಪಟ್ಟಿತು. 2. ತೊದಲು ಮಾತಾಡುವ ಒಬ್ಬ ಕಿವುಡನನ್ನು ಆತನ ಬಳಿಗೆ ಕರೆತಂದಾಗ, ಅವನ ಕಿವಿಗಳಲ್ಲಿ ತನ್ನ ಬೆರಳುಗಳನ್ನು ಇಟ್ಟು ಉಗುಳಿ ಅವನ ನಾಲಿಗೆಯನ್ನು ಮುಟ್ಟಿ ಆಕಾಶದ ಕಡೆಗೆ ನೋಡಿ 'ಎಪ್ಫಥಾ' ಎಂದು ಹೇಳಿದನು. ಆ ಶಬ್ದಕ್ಕೆ 'ತೆರೆಯಲಿ' ಎಂದು ಅರ್ಥ. ಹೇಳುತ್ತಲೇ ಅವನ ಕಿವಿಗಳು ತೆರೆಯಲ್ಪಟ್ಟವು. ನಾಲಿಗೆಯ ಕಟ್ಟು ಬಿಚ್ಚಿಹೋಯಿತು (ಮಾರ್ಕ.7:33–35). 3. ಯೇಸು ಆಕಾಶದ ಕಡೆಗೆ ಕಣ್ಣೆತ್ತಿ ನೋಡಿದ ಸಂದರ್ಭವನ್ನು ಯೋಹಾನ 17ನೇ ಅಧ್ಯಾಯ ಮೊದಲನೇ ವಚನದಲ್ಲಿ ನೋಡಬಹುದು. ಕ್ರಿಸ್ತನ ಕಣ್ಣುಗಳು ಯಾವಾಗಲೂ ತಂದೆಯನ್ನೇ ದೃಷ್ಟಿಸುತ್ತಿತ್ತು. ಆಕಾಶದ ಕಡೆಗೆ ಕಣ್ಣೆತ್ತಿ ತಂದೆಯೇ ಕಾಲ ಬಂದಿದೆ ನಿನ್ನ ಮಗನನ್ನು ಮಹಿಮೆ ಪಡಿಸು ಆಗ ಮಗನು ನಿನ್ನನ್ನು ಮಹಿಮೆ ಪಡಿಸುವನು ಎಂದು ಹೇಳಿದನು.

ದೇವಜನರೇ, ಕ್ರಿಸ್ತನ ಮಾದರಿಯನ್ನು ಅನುಸರಿಸಿರಿ. ನಿಮ್ಮ ಕಣ್ಣುಗಳು ಯಾವಾಗಲೂ ಕ್ರಿಸ್ತನಲ್ಲೇ ನೆಟ್ಟಿರಲಿ. ಭೂಮ್ಯಾಕಾಶಗಳನ್ನು ಉಂಟುಮಾಡಿದ ಕರ್ತನ ಬಳಿಯಿಂದ ನಿಮಗೆ ಸಹಾಯವು ಬರುವದು.

*ನೆನಪಿಗೆ : "ನಾವಾದರೋ ಪರಲೋಕ ಸಂಸ್ಥಾನದವರು; ಕರ್ತನಾದ ಯೇಸು ಕ್ರಿಸ್ತನು ಅಲ್ಲಿಂದಲೇ ರಕ್ಷಕನಾಗಿ ಬರುವದನ್ನು ಎದುರುನೋಡುತ್ತಾ ಇದ್ದೇವೆ" (ಫಿಲಿಪ್ಪಿ. 3:20).*

ಮಾರ್ಚ್ 21

# ಎಫ್ಫಥಾ!

ಬೆಳಿಗ್ಗೆ : ಯೆಹೋಶುವ 7,8,9
ಸಂಜೆ : ಲೂಕ. 1:26–38

"ಆತನು ತನ್ನ ಬೆರಳುಗಳನ್ನು ಅವನ ಕಿವಿಗಳಲ್ಲಿ ಇಟ್ಟು ಉಗುಳಿ ಅವನ ನಾಲಿಗೆಯನ್ನು ಮುಟ್ಟಿ ಆಕಾಶದ ಕಡೆಗೆ ನೋಡಿ ನಿಟ್ಟುಸಿರುಬಿಟ್ಟು 'ಎಫ್ಫಥಾ' ಎಂದು ಹೇಳಿದನು" (ಮಾರ್ಕ.7:33,34).

ಯೇಸುಕ್ರಿಸ್ತನ ಬೆರಳುಗಳು ಕಿವುಡು ಕಿವಿಗಳನ್ನು ತೆರೆದು ಅದ್ಭುತ ಮಾಡಿತು! ಆತನ ಬೆರಳುಗಳು ಕರ್ತನ ಸಮಯ ಬರುವವರೆಗೂ ಯೋಸೇಫನ ಉದ್ಯೋಗವಾದ ಮರಗೆಲಸವನ್ನು ಮಾಡುವದರಲ್ಲಿ ತೊಡಗಿದ್ದವು. ಹೀಗೆ ಮೂವತ್ತು ವರ್ಷಗಳು ಕಳೆದುಹೋದವು!

ತಂದೆ ದೇವರ ಸಮಯ ಬಂದಾಗ ಕ್ರಿಸ್ತನ ಕರಗಳು ಅದ್ಭುತಗಳನ್ನು ಮಾಡಲು ಪ್ರಾರಂಭಿಸಿದವು. ಕುಷ್ಟರೋಗಿಗಳನ್ನು ಮುಟ್ಟಿ ಗುಣಪಡಿಸಿತು. ಪೇತ್ರನ ಅತ್ತೆಯ ಜ್ವರವನ್ನು ಗುಣಪಡಿಸಿತು. ಕುರುಡು ಕಣ್ಣುಗಳನ್ನು ಮುಟ್ಟಿ ದೃಷ್ಟಿಯನ್ನು ಕೊಟ್ಟಿತು. ಹದಿನೆಂಟು ವರ್ಷದಿಂದ ನಡು ಬಗ್ಗಿ ಗೂನಿಯಾಗಿದ್ದ ಸ್ತ್ರೀಯನ್ನು ಮುಟ್ಟಿ ನೆಟ್ಟಗೆ ನಿಲ್ಲುವಂತೆ ಮಾಡಿತು. ಸತ್ತವರನ್ನು ಜೀವದಿಂದ ಎಬ್ಬಿಸಿತು. ಐದು ರೊಟ್ಟಿ ಎರಡು ಮೀನುಗಳನ್ನು ತೆಗೆದುಕೊಂಡು ಐದು ಸಾವಿರ ಜನರಿಗೆ ಹಂಚಿತು. ಒಂದು ದಿನ ಆತನ ಬೆರಳುಗಳು ಹುಟ್ಟುಕಿವುಡನಾಗಿದ್ದ, ತೊದಲು ಬಾಯಿಯವನಾಗಿ ವೇದನೆ ಪಡುತ್ತಿದ್ದ ಮನುಷ್ಯನ ಕಿವಿಗಳನ್ನು ನಾಲಿಗೆಯನ್ನು ಮುಟ್ಟಲು ಅವನ ಕಿವಿಗಳು ತೆರೆಯಲ್ಪಟ್ಟವು. ನಾಲಿಗೆಯ ಕಟ್ಟುಗಳು ಬಿಚ್ಚಲ್ಪಟ್ಟಿತು. ಅವನು ಸರಾಗವಾಗಿ ಮಾತನಾಡಲಾರಂಭಿಸಿದನು (ಮಾರ್ಕ. 7:35). ಇಂದು ಅನೇಕ ವಿಶ್ವಾಸಿಗಳು ಆತ್ಮೀಕ ರೀತಿಯಲ್ಲಿ ಕರ್ತನ ವಾಕ್ಯಗಳನ್ನು ಅರಿತುಕೊಳ್ಳಲಾಗದ ಕಿವುಡು ಕಿವಿಗಳುಳ್ಳವರಾಗಿರುವರು. ಎಷ್ಟೇ ಪ್ರಸಂಗಗಳನ್ನು ಕೇಳಿದರೂ, ದೇವರ ವಾಕ್ಯಗಳನ್ನು ಗ್ರಹಿಸಲಾರದವರಾಗಿರುವರು. ಇನ್ನು ಕೆಲವರು ಎಷ್ಟೋ ವರ್ಷಗಳಿಂದ ಕ್ರೈಸ್ತರಾಗಿದ್ದರೂ ಕ್ರಿಸ್ತನ ಕುರಿತು ಸಾಕ್ಷಿ ಹೇಳಲಾಗದ ಮೂಕರಾಗಿರುವರು. ಕ್ರಿಸ್ತನ ಬೆರಳುಗಳು ಅಂಥವರನ್ನು ಮುಟ್ಟಲಿ.

ದೇವಜನರೇ, ಇನ್ನು ಮೇಲೆ ನೀವು ಕಿವುಡರಾಗಿಯೂ, ಮೂಗರಾಗಿಯೂ ಇರಬಾರದು. ಕರ್ತನು ನಿಮ್ಮನ್ನು ಬಲವಾದ ಸಾಕ್ಷಿಗಳಾಗಿ ನಿಲ್ಲಿಸಲು ಬಯಸುತ್ತಾನೆ. ಯಾಕೆಂದರೆ, ಆತನ ಗುಣಾತಿಶಯಗಳನ್ನು ಪ್ರಚಾರ ಮಾಡುವವರಾಗುವಂತೆ ದೇವರಾದುಕೊಂಡ ಜನಾಂಗವೂ, ರಾಜವಂಶಸ್ಥರಾದ ಯಾಜಕರೂ, ಮೀಸಲಾದ ಜನವೂ, ದೇವರ ಸ್ವಕೀಯ ಪ್ರಜೆಯೂ ಆಗಿದ್ದೀರಿ (1 ಪೇತ್ರ. 2:9).

*ನೆನಪಿಗೆ : "ಕೂಡಲೆ ಅವನಿಗೆ ಬಾಯಿ ಬಂತು. ನಾಲಿಗೆ ಸಡಿಲವಾಯಿತು. ಅವನು ಮಾತಾಡುವ ಶಕ್ತಿಯುಳ್ಳವನಾಗಿ ದೇವರನ್ನು ಕೊಂಡಾಡಿದನು" (ಲೂಕ. 1:64).*



ಮಾರ್ಚ್ 22

# ಪರಲೋಕದ ದೂತನು!

ಬೆಳಿಗ್ಗೆ : ಯೆಹೋಶುವ 10,11,12
ಸಂಜೆ : ಲೂಕ. 1:39–56

"ನನ್ನ ಚಿತ್ತದಂತಲ್ಲ ನಿನ್ನ ಚಿತ್ತದಂತೆಯೇ ಆಗಲಿ ಎಂದು ಪ್ರಾರ್ಥಿಸಿದನು. ಆಗ ಪರಲೋಕದಿಂದ ಬಂದ ಒಬ್ಬ ದೇವದೂತನು ಆತನಿಗೆ ಕಾಣಿಸಿಕೊಂಡು ಆತನನ್ನು ಬಲಪಡಿಸಿದನು" (ಲೂಕ.22:42–43).

ಯೇಸುಕ್ರಿಸ್ತನು ಗೆತ್ಸೇಮನೆ ತೋಟದಲ್ಲಿ ಮನೋವ್ಯಥೆಯುಳ್ಳವನಾಗಿ ಆಸಕ್ತಿಯಿಂದ ಪ್ರಾರ್ಥಿಸುತ್ತಿದ್ದನು. ಆತನ ಬೆವರು ಭೂಮಿಗೆ ಬೀಳುತ್ತಿರುವ ರಕ್ತದ ದೊಡ್ಡ ಹನಿಗಳಂತಿತ್ತು. ಆಗ ನಡೆದದ್ದೇನು? ಒಬ್ಬ ದೇವದೂತನು ವೇಗವಾಗಿ ಇಳಿದು ಬಂದನು. ಆತನನ್ನು ಬಲಪಡಿಸಿದನು.

ನೀವು ಪ್ರಾರ್ಥಿಸುವಾಗ ಪರಲೋಕದ ಕುಟುಂಬದೊಂದಿಗೆ ಅನ್ಯೋನ್ಯತೆಯುಳ್ಳವರಾಗಿರುತ್ತೀರಿ. ದೇವದೂತರೊಂದಿಗೂ, ಕೆರೂಬಿಗಳು, ಸೆರಾಫಿಗಳೊಂದಿಗೂ ಅನ್ಯೋನ್ಯತೆಯುಳ್ಳವರಾಗಿರುವಿರಿ. ಕರ್ತನ ಕುಟುಂಬ ಬಹಳ ದೊಡ್ಡದು. ನಿಮ್ಮನ್ನು ದೃಢಗೊಳಿಸಿ ಬಲಪಡಿಸಲು ದೇವದೂತರು ಕಾತುರದಿಂದ ಕಾದಿರುತ್ತಾರೆ. ಕರ್ತನು ಪ್ರಾರ್ಥಿಸುವ ತನ್ನ ಮಕ್ಕಳ ಸೇವೆಗಾಗಿ ದೇವದೂತರನ್ನು ಊಳಿಗದ ಆತ್ಮಗಳಾಗಿ ಕೊಡುವನು (ಇಬ್ರಿ. 1:14). "ನೀನು ಹೋಗುವಲ್ಲೆಲ್ಲಾ ನಿನ್ನನ್ನು ಕಾಯುವದಕ್ಕೆ ಆತನು ನಿನ್ನ ವಿಷಯವಾಗಿ ತನ್ನ ದೂತರಿಗೆ ಅಪ್ಪಣೆ ಕೊಡುವನು. ನಿನ್ನ ಕಾಲು ಕಲ್ಲಿಗೆ ತಗಲದಂತೆ ಅವರು ನಿನ್ನನ್ನು ಕೈಗಳಲ್ಲಿ ಎತ್ತಿಕೊಳ್ಳುವರು (ಕೀರ್ತ. 91:11,12) ಎಂದು ಸತ್ಯವೇದ ಹೇಳುತ್ತದೆ. ಒಮ್ಮೆ ಅರಸನಾದ ಹಿಜ್ಕೀಯನಿಗೆ ವಿರೋಧವಾಗಿ ಅಶ್ಶೂರದ ಅರಸನು ದಂಡೆತ್ತಿ ಬಂದಾಗ ಹಿಜ್ಕೀಯನು ತನ್ನ ವಿರೋಧಿಯು ಕಳುಹಿಸಿದ ಪತ್ರವನ್ನು ದೇವಾಲಯದಲ್ಲಿ ಕರ್ತನ ಮುಂದೆ ಇಟ್ಟು ಪ್ರಾರ್ಥಿಸಿದನು. ಆಗ ಕರ್ತನು ಅವನ ಪ್ರಾರ್ಥನೆಯನ್ನು ಕೇಳಿ ತನ್ನ ದೂತನನ್ನು ಕಳುಹಿಸಿದನು. ಅದೇ ರಾತ್ರಿಯಲ್ಲಿ ದೇವದೂತನು ಬಂದು ಅಶ್ಶೂರ್ಯರ ಪಾಳೆಯದಲ್ಲಿ ಲಕ್ಷದ ಎಂಬತ್ತೈದು ಸಾವಿರ ಮಂದಿ ಸೈನಿಕರನ್ನು ಸಂಹರಿಸಿದನು (2 ಅರಸು 19:35). ಒಬ್ಬ ಶತಾಧಿಪತಿಯೊಂದಿಗೆ ನೂರು ಸೈನಿಕರು ಇರುವರು. ಆದರೆ ಪ್ರಾರ್ಥಿಸುವ ದೇವಮಕ್ಕಳೊಂದಿಗೆ ನೂರು ಅಲ್ಲ, ಸಾವಿರ ಹದಿನಾರು ಸಾವಿರ ದೇವದೂತರು ಸೈನ್ಯ ಸೈನ್ಯವಾಗಿ ಬಂದು ಇಳಿಯುವರು.

ದೇವಜನರೇ, ಭಯಪಡಬೇಡಿರಿ. ನೀವು ಎಷ್ಟೇ ಬಡವರಾಗಿದ್ದರೂ ಬಲಹೀನರಾಗಿದ್ದರೂ ಪಾಮರರಾಗಿದ್ದರೂ ಅವಿದ್ಯಾವಂತರಾಗಿದ್ದರೂ ಪ್ರಾರ್ಥನೆಯನ್ನು ಕೇಳುವ ಕರ್ತನು "ನಿಮಗಾಗಿ ತನ್ನ ದೇವದೂತರನ್ನು ಕಳುಹಿಸುವನು. "ಯೆಹೋವನಲ್ಲಿ ಭಯಭಕ್ತಿಯುಳ್ಳವರ ಸುತ್ತಲೂ ಆತನ ದೂತನು ದಂಡಿಳಿಸಿ ಕಾವಲಾಗಿರುವನು" (ಕೀರ್ತ. 34:7).

*ನೆನಪಿಗೆ : "ಅವನು ದೇವರನ್ನು ಪ್ರಾರ್ಥಿಸಿ, ಆತನ ಒಲುಮೆಗೆ ಪಾತ್ರನಾಗಿ, ಆತನ ದರ್ಶನ ಮಾಡಿ ಉತ್ಸಾಹ ಧ್ವನಿಗೈದು ತಿರುಗಿ ಆತನಿಂದ ನೀತಿವಂತನೆನಿಸಿಕೊಳ್ಳುವನು" (ಯೋಬ. 33:26).*

ಮಾರ್ಚ್ 23

## ಒಂದುಮಾಡುವ ಏಣಿ!

ಬೆಳಿಗ್ಗೆ : ಯೆಹೋಶುವ 13,14,15
ಸಂಜೆ : ಲೂಕ. 1:57–80

"ಪರಲೋಕವು ತೆರೆದಿರುವದನ್ನೂ ಮನುಷ್ಯಕುಮಾರನ ಮೇಲೆ ದೇವದೂತರು ಏರಿಹೋಗುತ್ತಾ ಇಳಿದು ಬರುತ್ತಾ ಇರುವದನ್ನೂ ನೋಡುವಿರಿ" (ಯೋಹಾ. 1:51).

ಯಾಕೋಬನು ಕನಸಿನಲ್ಲಿ ಕಂಡ ಏಣಿ ಪರಲೋಕದ ಅದ್ಭುತವಾದ ಏಣಿ. ಪರಲೋಕಕ್ಕೆ ಮಾರ್ಗ ತೋರಿಸುವ ಏಣಿ ನಿತ್ಯರಾಜ್ಯಕ್ಕೆ ಮಾರ್ಗವೂ, ಬಾಗಿಲೂ ಆದ ಏಣಿ ಮಾತ್ರವಲ್ಲ. ಪರಲೋಕವನ್ನೂ, ಭೂಮಿಯನ್ನೂ ಒಂದುಗೂಡಿಸುವ ಏಣಿ. ಯಾಕೋಬನು ದರ್ಶನದಲ್ಲಿ ಕಂಡ ಏಣಿ ಪರಲೋಕದಲ್ಲಿರುವ ದೇವರನ್ನೂ ಭೂಮಿಯಲ್ಲಿ ಜೀವಿಸುವ ಮನುಷ್ಯನನ್ನೂ ಒಂದುಗೂಡಿಸುವದು ಎಂಥ ಆಶ್ಚರ್ಯಕರವಾದ ಸಂಗತಿ!

ಯಾಕೋಬನು ಕಂಡ ಏಣಿಯ ಮೇಲೆ ದೇವದೂತರು ಹತ್ತುತ್ತಾ ಇಳಿಯುತ್ತಾ ಇದ್ದರು. ಅವರು ಈ ಭೂಮಿಯಲ್ಲಿ ಮನುಷ್ಯನು ಮಾಡುವ ಪ್ರಾರ್ಥನೆಯನ್ನು ತೆಗೆದುಕೊಂಡು ಪರಲೋಕಕ್ಕೆ ಏರಿದರು. ದೇವರ ಬಳಿಯಿಂದ ಉತ್ತರವನ್ನು ತೆಗೆದುಕೊಂಡು ಕೆಳಗೆ ಇಳಿದರು. ದೇವದೂತರು ರಕ್ಷಣೆಯನ್ನು ಬಾಧ್ಯವಾಗಿ ಹೊಂದಬೇಕಾಗಿರುವವರ ಸೇವೆಗೋಸ್ಕರ ಕಳುಹಿಸಲ್ಪಡುವ ಊಳಿಗದ ಆತ್ಮಗಳೆಂದು ಸತ್ಯವೇದ ಹೇಳುತ್ತದೆ (ಇಬ್ರಿ. 1:14). ಇಂದೂ ಕೂಡ ಪರಲೋಕದ ಕುಟುಂಬದಲ್ಲಿರುವ ದೇವದೂತರು ನಿಮ್ಮನ್ನು ಆವರಿಸಿರುವರು. ನೀವು ಮಾಡುವ ಪ್ರಾರ್ಥನೆ ಚಿಕ್ಕದಾದರೂ, ದೊಡ್ಡದಾದರೂ, ಕಣ್ಣೀರಿನಿಂದ ಮಾಡುವ ವಿಜ್ಞಾಪನೆಯಾದರೂ, ಸಂತೋಷದಿಂದ ಹಾಡುವ ಸ್ತುತಿಸ್ತೋತ್ರಗಳಾದರೂ ಅವುಗಳನ್ನೆಲ್ಲಾ ತೆಗೆದುಕೊಂಡು ಏಣಿಯನ್ನು ಏರಿ ಪರಲೋಕಕ್ಕೆ ತೆಗೆದುಕೊಂಡು ಹೋಗುವ ದೇವದೂತರು ನಿಮ್ಮ ಪಕ್ಕದಲ್ಲೇ ಇರುವರು. ನಿಮ್ಮ ಪ್ರತಿಯೊಂದು ಪ್ರಾರ್ಥನೆಯೂ ಪರಲೋಕವನ್ನು ಮುಟ್ಟುವದು. ನಿಮ್ಮ ಪ್ರಾರ್ಥನೆ ಕರ್ತನ ಕರಗಳು ಚಲಿಸುವಂತೆ ಮಾಡುವದು. ಪ್ರಕೃತಿಯನ್ನು ಬಂಧಿಸುವದು. ಆದ್ದರಿಂದಲೇ ಎಲೀಯನು ಮಳೆ ಬರಬಾರದಂತೆ ಪ್ರಾರ್ಥಿಸಿ ಆಕಾಶದ ಬಾಗಿಲನ್ನು ಮುಚ್ಚಿದನು. ಯೆಹೋಶುವನು ಪ್ರಾರ್ಥಿಸಿ ಸೂರ್ಯನು ಮುಳುಗದಂತೆ ತಡೆದನು. ನಿಮ್ಮ ಪ್ರಾರ್ಥನೆ ಕೇಳಲ್ಪಡುವದು ಎಂಬ ನಂಬಿಕೆಯಿಂದ ಪ್ರಾರ್ಥಿಸಿರಿ.

ದೇವಜನರೇ, ಹೊಸ ಒಡಂಬಡಿಕೆಯ ಕಾಲದಲ್ಲಿ ನಿಮ್ಮ ಪ್ರಾರ್ಥನೆಯನ್ನು ಪವಿತ್ರಾತ್ಮನು ಬಹಳ ತ್ವರಿತವಾಗಿ ಪರಲೋಕಕ್ಕೆ ತೆಗೆದುಕೊಂಡು ಹೋಗುವನು. ಪರಿಶುದ್ಧಾತ್ಮನ ಮೂಲಕ ಮಾಡುವ ಪ್ರಾರ್ಥನೆಗೆ ದೇವರು ಉತ್ತರಿಸುವದು ಎಷ್ಟು ಭಾಗ್ಯಕರವಾದದ್ದು!

*ನೆನಪಿಗೆ : ದೇವರು ಒಬ್ಬನೇ, ದೇವರಿಗೂ ಮನುಷ್ಯರಿಗೂ ಮಧ್ಯಸ್ಥನು ಒಬ್ಬನೇ. ಆತನು ಮನುಷ್ಯನಾಗಿರುವ ಕ್ರಿಸ್ತಯೇಸುವೇ ಆತನು ಎಲ್ಲರ ವಿಮೋಚನಾರ್ಥವಾಗಿ ತನ್ನನ್ನು ಒಪ್ಪಿಸಿಬಿಟ್ಟನು (1 ತಿಮೊ. 2:5,6).*



ಮಾರ್ಚ್ 24

## ಪರಲೋಕದ ರೊಟ್ಟಿ!

ಬೆಳಿಗ್ಗೆ : ಯೆಹೋಶುವ 16,17,18
ಸಂಜೆ : ಲೂಕ. 2:1–20

"ದೇವರು ಕೊಡುವ ರೊಟ್ಟಿ ಯಾವದೆಂದರೆ ಪರಲೋಕದಿಂದ ಇಳಿದುಬಂದು ಲೋಕಕ್ಕೆ ಜೀವವನ್ನು ಉಂಟುಮಾಡುವಂಥದ್ದೇ" (ಯೋಹಾ. 6:33).

ಪರಲೋಕದಿಂದ ಇಳಿದು ಬಂದ ರೊಟ್ಟಿ ಜೀವಕೊಡುವರೊಟ್ಟಿಯಾಗಿದೆ. ಒಬ್ಬನು ಆ ರೊಟ್ಟಿಯನ್ನು ತಿನ್ನುವಾಗ ಅದು ಅವನ ಆತ್ಮ ಪ್ರಾಣ ಶರೀರವನ್ನು ತೃಪ್ತಿಪಡಿಸುವದು. ಹಸಿವನ್ನು ನೀಗಿಸುವದು ಮಾತ್ರವಲ್ಲ, ನಿತ್ಯ ಜೀವವನ್ನು ನೀಡುವದು.

ಯೇಸುಕ್ರಿಸ್ತನು ಜೀವಕೊಡುವ ರೊಟ್ಟಿ ನಾನೇ. ನಿಮ್ಮ ಹಿರಿಯರು ಅಡವಿಯಲ್ಲಿ ಮನ್ನಾ ತಿಂದರೂ ಸತ್ತುಹೋದರು. ಪರಲೋಕದಿಂದ ಇಳಿದು ಬರುವ ರೊಟ್ಟಿ ಎಂಥದ್ದೆಂದರೆ ಅದನ್ನು ತಿಂದವನು ಸಾಯುವದಿಲ್ಲ. ಪರಲೋಕದಿಂದ ಇಳಿದು ಬರುವ ಜೀವವುಳ್ಳ ರೊಟ್ಟಿಯು ನಾನೇ. ಈ ರೊಟ್ಟಿಯನ್ನು ಯಾವನಾದರೂ ತಿಂದರೆ ಅವನು ಸದಾಕಾಲ ಬದುಕುವನು. ನಾನು ಕೊಡುವ ರೊಟ್ಟಿ ನನ್ನ ಮಾಂಸವೇ. ಅದನ್ನು ಲೋಕದ ಜೀವಕ್ಕೋಸ್ಕರ ಕೊಡುವೆನು (ಯೋಹಾ. 6:48–51) ಎಂದು ಹೇಳಿದನು. ಜೀವರೊಟ್ಟಿ ಎಂಬ ಮಾತನ್ನು ಧ್ಯಾನಿಸಿ ನೋಡಿರಿ. ಈ ಹೆಸರು ಹೇಗೆ ಬಂತು? ಕ್ರಿಸ್ತನು ಕಲ್ವಾರಿಯಲ್ಲಿ ತನ್ನ ಜೀವವನ್ನು ಕೊಟ್ಟು ಸತ್ತಂತಿರುವ ಆತ್ಮವನ್ನು ಎಬ್ಬಿಸಿ ಆ ಆತ್ಮದಲ್ಲಿ ಜೀವವನ್ನು ತುಂಬುವದರ ಮೂಲಕ ಆತನೇ ಜೀವಕೊಡುವ ರೊಟ್ಟಿಯಾದನು. ನಾವು ಸದಾಕಾಲ ಆನಂದಿಸುವಂತೆ ನಿತ್ಯಜೀವವನ್ನು ನಮ್ಮೊಳಗೆ ತರುವದರಿಂದ ಆತನೇ ಜೀವರೊಟ್ಟಿ. ಜೀವವು ಇರಬೇಕೆಂತಲೂ ಅದು ಸಮೃದ್ಧಿಯಾಗಿ ಇರಬೇಕೆಂತಲೂ ಆತನು ಬಂದನು (ಯೋಹಾ.10:10). ನಮ್ಮ ಶರೀರವನ್ನು ನಾವು ಮೂರು ವೇಳೆಯೂ ಆಹಾರದಿಂದ ಪೋಷಿಸುತ್ತೇವೆ. ಹಾಗೆಯೇ ನಮ್ಮ ಆತ್ಮಕ್ಕೂ ಆಹಾರ ಅಗತ್ಯವಾದದ್ದು ದೇವರು ಕೊಡುವ ಜೀವರೊಟ್ಟಿ. ಅಂದರೆ ಕರ್ತನ ವಾಕ್ಯಗಳು ಆತ್ಮಕ್ಕೆ ಭೋಜನವಾಗಿದೆ. ಹಾಗೆ ದೇವರ ವಾಕ್ಯಗಳನ್ನು ಧ್ಯಾನಿಸುವಾಗ ಕ್ರಿಸ್ತನ ದೇಹವನ್ನೇ ಸೇವನೆ ಮಾಡುತ್ತೇವೆ. "ಆದಿಯಲ್ಲಿ ವಾಕ್ಯವಿತ್ತು. ಆ ವಾಕ್ಯವು ದೇವರ ಬಳಿಯಲ್ಲಿ ಇತ್ತು; ಆ ವಾಕ್ಯವು ದೇವರಾಗಿತ್ತು. ಆ ವಾಕ್ಯವೆಂಬುವನು ನರಾವತಾರ ಎತ್ತಿ ನಮ್ಮ ಮಧ್ಯದಲ್ಲಿ ವಾಸಮಾಡಿದನು" (ಯೋಹಾ. 1:1,14) ಎಂದು ಸತ್ಯವೇದ ಹೇಳುತ್ತದೆ.

ದೇವಜನರೇ, ಪರಲೋಕದಿಂದ ಇಳಿದುಬಂದ ಜೀವರೊಟ್ಟಿಯಾದ ಕ್ರಿಸ್ತನ ಬೋಧನೆಗಳು ನಿಮ್ಮ ಆತ್ಮ, ಪ್ರಾಣ, ಶರೀರಗಳಿಗೆ ಭೋಜನವಾಗಿರಲಿ.

*ನೆನಪಿಗೆ : "ನನಗೆ ದೊರೆತ ನಿನ್ನ ಮಾತುಗಳನ್ನು ಆಹಾರ ಮಾಡಿಕೊಂಡೆನು. ನಿನ್ನ ನುಡಿಗಳು ನನಗೆ ಹರ್ಷವೂ, ಹೃದಯಾನಂದವೂ ಆದವು" (ಯೆರೆಮೀಯ. 15:16).*

ಮಾರ್ಚ್ 25

## ನೂತನ ಆಕಾಶ, ನೂತನ ಭೂಮಿ!

ಬೆಳಿಗ್ಗೆ : ಯೆಹೋಶುವ 19,20,21
ಸಂಜೆ : ಲೂಕ. 2:21–52

"ನಾವು ದೇವರ ವಾಗ್ದಾನವನ್ನು ನಂಬಿ ನೂತನಾಕಾಶಮಂಡಲವನ್ನೂ, ನೂತನ ಭೂಮಂಡಲವನ್ನೂ ಎದುರುನೋಡುತ್ತಾ ಇದ್ದೇವೆ" (2 ಪೇತ್ರ. 3:13).

'ನೂತನ ಆಕಾಶ ನೂತನ ಭೂಮಿ' ಹೌದು ನಮ್ಮ ದೇವರು ಎಲ್ಲವನ್ನೂ ನೂತನಗೊಳಿಸಲು ಬಯಸುವನು. ಸಿಂಹಾಸನದ ಮೇಲೆ ಕೂತಿದ್ದವನು ಇಗೋ ಎಲ್ಲವನ್ನೂ ಹೊಸದು ಮಾಡುತ್ತೇನೆ ಎಂದು ವಾಗ್ದಾನ ಮಾಡಿರುವನು (ಪ್ರಕ. 21:5).

ಆದಾಮನ ಪಾಪದಿಂದ ಈ ಪ್ರಪಂಚ ಕಳಂಕಿತವಾಯಿತು. ಸೈತಾನನು ಆದಾಮನ ಬಳಿಯಿಂದ ಆಳ್ವಿಕೆಯನ್ನೂ, ಅಧಿಕಾರವನ್ನೂ ಕಿತ್ತುಕೊಂಡು ಲೋಕದ ಅಧಿಪತಿಯಾದನು. ಎರಡು ಸಾವಿರ ವರುಷಗಳ ಹಿಂದೆ ಕಲ್ವಾರಿ ಶಿಲುಬೆಯಲ್ಲಿ ಅವನ ತಲೆಯು ಜಜ್ಜಲ್ಪಟ್ಟರೂ ಇನ್ನೂ ಅವನು ನರಕಕ್ಕೆ ತಳ್ಳಲ್ಪಟ್ಟಿಲ್ಲ. ಇನ್ನೂ ಅವನು ಜನರನ್ನೂ, ದೇಶಗಳನ್ನೂ, ಪಟ್ಟಣಗಳನ್ನೂ, ಗ್ರಾಮಗಳನ್ನೂ, ಅಶುದ್ಧಗೊಳಿಸುತ್ತಲೇ ಇರುವನು. ಕರ್ತನಾದರೋ ನಮಗೆ ಈ ಪ್ರಪಂಚವನ್ನಲ್ಲ, ನೂತನ ಆಕಾಶಮಂಡಲವನ್ನೂ, ನೂತನ ಭೂಮಂಡಲವನ್ನೂ ವಾಗ್ದಾನ ಮಾಡಿರುವನು. ಸೈತಾನನ ಯಾವ ಬಲವೂ ಇಲ್ಲದ ನೂತನ ಆಕಾಶ ಅದು! ಪಾಪವೋ, ಶಾಪವೋ, ವ್ಯಾಧಿಯೋ, ಮರಣವೋ ಇಲ್ಲದ ನೂತನ ಪ್ರಪಂಚ ಅದು!" ಪಟ್ಟಣಕ್ಕೆ ಬೆಳಕನ್ನು ಕೊಡುವದಕ್ಕಾಗಿ ಸೂರ್ಯನಾಗಲಿ, ಚಂದ್ರನಾಗಲಿ ಬೇಕಾಗಿಲ್ಲ. ಅದಕ್ಕೆ ದೇವರ ಪ್ರಭಾವವೇ ಬೆಳಕನ್ನು ಕೊಟ್ಟಿತು; ಯಜ್ಞದ ಕುರಿಯಾದಾತನೇ ಅದರ ದೀಪವು. ಅದರ ಬೆಳಕಿನಿಂದ ಸರ್ವಜನಾಂಗದವರು ಸಂಚಾರ ಮಾಡುವರು. ಭೂರಾಜರು ತಮ್ಮ ವೈಭವವನ್ನು ಅಲ್ಲಿಗೆ ತರುವರು. ಅದರ ಬಾಗಿಲುಗಳನ್ನು ಹಗಲಿನಲ್ಲಿ ಮುಚ್ಚುವದೇ ಇಲ್ಲ. ರಾತ್ರಿಯಂತೂ ಅಲ್ಲಿಲ್ಲ", (ಪ್ರಕ. 21:23,24,25) ಎಂದು ಸತ್ಯವೇದ ಹೇಳುತ್ತದೆ. ಇದು ಎಷ್ಟು ಸುಂದರವಾದ ನೂತನ ಆಕಾಶ ನೂತನ ಭೂಮಿ! ಅದನ್ನು ಕೆಡಿಸಲು ಸೈತಾನನೋ, ಮೃಗವೋ, ಸುಳ್ಳು ಪ್ರವಾದಿಯೋ ಅಲ್ಲಿ ಇರುವದಿಲ್ಲ. ಸತ್ಯವೇದ ಹೇಳುತ್ತದೆ, "ಅವರನ್ನು ಮರುಳುಗೊಳಿಸಿದ ಸೈತಾನನು ಬೆಂಕಿ ಗಂಧಕಗಳು ಉರಿಯುವ ಕೆರೆಯಲ್ಲಿ ದೊಬ್ಬಲ್ಪಟ್ಟನು. ಅಲ್ಲಿ ಮೃಗವೂ ಸುಳ್ಳು ಪ್ರವಾದಿಯೂ ಕೂಡ ಇದ್ದಾರೆ. ಅವರು ಹಗಲಿರುಳು ಯುಗಯುಗಾಂತರಗಳಲ್ಲಿಯೂ ಯಾತನೆ ಪಡುತ್ತಿರುವರು" ಎಂದು (ಪ್ರಕ. 20:10).

ದೇವಜನರೇ, ನಿಮ್ಮ ಕೊರತೆಗಳನ್ನು ಕುರಿತು ಕಳವಳಗೊಳ್ಳದಿರಿ. ಕರ್ತನು ನಿಮಗಾಗಿ ಸೃಷ್ಟಿಸಲಿರುವ ನೂತನವಾದವುಗಳಿಗಾಗಿ ದೇವರನ್ನು ಸ್ತುತಿಸಿರಿ. ಈ ಪ್ರಪಂಚದಲ್ಲಿ ಸ್ವಲ್ಪಕಾಲ ಜೀವಿಸುತ್ತಿರುವಾಗ ನಿಮ್ಮನ್ನು ಪರಿಶುದ್ಧಪಡಿಸಿಕೊಂಡು ಪೂರ್ಣವಾದ ನಂಬಿಕೆಯಿಂದ ಪರಿಪೂರ್ಣತೆಯೆಡೆಗೆ ಮುಂದೆ ಸಾಗಿರಿ. ಕರ್ತನ ಬರೋಣ ಹತ್ತಿರವಾಗಿದೆ.

*ನೆನಪಿಗೆ : "ತರುವಾಯ, ನೂತನಾಕಾಶಮಂಡಲವನ್ನೂ, ನೂತನ ಭೂಮಂಡಲವನ್ನೂ ಕಂಡೆನು. ಮೊದಲಿದ್ದ ಆಕಾಶ ಮಂಡಲವೂ ಭೂಮಂಡಲವೂ ಇಲ್ಲದೆ ಹೋದವು. ಇನ್ನು ಸಮುದ್ರವೂ ಇಲ್ಲ" (ಪ್ರಕ. 21:1).*



ಮಾರ್ಚ್ 26

## ಆಕಾಶದ ಕರೆ!

ಬೆಳಿಗ್ಗೆ : ಯೆಹೋಶುವ 22,23,24
ಸಂಜೆ : ಲೂಕ. 3

"ನನ್ನ ಸಂಗಡ ತುತೂರಿಯು ಮಾತಾಡುತ್ತದೋ ಎಂಬಂತೆ ನಾನು ಮೊದಲು ಕೇಳಿದ್ದ ವಾಣಿಯು ಕೇಳಿಸಿತು. ಇಲ್ಲಿಗೆ ಏರಿ ಬಾ; ಮುಂದೆ ಆಗಬೇಕಾದವುಗಳನ್ನು ನಿನಗೆ ತೋರಿಸುವೆನು ಎಂದು ಹೇಳಿತು" (ಪ್ರಕ. 4:1).

ಯೋಹಾನನು ಪತ್ಮೋಸ್ ದ್ವೀಪದಲ್ಲಿ ಒಂಟಿಯಾಗಿ ಸೆರೆಯಲ್ಲಿದ್ದಾಗ, ಆಕಾಶದಿಂದ ಬಂದ ಇಲ್ಲಿಗೆ ಏರಿಬಾ; ಮುಂದೆ ಆಗಬೇಕಾದವುಗಳನ್ನು ನಿನಗೆ ತೋರಿಸುವೆನು ಎಂಬ ಶಬ್ದವನ್ನು ಕೇಳಿದನು. ದೇವಜನರೇ, ಪರಲೋಕದಿಂದ ಬರುವ ದೇವರ ಶಬ್ದವನ್ನು ಕೇಳಲು ನಿಮ್ಮ ಕಿವಿಗಳು ಸದಾ ತೆರೆದಿರಲಿ.

ಹನೋಕನು ದೇವರ ಶಬ್ದವನ್ನು ಕೇಳಿ ದೇವರೊಂದಿಗೆ ಸಂಚರಿಸಿದನು (ಆದಿ. 5:24). ನೋಹನು ದೇವರ ಶಬ್ದಕ್ಕೆ ಕಿವಿಗೊಟ್ಟು ನಾವೆಯನ್ನು ಕಟ್ಟಿ ತನ್ನ ಕುಟುಂಬವನ್ನು ಜಲಪ್ರಳಯದಿಂದ ಕಾಪಾಡಿದನು. ಅಬ್ರಹಾಮನು ಸ್ನೇಹಿತನಂತೆ, ದೇವರ ಶಬ್ದಕ್ಕೆ ಕಿವಿಗೊಟ್ಟು ಹಾಲೂ ಜೇನೂ ಹರಿಯುವ ಕಾನಾನನ್ನು ಸ್ವಾಸ್ತ್ಯವಗಿ ಪಡೆದನು. ಇನ್ನು ಮುಂದೆ ದೇವಮಕ್ಕಳ ಕಿವಿಗಳಲ್ಲಿ ಕೇಳಿಸುವ ಶಬ್ದ 'ಏರಿಬಾ' ಎಂಬ ಶಬ್ದವೇ. ಕರ್ತನ ಬರುವಿಕೆ ಬಹು ಸಮೀಪವಾಗಿರುವದು. ಕರ್ತನು ತಾನೇ ಆಜ್ಞಾಘೋಷದೊಡನೆಯೂ, ಪ್ರಧಾನ ದೂತನ ಶಬ್ದದೊಡನೆಯೂ, ತುತೂರಿಯ ಧ್ವನಿಯೊಡನೆಯೂ ಆಕಾಶದಿಂದ ಇಳಿದುಬರುವನು. ಆಗ ಕ್ರಿಸ್ತನಲ್ಲಿರುವ ಸತ್ತವರು ಮೊದಲು ಎದ್ದು ಬರುವರು. ಆಮೇಲೆ ಜೀವದಿಂದುಳಿದ ನಾವು ಅಂತರಿಕ್ಷದಲ್ಲಿ ಕರ್ತನನ್ನು ಎದುರುಗೊಳ್ಳುವದಕ್ಕಾಗಿ ಅವರೊಡನೆ ಮೇಘ ವಾಹನಾರೂಢರಾಗಿ ಪಕ್ಕನೆ ಒಯ್ಯಲ್ಪಡುವೆವು (1 ಥೆಸ. 4:16,17) ಎಂದು ಸತ್ಯವೇದ ಹೇಳುತ್ತದೆ. ಧರ್ಮಸತ್ಯಗಳನ್ನು ಕೈಕೊಳ್ಳುವ ಜನಾಂಗವು ಪ್ರವೇಶಿಸುವಂತೆ ಪರಲೋಕದ ಬಾಗಿಲುಗಳೆಲ್ಲಾ ತೆರೆಯಲ್ಪಡುತ್ತದೆ (ಯೆಶಾ. 26:2). ಪರಲೋಕಕ್ಕೆ ಏರಿಹೋದ ಕ್ರಿಸ್ತಯೇಸು ನಮಗಾಗಿ ಪರಲೋಕದ ಬಾಗಿಲುಗಳನ್ನು ತೆರೆದಿಟ್ಟು 'ಏರಿಬಾ' ಎಂದು ಕರೆಯುವನು. "ನಾನೇ ಆ ಬಾಗಿಲು, ನನ್ನ ಮುಖಾಂತರವಾಗಿ ಯಾವನಾದರೂ ಒಳಗೆ ಹೋದರೆ ಸುರಕ್ಷಿತವಾಗಿದ್ದು ಒಳಗೆ ಹೋಗುವನು. ಹೊರಗೆ ಬರುವನು. ಮೇವನ್ನು ಕಂಡುಕೊಳ್ಳುವನು" (ಯೋಹಾ. 10:9) ಎಂದು ಕರ್ತನು ವಾಗ್ದಾನ ಮಾಡಿರುವನು.

ದೇವಜನರೇ, ನಿಮ್ಮನ್ನು ತಗ್ಗಿಸಿ "ಕರ್ತನೇ ನನ್ನೊಂದಿಗೆ ಮಾತನಾಡು" ಎಂದು ಕೇಳಿರಿ. ನಿಶ್ಚಯವಾಗಿ ಆತನು ಮಾತನಾಡುವನು.

*ನೆನಪಿಗೆ : "ಪುರಾತನ ಕಾಲದಲ್ಲಿ ನಮ್ಮ ಪಿತೃಗಳ ಸಂಗಡ ಪ್ರವಾದಿಗಳ ಬಾಯಿಂದ ಭಾಗ ಭಾಗವಾಗಿಯೂ ವಿಧವಿಧವಾಗಿಯೂ ಮಾತಾಡಿದ ದೇವರು, ಈ ಅಂತ್ಯದಿನಗಳಲ್ಲಿ ನಮ್ಮ ಸಂಗಡ ಮಗನ ಮುಖಾಂತರ ಮಾತಾಡಿದ್ದಾನೆ" (ಇಬ್ರಿ. 1:1,2).*

ಮಾರ್ಚ್ 27

## ಪರಲೋಕದ ಸಿಂಹಾಸನ!

ಬೆಳಿಗ್ಗೆ : ನ್ಯಾಯ. 1,2,3
ಸಂಜೆ : ಲೂಕ. 4:1–30

"ಇಗೋ, ಪರಲೋಕದಲ್ಲಿ ಒಂದು ಸಿಂಹಾಸನವಿತ್ತು; ಸಿಂಹಾಸನದ ಮೇಲೆ ಒಬ್ಬನು ಕುಳಿತಿದ್ದನು. ಕುಳಿತಿದ್ದವನು ಕಣ್ಣಿಗೆ ಸೂರ್ಯಕಾಂತ ಪದ್ಮರಾಗ ಮಣಿಗಳಂತೆ ಕಾಣುತ್ತಿದ್ದನು" (ಪ್ರಕ. 4:2,3).

ಸಿಂಹಾಸನ ಎಂಬುದು ಶತ್ರುವನ್ನು ನಿರ್ಮೂಲ ಮಾಡಿ ದೇಶವನ್ನು ರಕ್ಷಿಸಿ ಜನರನ್ನು ಆಳುವ ಅಧಿಕಾರವುಳ್ಳ ಅರಸನು ಕುಳಿತುಕೊಳ್ಳುವ ಸ್ಥಳ. ಈ ಭೂಲೋಕದಲ್ಲಿ ಅನೇಕ ಸಿಂಹಾಸನಗಳಿದ್ದರೂ ಅಪೊ. ಯೋಹಾನನು ತನಗಾದ ದರ್ಶನದಲ್ಲಿ ಕಂಡಂಥಹ ಸಿಂಹಾಸನ ಪರಲೋಕದ ಅರಸನೂ ರಾಜಾಧಿರಾಜನೂ ಆದ ಕರ್ತನ ಸಿಂಹಾಸನವಾಗಿತ್ತು. ಅಲ್ಲಿ ತಂದೆಯಾದ ದೇವರು ಗಂಭೀರವಾಗಿ ಆಸೀನನಾಗಿದ್ದನು. ತಂದೆಯ ಬಲ ಪಾರ್ಶ್ವದಲ್ಲಿ ಜಯಗಳಿಸಿದ ಕುಮಾರನಾದ ಕ್ರಿಸ್ತನು ಆಸೀನನಾಗಿದ್ದನು (ಪ್ರಕ. 3:21). ಆತನೇ ಯೂದ ಕುಲಸಿಂಹ ಎಂದು ಕರೆಯಲ್ಪಟ್ಟಿರುವನು (ಪ್ರಕ. 5:5). ಆ ಸಿಂಹಾಸನ ಒಂದು ಕಡೆ ಕೃಪಾಸನವಾಗಿರುವದು, ಮತ್ತೊಂದೆಡೆ ನ್ಯಾಯಾಸನವಾಗಿರುವದು.

ಸರ್ವಲೋಕಗಳಿಗೂ ಅದು ಸಿಂಹಾಸನವಾಗಿದ್ದರೂ, ದೇವಮಕ್ಕಳಿಗೆ ಅದು ಕೃಪಾಸನವಾಗಿರುವದು. ದೇವರ ಕೃಪೆ ಅಲ್ಲಿಂದ ಪ್ರಕಟಗೊಳ್ಳುವದು. ಅಲ್ಲಿ ದೇವರ ರಹಸ್ಯಗಳೂ, ದೇವರ ಕನಿಕರವೂ ನಿಮಗೆ ದೊರೆಯುವದು. ಭೂಮ್ಯಾಕಾಶಗಳನ್ನು ಉಂಟುಮಾಡಿದ ಕರ್ತನ ಬಳಿಯಿಂದ ನಿಶ್ಚಯವಾಗಿ ನಿಮಗೆ ಸಹಾಯ ದೊರೆಯುವದು. ಆ ಕೃಪಾಸನದಿಂದ ಯೇಸುಕ್ರಿಸ್ತನು ಮಹಾಯಾಜಕನಾಗಿ ನಿಮಗೋಸ್ಕರ ತಂದೆಯ ಬಳಿ ವಿಜ್ಞಾಪನೆಗಳನ್ನೂ ಮನವೆಗಳನ್ನೂ ಸಲ್ಲಿಸುತ್ತಿರುವನು. ನಾವು ಕರುಣೆಯನ್ನು ಹೊಂದುವಂತೆಯೂ ಆತನ ದಯೆಯಿಂದ ಸಮಯೋಚಿತವಾದ ಸಹಾಯವು ನಮಗೆ ದೊರೆಯುವಂತೆಯೂ ಧೈರ್ಯದಿಂದ ಕೃಪಾಸನದ ಮುಂದೆ ಬರೋಣ (ಇಬ್ರಿ. 4:16) ಎಂದು ಸತ್ಯವೇದ ಬೋಧಿಸುತ್ತದೆ. ನೀವು ಈ ಭೂಮಿಯಲ್ಲಿ ಜೀವಿಸಿರುವಷ್ಟು ಕಾಲವೂ ನಿಮ್ಮ ಮೇಲೆ ಆತನ ಕೃಪೆಯು ಸುರಿಸಲ್ಪಡುತ್ತಲೇ ಇರುವದು. ಅಷ್ಟು ಮಾತ್ರವಲ್ಲ, ನಾನು ಜಯಶಾಲಿಯಾಗಿ ನನ್ನ ತಂದೆಯೊಡನೆ ಸಿಂಹಾಸನದಲ್ಲಿ ಕುಳಿತುಕೊಂಡೆನು. ಹಾಗೆಯೇ ಜಯಹೊಂದುವವರನ್ನು ನನ್ನೊಡನೆ ಸಿಂಹಾಸನದಲ್ಲಿ ಕುಳಿತುಕೊಳ್ಳುವಂತೆ ಮಾಡುವೆನು ಎಂಬುದು ಕರ್ತನ ವಾಗ್ದಾನವಾಗಿದೆ (ಪ್ರಕ. 3:21).

ದೇವಜನರೇ, ನೀವು ಯಾವ ಪರಿಸ್ಥಿತಿಯಲ್ಲಿಯೇ ಇದ್ದರೂ ಕಳವಳಗೊಳ್ಳದಿರಿ, ಧೈರ್ಯಗೆಡದಿರಿ. ರಕ್ಷಕನಾದ ಯೇಸುಕ್ರಿಸ್ತನನ್ನು ಅಂಗೀಕರಿಸಿಕೊಂಡು ಆತನ ಬಳಿಗೆ ಬರುವಿರಾದರೆ ಕರ್ತನ ಕೃಪಾಸನದಿಂದ ಆತನ ಕೃಪೆಯು ನಿಮಗೆ ದೊರೆಯುವದು. ನಿಮಗಾಗಿ ತಂದೆಯಲ್ಲಿ ಹಗಲಿರುಳು ವಿಜ್ಞಾಪನೆಗಳನ್ನು ಮಾಡುತ್ತಿರುವನಲ್ಲವೇ!

*ನೆನಪಿಗೆ : "ಕ್ರಿಸ್ತಯೇಸುವಿನಲ್ಲಿರುವ ನಮ್ಮನ್ನು ಆತನೊಂದಿಗೆ ಎಬ್ಬಿಸಿ ಪರಲೋಕದಲ್ಲಿ ಆತನೊಂದಿಗೆ ಕೂಡ್ರಿಸಿದ್ದಾನೆ" (ಎಫೆ. 2:7).*



ಮಾರ್ಚ್ 28

## ಆಕಾಶದ ಸೂಚನೆಗಳು!

ಬೆಳಿಗ್ಗೆ : ನ್ಯಾಯ. 4,5,6
ಸಂಜೆ : ಲೂಕ. 4:31–44

"ಪರಲೋಕದಲ್ಲಿ (ಆಕಾಶ) ಒಂದು ಮಹಾ ಲಕ್ಷಣವು ಕಾಣಿಸಿತು" (ಪ್ರಕ. 12:1).

ಸತ್ಯವೇದ ಅದ್ಭುತಗಳಿಂದಲೂ, ಸೂಚನೆಗಳಿಂದಲೂ ತುಂಬಿರುವದು. ಕರ್ತನು ಸೂರ್ಯನನ್ನು ಚಂದ್ರನನ್ನು, ನಕ್ಷತ್ರಗಳನ್ನೂ ಸೃಷ್ಟಿಸಿದಾಗ, ಅವು ಗುರುತುಗಳಾಗಿದ್ದು ಸಮಯಗಳನ್ನೂ, ದಿನ ಸಂವತ್ಸರಗಳನ್ನೂ ತೋರಿಸಲು ಇರಲಿ" ಎಂದು ಹೇಳಿದನು (ಆದಿ. 1:14). ಹಾಗೆಯೇ ಕರ್ತನು ಮುಗಿಲು ಬಿಲ್ಲನ್ನು ಸೃಷ್ಟಿಸಿದಾಗ ಇದು ನನಗೂ ಭೂಪ್ರಾಣಿಗಳಿಗೂ ಆದ ಒಂಡಬಡಿಕೆಗೆ ಗುರುತಾಗಿರಲಿ" ಅಂದನು (ಆದಿ. 9:13).

ಒಬ್ಬ ಯೌವನಸ್ಥನು ತಪ್ಪು ಮಾಡಿದಾಗ ಅವನ ತಾಯಿ ಖಂಡಿಸಿದ್ದರಿಂದ ಅವನು ಮನೆಯನ್ನು ಬಿಟ್ಟು ಓಡಿಹೋದನು. ಅವನು ಮುಂದೆ ಒಬ್ಬ ಶ್ರೀಮಂತನಾದನು. ಹಲವು ವರ್ಷಗಳ ನಂತರ ಒಂದು ಬೀದಿ ಪ್ರಸಂಗದ ಮೂಲಕ ರಕ್ಷಿಸಲ್ಪಟ್ಟನು. ಕರ್ತನು ಅವನ ಅಂತರ್ಯದಲ್ಲಿ ತಾಯಿಯ ಕುರಿತಾಗಿ ಮಾತನಾಡಿದನು. ಆಗ ಅವನು ತನ್ನ ಪ್ರೀತಿಯ ತಾಯಿಗೆ ಒಂದು ಕಾಗದವನ್ನು ಬರೆದನು. ಅಮ್ಮ ದಯಮಾಡಿ ನನ್ನನ್ನು ಕ್ಷಮಿಸು. ಕರ್ತನು ನನ್ನನ್ನು ಆಶೀರ್ವದಿಸಿ ರಕ್ಷಿಸಿರುವನು. ಮನೆಗೆ ಬಂದು ನಿಮ್ಮನ್ನು ನೋಡಲು ಬಯಸುತ್ತೇನೆ. ನಾನು ಇಂಥ ದಿನ ರೈಲಿನಲ್ಲಿ ಬರುವೆನು. ನೀವು ಕ್ಷಮಿಸಿರುವಿರಾದರೆ, ಊರಿನ ಹೊರಗೆ ಇರುವ ಹುಣಸೆ ಮರದ ಕೊಂಬೆಗೆ ಒಂದು ಬಿಳಿಯ ಬಟ್ಟೆ ಕಟ್ಟಿರು. ಅದು ಗುರುತಾಗಿರುವದು ಎಂದು ಬರೆದಿದ್ದನು. ಹಾಗೆಯೇ, ಹೇಳಿದ ದಿನ ಊರಿಗೆ ಬಂದು ಆ ಮರದ ಬಳಿ ಓಡಿದ ತಾಯಿ, ಒಂದು ಬಿಳಿಯ ವಸ್ತ್ರದ ತುಂಡನ್ನಲ್ಲ  ಅನೇಕ ಬಿಳಿ ವಸ್ತ್ರದ ತುಂಡುಗಳನ್ನು ಕಟ್ಟಿರುವದನ್ನು ನೋಡಿ ಅವನ ಕಣ್ಣುಗಳು ತುಂಬಿ ಬಂದವು. ತಾಯಿಯ ಹೃದಯ ಮಗನು ಕಣ್ಣಿಗೆ ಒಂದು ವಸ್ತ್ರ ಕಾಣದೇ ಹೋದರೂ ಇನ್ನೊಂದನ್ನಾದರೂ ನೋಡಿಯಾನು ಎಂದು ಕಾತರಿಸಿತು. ಅದೇ ರೀತಿ ಇಂದು ಪ್ರಪಂಚದಾದ್ಯಂತ ಕರ್ತನ ಬರುವಿಕೆಯ ಸೂಚನೆಯಂತೆ ಅನೇಕ ಗುರುತುಗಳು ಕಂಡು ಬರುತ್ತಿರುವದು. ಯಾವುದಾದರೂ ಒಂದು ಸೂಚನೆಯನ್ನು ಗುರುತಿಸಿ ತನ್ನ ಬರುವಿಕೆಗಾಗಿ ತನ್ನ ಮಕ್ಕಳು ತಮ್ಮನ್ನು ಸಿದ್ಧಪಡಿಸಿಕೊಳ್ಳಲಾರಿರಾ? ಎಂದು ಕರ್ತನು ಕಾತರದಿಂದ ಕಾಯುತ್ತಿರುವನು.

ದೇವಜನರೇ, ಸಿದ್ಧಪಡಿಸಿಕೊಂಡವರು ಆತನೊಂದಿಗೆ ಮಧ್ಯಾಕಾಶಕ್ಕೆ ಎತ್ತಲ್ಪಡುವರು. ಅಂದು ಕರ್ತನ ಕುಟುಂಬ ಒಂದಾಗಿ ಸೇರಿಸಲ್ಪಡುವದು.

*ನೆನಪಿಗೆ : "ಯಾವನೂ ತನ್ನಷ್ಟಕ್ಕೆ ತಾನೇ ಈ ಗೌರವವನ್ನು ವಹಿಸಿಕೊಳ್ಳದೆ, ದೇವರಿಂದ ನೇಮಿಸಲ್ಪಟ್ಟು ವಹಿಸಿಕೊಳ್ಳುತ್ತಾನೆ" (ಇಬ್ರಿ. 5:4).*

ಮಾರ್ಚ್
29

## ಆಕಾಶದಲ್ಲಿ ಯುದ್ಧ!

ಬೆಳಿಗ್ಗೆ : ನ್ಯಾಯ. 7,8
ಸಂಜೆ : ಲೂಕ. 5:1–16

“ಪರಲೋಕದಲ್ಲಿ (ಆಕಾಶ) ಯುದ್ಧ ನಡೆಯಿತು. ಮಿಕಾಯೇಲನೂ ಅವನ ದೂತರೂ ಘಟಸರ್ಪನ ಮೇಲೆ ಯುದ್ಧ ಮಾಡುವದಕ್ಕೆ ಹೊರಟರು. ಘಟಸರ್ಪನೂ ಅವನ ದೂತರೂ ಯುದ್ಧ ಮಾಡಿ ಸೋತುಹೋದರು” (ಪ್ರಕ. 12:7).

ಆಕಾಶದಲ್ಲಿ ಯುದ್ಧ ನಡೆಯಿತು ಎಂದು ಮೇಲಿನ ವಾಕ್ಯದಲ್ಲಿ ಓದುತ್ತೇವೆ. ಹಿಂದೆ ಯುದ್ಧಗಳು ಭೂಮಿಯ ಮೇಲೆ ನಡೆಯುತ್ತಿದ್ದವು. ಅಶ್ವಪಡೆ, ಆನೆಪಡೆ, ಕಾಲ್ಪಡೆ ಹೀಗೆ ಅನೇಕ ರೀತಿಯ ಸೈನ್ಯಗಳು ಯುದ್ಧ ನಡೆಸುತ್ತಿದ್ದವು. ಕಾಲಾನಂತರ ವಿಮಾನದ ಮೂಲಕ, ರಾಕೆಟ್‌ನ ಮೂಲಕ ಯುದ್ಧಗಳು ಪ್ರಾರಂಭವಾದವು. ಈಗೆಲ್ಲಾ ಅಣ್ವಸ್ತ್ರಗಳ ಬಲಾಬಲಗಳ ಮೇಲೆ ಜಯ ನಿರ್ಣಯಿಸಲ್ಪಡುವದು.

ಮೇಲಿನ ವಾಕ್ಯದಲ್ಲಿ ಹೇಳುವ ಆಕಾಶದಲ್ಲಿನ ಯುದ್ಧವು ಈ ಪ್ರಪಂಚದ ರೀತಿಯ ಯುದ್ಧವಲ್ಲ, ಇದು ಆತ್ಮೀಕ ಪ್ರಪಂಚದಲ್ಲಿ ಕಣ್ಣಿಗೆ ಕಾಣಲಾಗದ ಒಂದು ಯುದ್ಧ. ಆ ಯುದ್ಧದಲ್ಲಿ ಒಂದು ಕಡೆ ಘಟಸರ್ಪನಾದ ಸೈತಾನನು ತನ್ನ ಸೈನ್ಯವನ್ನು ಆಕಾಶಮಂಡಲದಲ್ಲಿ ನಿಲ್ಲಿಸಿರುವನು. ಅದೇ ವೇಳೆಯಲ್ಲಿ ಸೈತಾನ ಬಲವನ್ನು ಎದುರಿಸಲು ಕರ್ತನ ಸೈನ್ಯದಲ್ಲಿ ಪ್ರಧಾನ ದೇವದೂತನಾದ ಮಿಕಾಯೇಲನ ನಾಯಕತ್ವದಲ್ಲಿ ಅನೇಕಾನೇಕ ದೇವದೂತರು ಇರುವರು. ಕರ್ತನು ಸೇನೆಗಳ ಅಧಿಪತಿಯಾಗಿರುವನು (ಯೆಹೋ. 5:14). ಮಿಕಾಯೇಲನೂ ಅವನ ದೂತರು ಯುದ್ಧ ಮಾಡಲು ಘಟಸರ್ಪನಾದ ಸೈತಾನನೂ ಅವರ ದೂತರೂ ಸೋತುಹೋದರು ಮತ್ತು ಪರಲೋಕದೊಳಗೆ ಅವರ ಸ್ಥಾನ ತಪ್ಪಿಹೋಯಿತು (ಪ್ರಕ. 12:7–8) ಎಂದು ಅಪೊ. ಯೋಹಾನನು ತನ್ನ ದರ್ಶನದಲ್ಲಿ ಕಂಡದ್ದನ್ನು ಬರೆಯುತ್ತಾನೆ.

ದೇವಜನರೇ, ನಿಮ್ಮ ವಿರೋಧವಾಗಿ ಹಲವು ಸಮಸ್ಯೆಗಳನ್ನೂ, ಹೋರಾಟಗಳನ್ನೂ, ಶೋಧನೆಗಳನ್ನೂ ಸೈತಾನನು ಅವನಿಗೆ ಸೇರಿದ ಅಶುದ್ಧಾತ್ಮಗಳೂ ತಂದು ಹಾಕಬಹುದು. ನೀವು ಮೊಳಕಾಲೂರಿ ಪ್ರಾರ್ಥಿಸುವಾಗೆಲ್ಲಾ ಆಕಾಶದಲ್ಲಿ ಯುದ್ಧ ಉಂಟಾಗುವದು. ಆಕಾಶಮಂಡಲದ ದುರಾತ್ಮದ ಸೇನೆಗಳೊಂದಿಗೆ ನಿಮಗೆ ಹೋರಾಟ ಉಂಟು (ಎಫೆ. 6:12) ಎಂದು ಸತ್ಯವೇದ ಹೇಳುತ್ತದೆ. ಪ್ರಿಯರೇ ಭಯಪಡಬೇಡಿರಿ. ಕರ್ತನು ಸೈತಾನನ ತಲೆಯನ್ನು ಜಜ್ಜಿ, ನಿಮಗೆ ಜಯವನ್ನು ವಾಗ್ದಾನ ಮಾಡಿರುವನು. ಕುರಿಮರಿಯಾದಾತನ ರಕ್ತದಿಂದಲೂ ಸಾಕ್ಷಿಯ ವಚನಗಳಿಂದಲೂ ಅವನನ್ನು ಜಯಸಿರಿ.

*ನೆನಪಿಗೆ : “ಆತನು ಅವರಿಗೆ ಸೈತಾನನು ಸಿಡಿಲಿನಂತೆ ಆಕಾಶದಿಂದ ಬೀಳುವದನ್ನು ಕಂಡೆನು ನೋಡಿರಿ. ಹಾವುಗಳನ್ನೂ, ಚೇಳುಗಳನ್ನೂ, ವೈರಿಗಳ ಸಮಸ್ತ ಬಲವನ್ನೂ ತುಳಿಯುವ ಅಧಿಕಾರ ನಿಮಗೆ ಕೊಟ್ಟಿದ್ದೇನೆ” (ಲೂಕ. 10:18,19).*



ಮಾರ್ಚ್
30

## ಮಹಾ ಶಬ್ದ!

ಬೆಳಿಗ್ಗೆ : ನ್ಯಾಯ. 9,10
ಸಂಜೆ : ಲೂಕ. 5:17–39

ಆಗ ಪರಲೋಕದಿಂದ ಒಂದು ಮಹಾ ಶಬ್ದವನ್ನು ಕೇಳಿದೆನು. ಅದು ಈಗ ಜಯವೂ, ಶಕ್ತಿಯೂ, ರಾಜ್ಯವೂ ನಮ್ಮ ದೇವರಿಗೆ ಉಂಟಾಯಿತು. ಆತನು ಅಭಿಷೇಕಿಸಿದವನ ಅಧಿಕಾರವೂ ಈಗ ಸ್ಥಾಪಿತವಾಯಿತು (ಪ್ರಕ. 12:10).

ಈ ತಿಂಗಳಿನಲ್ಲಿ ಆಕಾಶದಿಂದ ಅಂದರೆ ಪರಲೋಕದಿಂದ ಬರುವಂಥ ವಾಣಿಗಳನ್ನೂ, ಎಚ್ಚರಿಕೆಗಳನ್ನೂ ಕುರಿತು ಧ್ಯಾನಿಸುತ್ತಾ ಬಂದಿರುವೆವು. ಪರಲೋಕದಿಂದ ಬಂದ ಎಲ್ಲಾ ಶಬ್ದಗಳಿಗಿಂತ ದೊಡ್ಡ ಶಬ್ದವನ್ನು ಇಲ್ಲಿ ನಾವು ಕಾಣುತ್ತೇವೆ. ಈ ಮಹಾ ಶಬ್ದ ನಾಲ್ಕು ಕಾರ್ಯಗಳನ್ನು ವಾಗ್ದಾನಗಳನ್ನು ನಮಗೆ ನೀಡುವದು. 1. ರಕ್ಷಣೆ, 2. ಬಲ, 3. ದೇವರ ರಾಜ್ಯ, 4. ಕ್ರಿಸ್ತನ ಅಧಿಕಾರ. ಇಷ್ಟಕ್ಕೆ ನಿಲ್ಲಲಿಲ್ಲ, ಪರಲೋಕದವರೇ ಅದರಲ್ಲಿ ವಾಸಿಸುವವರೇ ಹರ್ಷಗೊಳ್ಳಿರಿ ಎಂದು ಹೇಳುವದು. ಹೌದು ರಕ್ಷಣೆಯಲ್ಲಿ ಒಂದು ಸಂತೋಷವಿದೆ. ಬಲದಲ್ಲಿ ಒಂದು ಉಲ್ಲಾಸವುಂಟು. ದೇವರ ರಾಜ್ಯದಲ್ಲಿ ಒಂದು ಉಲ್ಲಾಸವುಂಟು. ಕ್ರಿಸ್ತನನ್ನು ಸ್ತುತಿಸುವದರಲ್ಲಿ ಒಂದು ಉಲ್ಲಾಸವುಂಟು.

‘ಉಲ್ಲಾಸ’ ಎಂಬ ಪದಕ್ಕೆ ಆಳವಾದ ಅರ್ಥವುಂಟು. ಮಾತ್ರವಲ್ಲ. ಅದು ಶ್ರೇಷ್ಠವಾದದ್ದು. ಪ್ರಪಂಚದವರು ಸಂತೋಷ, ಆನಂದ ಎಂದೆಲ್ಲಾ ಹೇಳುವರು. ಇದೆಲ್ಲದಕ್ಕಿಂತಲೂ ಮಹಿಮೆಯಾದ ಅನುಭವವೇ ‘ಉಲ್ಲಾಸ’ವಾಗಿರುವದು. ಅದರಲ್ಲಿಯೂ ‘ಆತ್ಮದಲ್ಲಿನ ಉಲ್ಲಾಸ’ ಬಹಳ ವಿಶೇಷವಾದದ್ದು! ಕ್ರಿಸ್ತನ ತಾಯಿಯಾದ ಮರಿಯಳು ನನ್ನ ಆತ್ಮವು ನನ್ನ ರಕ್ಷಕನಾದ ದೇವರ ವಿಷಯದಲ್ಲಿ ಉಲ್ಲಾಸಗೊಂಡಿದೆ (ಲೂಕ. 1:46) ಎಂದು ಹೇಳಿದಳು. ಇಂದು ನೀವು ಉಲ್ಲಾಸಿಸಲು ಸಾವಿರಾರು ಕಾರಣಗಳಿರುವದು. ಕ್ರಿಸ್ತನು ರಕ್ಷಕನಾಗಿ ನಿಮ್ಮ ಅಂತರ್ಯದಲ್ಲಿ ನೆಲೆಸಿರುವ ಆ ರಕ್ಷಣೆಯ ಸಂತೋಷವನ್ನು ನೆನಸಿ ನೆನಸಿ ಉಲ್ಲಾಸಪಡಿರಿ. ಆತನು ಪವಿತ್ರಾತ್ಮನ ಬಲವನ್ನು ನಿಮಗೆ ಕೊಟ್ಟಿರುವನು. ಅಶುದ್ಧಾತ್ಮಗಳನ್ನು ಜಯಿಸುವ ಬಲ, ಸರ್ಪಗಳನ್ನು, ಚೇಳುಗಳನ್ನು ತುಳಿಯುವ ಅಧಿಕಾರ ನಿಮಗೆ ಇರುವದರಿಂದ ಉಲ್ಲಾಸಿಸಿ. ದೇವರಾಜ್ಯವನ್ನು ನೆನಸಿ ಉಲ್ಲಾಸಿಸಿರಿ. ನೀವು ಆ ಬೆಳಕಿನ ರಾಜ್ಯವನ್ನು ಪ್ರವೇಶಿಸುವಾಗ ನಿತ್ಯ ಉಲ್ಲಾಸ ನಿಮಗುಂಟಾಗುವದು.

ದೇವಜನರೇ, ನಿಮ್ಮ ಚಿಂತಾಭಾರವನ್ನೆಲ್ಲಾ ಕರ್ತನ ಮೇಲೆ ಹಾಕಿ, ಯಾವಾಗ್ಯೂ, ಆತನಲ್ಲಿ ಉಲ್ಲಾಸಪಡಿರಿ. ಕರ್ತನಲ್ಲಿ ಸದಾ ಉಲ್ಲಾಸದಿಂದಿದ್ದ ದಾವೀದನು ಹೀಗೆ ಹೇಳುತ್ತಾನೆ. ನಿನ್ನ ಮೊರೆಹೊಕ್ಕವರೆಲ್ಲರೂ ಸಂತೋಷಪಡುವರು...ನಿನ್ನ ನಾಮವನ್ನು ಪ್ರೀತಿಸುವರು. ನಿನ್ನಲ್ಲಿ ಉಲ್ಲಾಸ ಪಡುವರು ಎಂದು (ಕೀರ್ತ. 5:12).

*ನೆನಪಿಗೆ : “ಪರಾತ್ಪರನೇ, ನಿನ್ನಲ್ಲಿ ನಾನು ಸಂತೋಷಿಸಿ ಉತ್ಸಾಹಪಡುವೆನು. ನಿನ್ನ ಹೆಸರನ್ನು ಕೀರ್ತಿಸುವೆನು” (ಕೀರ್ತನೆ. 9:2).*